ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಅಕ್ಟೋಬರ್ 6 ಸೋಮವಾರ 2025
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 169 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಹಿಂದೂ ಧರ್ಮ ಒಡೆಯುವ ಷಡ್ಯಂತ್ರ ತಡೆಯಲು ಜನರು ಎಚ್ಚೆತ್ತುಕೊಳ್ಳಬೇಕು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಲಹೆ

- ವೀರಶೈವರಲ್ಲಿ ಕೂಡ ಒಡಕು ಮೂಡಿಸುವ ಯತ್ನ ನಡೆಯುತ್ತಿದೆ
- ನಮ್ಮ ಸಮುದಾಯದ ಕೆಲವು ಮನೆ ಮುರುಕರು ಭಾಗಿಯಾಗಿದ್ದಾರೆ
- ಕರ್ನಾಟಕ ಶ್ರೀಮಂತಗೊಳ್ಳಲು ಮಠಗಳ ಕೊಡುಗೆ ಅಪಾರ


ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾನುವಾರ ಮೈಸೂರಿನ ಅಗ್ರಹಾರದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ವಿದ್ಯಾರ್ಥಿ ನಿಲಯದ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿದರು.

ಮೈಸೂರು, ಅ.5(ಬಿಎಲ್‌ಯು)– ವೀರಶೈವ ಸಮುದಾಯ ಮಾತ್ರವಲ್ಲದೆ ಇಡೀ ಹಿಂದೂ ಧರ್ಮದಲ್ಲಿ ಒಡಕು ಮೂಡಿಸುವ ಷಡ್ಯಂತ್ರ ನಡೆಯುತ್ತಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಜನರು ಎಚ್ಚೆತ್ತುಕೊಳ್ಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಲಹೆ ನೀಡಿದರು.

ಮೈಸೂರಿನ ಅಗ್ರಹಾರದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ವಿದ್ಯಾರ್ಥಿನಿಲಯದ ನೂತನ ಕಟ್ಟಡದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಜಾತಿ ಸಮೀಕ್ಷೆ ನಡೆಸುತ್ತಿರುವುದನ್ನು ಪರೋಕ್ಷವಾಗಿ ಉಲ್ಲೇಖಿಸಿ ಈ ರೀತಿಯ ಸಲಹೆಯಿತ್ತರು.

ವೀರಶೈವ ಸಮುದಾಯದಲ್ಲಿ ಒಡಕು ಮೂಡಿಸುತ್ತಿರುವ ಹುನ್ನಾರದಲ್ಲಿ ನಮ್ಮ ಸಮಾಜದ ಮನೆ ಮುರುಕರು ಇರುವುದು ಬೇಸರದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು. ರಾಜಕಾರಣದಲ್ಲಿ ಧರ್ಮ ಇರಬೇಕು, ಆದರೆ ಧರ್ಮದಲ್ಲಿ ರಾಜಕಾರಣ ಇರಬಾರದು. ಆದರೆ, ಈಗ ಧರ್ಮದಲ್ಲಿ ರಾಜಕಾರಣ ತರುವ ಪ್ರಯತ್ನಗಳು ನಡೆಯುತ್ತಿದೆ ಎಂದು ವಿಜಯೇಂದ್ರ ಆರೋಪಿಸಿದರು. ಹಿಂದೂ ಧರ್ಮದಲ್ಲಿ ಒಡಕು ಮೂಡಿಸುತ್ತಿರುವರಿಗೆ ಸದ್ಯಕ್ಕೆ ಜಯ ಸಿಕ್ಕಿರಬಹುದು. ಆದರೆ ಇದೇ ರೀತಿಯ ಜಯ ಅವರ ಪಾಲಿಗೆ ಯಾವಾಗಲೂ ಶಾಶ್ವತವಾಗಿ

■ 6ನೇ ಪುಟಕ್ಕೆ

ಜನರಲ್ಲಿ ಸೇವಾ ಮನೋಭಾವ ಕಡಿಮೆಯಾಗುತ್ತಿದೆ

ಇತ್ತೀಚಿಗೆ ಜನರಲ್ಲಿ ಸೇವಾ ಮನೋಭಾವ ಕಡಿಮೆಯಾಗುತ್ತಿದ್ದು, ಮಠಗಳಲ್ಲಿ ಕೂಡ ಸೇವೆ ಮಾಡುವ ಜನರು ಕಡಿಮೆ ಆಗುತ್ತಿದ್ದಾರೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮಠಗಳಿದ್ದು, ತ್ರಿವಿಧ ಮಠಗಳು ದಾಸೋಹದಲ್ಲಿ ತೊಡಗಿವೆ. ಮಠಕ್ಕೆ ಬರುವ ಯಾರೂ ಕೂಡ ಹಸಿದು ಹೋಗದಂತೆ ದಿನ ನಿತ್ಯ ದಾಸೋಹ ನಡೆಸುತ್ತಿವೆ. ಅನ್ನ ದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನು ಧಾರೆ ಎರೆದು, ಆಧ್ಯಾತ್ಮಿಕ ಚಿಂತನೆಗಳನ್ನು ಮಠಗಳು ಮೂಡಿಸುತ್ತಿವೆ ಎಂದು ಹೇಳಿದರು.

ಈ ದೇಶದ ಜನರು ಸಣ್ಣ ಮಣ್ಣಿನ ಕಣವನ್ನು ದೇವರೆಂದು ಭಾವಿಸಿದ್ದಾರೆ. ಭಾರತದಂತೆ ಆಧ್ಯಾತ್ಮಿಕತೆಗೆ ಒತ್ತು ನೀಡುವ ವಿಶ್ವದ ಯಾವ ದೇಶವೂ ಇಲ್ಲ. ಇದರ ಮಧ್ಯೆ ಭಾರತದ ಸಂಸ್ಕೃತಿ ಪರಂಪರೆಯನ್ನು ಸ್ವಾಮಿ ವಿವೇಕಾನಂದರು ಇಡೀ ವಿಶ್ವಕ್ಕೆ ಪರಿಚಯಿಸಿದರು ಎಂದು ತಿಳಿಸಿದರು.

ಹಣೆಗೆ ಹಚ್ಚಿದ ಭಸ್ಮ ಸಂಜೆವರೆಗೆ ಇರಬೇಕು, ಭಸ್ಮ ಇರುವ ವ್ಯಕ್ತಿ ನೋಡಿದಾಗ ಜನರಲ್ಲಿ ದೈವ ಭಾವನೆ ಇರುತ್ತದೆ. ಹಾಗೆಯೇ ಗೃಹಿಣಿಯೊಬ್ಬಳು ಧರಿಸುವ ತಾಳಿ, ಕುಂಕುಮ, ಕಾಲಿಗೆ ಹಾಕಿಕೊಳ್ಳುವ ಕಾಲುಂಗರ ನೋಡುವ ಜನರು ಗೌರವದಿಂದ ನೋಡುತ್ತಾರೆ. ಇದು ಈ ದೇಶದ ಸಂಸ್ಕೃತಿಗಿರುವ ಶಕ್ತಿ ಎಂದು ಸುತ್ತೂರು ಶ್ರೀ ಹೇಳಿದರು.

ಮತ್ತೇ ಮುನ್ನೆಲೆಗೆ ಲಿಂಗಾಯತ ಸ್ವತಂತ್ರ ಧರ್ಮದ ಕೂಗು

ಕೇಂದ್ರಕ್ಕೆ ಶಿಫಾರಸು ಮಾಡುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಆಗ್ರಹ



ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು.

ಬೆಂಗಳೂರು, ಅ.5– ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಯುತ್ತಿರುವಾಗಲೇ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗೆ ಮತ್ತೆ ಕೂಗೆದ್ದಿದೆ. ಬೆಂಗಳೂರಿನಲ್ಲಿ ಇಂದು (ಭಾನುವಾರ) ನಡೆದ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ 300ಕ್ಕೂ ಹೆಚ್ಚು ಬಸವಾದಿ ಶರಣರು, ಲಿಂಗಾಯತ ಪ್ರಮುಖ ಸಂಘಟನೆ, ಒಕ್ಕೂಟಗಳು ಈ ಒತ್ತಾಯ ಮಾಡಿವೆ.

ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಂ.ಬಿ ಪಾಟೀಲ್ ಮತ್ತಿತರರು ಭಾಗವಹಿಸಿದ್ದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ನಿವೃತ್ತ ನ್ಯಾ.ನಾಗಮೋಹನ ದಾಸ್, 2017ರಲ್ಲಿ

■ 6ನೇ ಪುಟಕ್ಕೆ

ನಮ್ಮ ಮೆಟ್ರೋಗೆ 'ಬಸವ ಮೆಟ್ರೋ': ಕೇಂದ್ರ ಸರ್ಕಾರಕ್ಕೆ ಶಿಫಾರಸು

ಬೆಂಗಳೂರು, ಅ.5– ಬೆಂಗಳೂರಿಗರ ಜೀವನಾಡಿ ಆಗಿರುವ ನಮ್ಮ ಮೆಟ್ರೋಗೆ 'ಬಸವ ಮೆಟ್ರೋ' ಎಂದು ಮರುನಾಮಕರಣ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಬೆಂಗಳೂರಿನ ಅರಮನೆ ಮೈದಾನದ ಗೇಟ್ ಸಂಖ್ಯೆ 4ರ ಗಾಯತ್ರಿ ವಿಹಾರದಲ್ಲಿ ನಡೆದ ಬಸವ ಸಂಸ್ಕೃತಿ ಅಭಿಯಾನದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಬಣ್ಣಿಸಿದರು. ಬಸವ ತತ್ವಗಳು ಸಂವಿಧಾನದ ಆಶಯಗಳೊಂದಿಗೆ ಹೊಂದಿಕೊಂಡಿವೆ. ಮುಂದಿನ ವರ್ಷ ವಚನ ವಿಶ್ವವಿದ್ಯಾಲಯ ಸ್ಥಾಪಿಸುವುದಾಗಿಯೂ ಭರವಸೆ ನೀಡಿದರು.

ಮನೆ ನಿರ್ಮಾಣಕ್ಕಾಗಿ ಸರ್ಕಾರಿ ಶಾಲಾ ಕೊಠಡಿ ಧ್ವಂಸ

ಖಾಸಗಿ ವ್ಯಕ್ತಿ ವಿರುದ್ಧ ದೂರು ದಾಖಲು


ಶಾಲಾ ಕಟ್ಟಡವನ್ನು ಧ್ವಂಸಗೊಳಿಸಿರುವುದು.

ಸಾಲಿಗ್ರಾಮ, ಅ.5–ಖಾಸಗಿ ವ್ಯಕ್ತಿಯೋರ್ವ ಮನೆ ನಿರ್ಮಿಸಿಕೊಳ್ಳಲು ಸರ್ಕಾರಿ ಶಾಲೆಯ ಕಟ್ಟಡವನ್ನು ಧ್ವಂಸ ಮಾಡಿರುವ ಘಟನೆ ಸಾಲಿಗ್ರಾಮದಿಂದ ವರದಿಯಾಗಿದ್ದು, ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಅಲ್ಲಿನ ನಿವಾಸಿ ಕುರಂ ಪಾಷಾ ಎಂಬಾತನೇ ಸರ್ಕಾರಿ ಶಾಲಾ ಕೊಠಡಿಯನ್ನು ಜೆಸಿಬಿ ಮೂಲಕ ಧ್ವಂಸ ಮಾಡಿದವನಾಗಿದ್ದು, ಈ ಕುರಿತು ಸಾಲಿಗ್ರಾಮ ಸರ್ಕಾರಿ ಹಿರಿಯ ಪ್ರಾಥಮಿಕ ಉರ್ದು ಶಾಲೆಯ ಸಹ ಶಿಕ್ಷಕ ಎಸ್.ಮಹೇಶ್ ಅವರು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸರ್ಕಾರಿ ಶಾಲೆ ಕೊಠಡಿ ಧ್ವಂಸದ ವಿಷಯ ತಿಳಿಯುತ್ತಿದ್ದಂತೆಯೇ ಸಾರ್ವಜನಿಕರು ಸ್ಥಳದಲ್ಲಿ ಜಮಾಯಿಸಿ ಪ್ರತಿಭಟನೆಗೆ ಮುಂದಾದರು. ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸಾ.ರಾ. ನಂದೀಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಲ್ಲದೇ, ಈ ಸಂಬಂಧ ಬಿಇಓ ಕೃಷ್ಣಪ್ಪ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ನಿಮ್ಮಂತಹ ಶಿಕ್ಷಣಾಧಿಕಾರಿಗಳ ಅಸಡ್ಡೆಯಿಂದಾಗಿ ಪಟ್ಟಣದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗುತ್ತಿದೆ

■ 5ನೇ ಪುಟಕ್ಕೆ

ಸಕಲ ಸರ್ಕಾರಿ ಗೌರವಗಳೊಂದಿಗೆ ಟಿಜೆಎಸ್ ಜಾರ್ಜ್ ಅಂತ್ಯಕ್ರಿಯೆ


ಬೆಂಗಳೂರಿನ ಹೆಬ್ಬಾಳ ವಿದ್ಯುತ್ ಚಿತಾಗಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಪತ್ರಕರ್ತ ಟಿಜೆಎಸ್ ಜಾರ್ಜ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.


ಟಿಜೆಎಸ್ ಜಾರ್ಜ್

ಬೆಂಗಳೂರು, ಅ.5– ಪದ್ಮಭೂಷಣ ಪುರಸ್ಕೃತ, ಭಾರತೀಯ ಪತ್ರಿಕೋದ್ಯಮ ಭೀಷ್ಮ ಟಿಜೆಎಸ್ ಜಾರ್ಜ್ ಅವರ ಅಂತ್ಯಕ್ರಿಯೆ ಬೆಂಗಳೂರಿನ ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿತಾಗಾರಕ್ಕೆ ಆಗಮಿಸಿ ಅಂತಿಮ ದರ್ಶನ ಪಡೆದರು. ಟಿಜೆಎಸ್ ಗೌರವಾರ್ಥವಾಗಿ ಪಾರ್ಥಿವ ಶರೀರಕ್ಕೆ ತ್ರಿವರ್ಣ ಧ್ವಜ ಹೊದಿಸಿ ಗೌರವ ಸಲ್ಲಿಸಲಾಯಿತು. ಮೂರು ಸುತ್ತು ಗಾಳಿಯಲ್ಲಿ ಗುಂಡುಹಾರಿಸಿ ಪೊಲೀಸರು ಗೌರವ ಸಲ್ಲಿಸಿದರು. ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್.ರಂಗನಾಥ್ ಸೇರಿದಂತೆ, ಹಲವಾರು ಗಣ್ಯರು ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿ ಟಿಜೆಎಸ್ ಜಾರ್ಜ್ ಅವರಿಗೆ ಗೌರವ ನಮನ ಸಲ್ಲಿಸಿದರು.

ಸ್ವಸ್ಥಾನಕ್ಕೆ ಮರಳಿದ ಅಭಿಮನ್ಯು ನೇತೃತ್ವದ ಗಜಪಡೆ

ಮೈಸೂರು, ಅ.5(ಎಂಟಿವೈ)–ದಸರಾ ಮಹೋತ್ಸವ ಯಶಸ್ವಿಯಾಗಿದ್ದು, ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ದಸರಾ ಗಜಪಡೆ ಭಾನುವಾರ ಮಧ್ಯಾಹ್ನ ಸ್ವಸ್ಥಾನದತ್ತ ಪ್ರಯಾಣ ಬೆಳೆಸಿದವು.

ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಆನೆ ಶಿಬಿರಗಳಿಂದ ಆಗಮಿಸಿ, ಕಳೆದ 56 ದಿನದಿಂದ ಮೈಸೂರು ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ದಸರಾ ಗಜಪಡೆಗೆ ಭಾನುವಾರ ಸಾಂಪ್ರದಾಯಿಕವಾಗಿ ಬೀಳ್ಕೊಡಲಾಯಿತು. ಬೆಳಗ್ಗೆ 11 ಗಂಟೆಗೆ ಅರಮನೆ ಆವರಣದಲ್ಲಿರುವ ಕೋಡಿ ಸೋಮೇಶ್ವರ ಹಾಗೂ ಕೋಡಿ ಭೈರವೇಶ್ವರಸ್ವಾಮಿ ದೇವಾಲಯದ ಮುಂಭಾಗ ಸಾಲಾಗಿ ನಿಲ್ಲಿಸಿ ಪೂಜಾ ಪ್ರಕ್ರಿಯೆ ಆರಂಭಿಸಲಾಯಿತು. ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ನೇತೃತ್ವದಲ್ಲಿ ಎಲ್ಲಾ ಆನೆಗಳಿಗೆ ಹೂವಿನಿಂದ ಅಲಂಕಾರ ಮಾಡಿ, ಹರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ, ಸೊಂಡಿಲನ ಮೇಲೆ 'ಓಂಕಾರ' ಬರೆದು ಪೂಜೆ ಸಲ್ಲಿಸಲಾಯಿತು.

ಶುಭ ಧನುರ್ ಲಗ್ನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ಡಿಸಿಪಿ ಸುಂದರ್‌ರಾಜ್, ಅರಮನೆ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್ ಸೇರಿದಂತೆ ಇನ್ನಿತರರು ಆನೆಗಳಿಗೆ ಪುಷ್ಪಾರ್ಚನೆ ಮಾಡಿ, ಬೀಳ್ಕೊಟ್ಟರು.


ಗಜಪಡೆಗೆ ಸಾಂಪ್ರದಾಯಿಕ ಬೀಳ್ಕೊಡುಗೆ ಪೂಜೆ ಸಲ್ಲಿಸುತ್ತಿರುವುದು.

ಸಾವಿರಾರು ಸಾರ್ವಜನಿಕರ ಸಮ್ಮುಖದಲ್ಲಿ ದಸರಾ ಗಜಪಡೆಗೆ ಪ್ರೀತಿಯ ಬೀಳ್ಕೊಡುಗೆ

ಮೈಸೂರು,ಅ.5(ಎಂಟಿವೈ)– ದಸರಾ ಜಂಬೂಸವಾರಿ ಮೆರವಣಿಗೆಯನ್ನು ನಿರೀಕ್ಷೆಗೂ ಮೀರಿ ಯಶಸ್ವಿಗೊಳಿಸಲು ಕಾರಣವಾದ ಗಜಪಡೆಯನ್ನು ಬೀಳ್ಕೊಡಲು ಜಿಲ್ಲಾಡಳಿತದ ಯಾವುದೇ ಅಧಿಕಾರಿಗಳು ಬಾರದೇ ಇದ್ದರೂ, ಅಪಾರ ಸಂಖ್ಯೆಯ ಜನಸ್ತೋಮ ನೆರೆದು ಗಜಪಡೆಗೆ ಪ್ರೀತಿಯಿಂದ ಬೀಳ್ಕೊಟ್ಟರು.

ಅರಣ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಪೊಲೀಸ್ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಹೊರತುಪಡಿಸಿದರೆ ಸಾರ್ವಜನಿಕರು, ಅರಮನೆಗೆ ಬಂದಿದ್ದ ಪ್ರವಾಸಿಗರೇ ಹೆಚ್ಚಿನ ಸಂಖ್ಯೆಯಲ್ಲಿ ನೆರೆದು ದಸರಾ ಗಜಪಡೆ ಬೀಳ್ಕೊಟ್ಟರು. ಬೀಳ್ಕೊಡುಗೆ ಪೂಜೆ ವೇಳೆ ಆರಂಭದಲ್ಲಿ ಸಾರ್ವಜನಿಕರನ್ನು ಬಿಟ್ಟಿರಲಿಲ್ಲ. ಆನೆ ಕಾಡಿಗೆ ಹೋಗುವಾಗಲಾದರೂ ಬಿಡಿ ಎಂದು ಹಲವರು ಒತ್ತಾಯಿಸಿದ್ದರಿಂದ ಪೂಜಾ ಪ್ರಕ್ರಿಯೆ ನಡೆಯುತ್ತಿರುವಾಗ ಬ್ಯಾರಿಕೇಡ್ ಬಳಿ ನಿಂತಿದ್ದವರನ್ನು ಆನೆಗಳ ಬಳಿ ಬಿಡಲಾಯಿತು. ಇದರಿಂದ ಸುಮಾರು 2 ಸಾವಿರ ಮಂದಿ ಆನೆಗಳ ಬೀಳ್ಕೊಡುಗೆ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಈ ಬಾರಿಯ ದಸರಾ ಗಜಪಡೆಯನ್ನು ನೋಡಲು ಆರಂಭದಿಂದಲೂ ವಿವಿಧೆಡೆಯಿಂದ ಬಂದ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿತ್ತು ತಾಲೀಮು ನೋಡಲು ಸೇರುತ್ತಿದ್ದ ರೀತಿ ಬೀಳ್ಕೊಡುಗೆ ವೇಳೆಯೂ ಜನ ಸೇರಿದ್ದರು. ಅರಮನೆ ಆವರಣ ಮಾತ್ರ ವಲ್ಲದೆ, ಜಯ ಮಾರ್ತಾಂಡ ದ್ವಾರ, ಬಿ.ಎನ್. ರಸ್ತೆಯಲ್ಲೂ ಅಪಾರ ಸಂಖ್ಯೆಯ ಜನ ಜಮಾಯಿಸಿ ದಸರಾ ಗಜಪಡೆ ಸ್ವಸ್ಥಾನದತ್ತ ಪ್ರಯಾಣಿಸುವುದನ್ನು ಕಣ್ತುಂಬಿಕೊಂಡರು.


ಗಜಪಡೆ ಬೀಳ್ಕೊಡುಗೆ ಪೂಜೆ ವೇಳೆ ಅರಮನೆ ಆವರಣದಲ್ಲಿ ಸೇರಿದ ಜನಸ್ತೋಮ.

ಬಳಿಕ ಎಲ್ಲಾ ಆನೆಗಳಿಗೂ ಕಬ್ಬು, ಬೆಲ್ಲ, ವಿವಿಧ ಹಣ್ಣು ತಿನ್ನಿಸಿ, ಬೂದುಕುಂಬಳ ಕಾಯಿಯಿಂದ ದೃಷ್ಟಿ ತೆಗೆದು ಒಡೆದ ಬಳಿಕ ನಿಂಬೆಹಣ್ಣನ್ನು ಕಾಲಿನಿಂದ ತುಳಿಸಿ ಲಾರಿ ಹತ್ತಿಸಲು ಕರೆದೊಯ್ಯಲಾಯಿತು.

ಸ್ನಾನ ಮಾಡಿಸಿ, ನೀರು ಕುಡಿಸಿದ ಮಾವುತರು: ಬೀಳ್ಕೊಡುಗೆ ಪೂಜಾ ಪ್ರಕ್ರಿಯೆ ಮುಗಿದ ಮೇಲೆ ಮಾವುತರು ಎಲ್ಲಾ ಆನೆಗಳಿಗೆ ನೀರು ಕುಡಿಸಿ, ಸ್ನಾನ ಮಾಡಿಸಿದರು. ಅಷ್ಟರಲ್ಲಾಗಲೇ ಆನೆಗಳಿಗೆ ಪ್ರತ್ಯೇಕವಾಗಿ ನಿಗದಿ ಮಾಡಿದ್ದ ಲಾರಿಗಳಲ್ಲಿ ಮಾವುತರು, ಕಾವಾಡಿಗಳ ಕುಟುಂಬದ ಸದಸ್ಯರು ಮನೆ ಸಾಮಗ್ರಿಗಳೊಂದಿಗೆ ಕುಳಿತಿದ್ದರು. ಆನೆಗಳಿಗೆ ಸ್ನಾನ ಮಾಡಿಸಿದ ನಂತರ ಒಂದಾದ ಮೇಲೊಂದರಂತೆ ಆನೆಗಳನ್ನು ಪ್ರತ್ಯೇಕ ಲಾರಿಗಳಿಗೆ ಹತ್ತಿಸಿ, ಕಾಡಿನತ್ತ ಪಯಣಿಸಲು ಸಜ್ಜಾದರು.

ಲಾರಿ ಹತ್ತಲು ಬೆದರಿದ ಹೇಮಾವತಿ: ಇದೇ ಮೊದಲ ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸಿದ್ದ ದುಬಾರೆ ಆನೆ ಶಿಬಿರದ ಹೇಮಾವತಿ ನಾಡಿನಿಂದ ಕಾಡಿಗೆ ತೆರಳಲು ಹಿಂದೇಟು ಹಾಕಿದಳು. ಚಿಕ್ಕ ವಯಸ್ಸಿನ ಆನೆಯಾದರೂ ಅನುಭವಿಯಂತೆ ವರ್ತಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಹೇಮಾವತಿ ನಗರದ ಪರಿಸರಕ್ಕೆ ಹೊಂದಿಕೊಂಡಿತ್ತು. ಕಳೆದ ಎರಡು ತಿಂಗಳಿಂದ ಅರಮನೆ ಅಂಗಳದಲ್ಲಿ

■ 6ನೇ ಪುಟಕ್ಕೆ

ದಸರಾ ಕೇಕ್ ಶೋಗೆ ಮಕ್ಕಳು, ಅನಾಥರು, ಹಿರಿಯ ನಾಗರಿಕರಿಗೆ ಉಚಿತ ಪ್ರವೇಶ



ಕೇಕ್‌ನಲ್ಲಿ ಮೂಡಿರುವ ಮೈಸೂರಿನ ಅಂಬಾವಿಲಾಸ ಅರಮನೆ.

ಮೈಸೂರು,ಅ.5(ಜಿಎ)–ದಸರಾ ಕೇಕ್ ಶೋಗೆ ಮಕ್ಕಳು, ಅನಾಥರು ಹಾಗೂ ಹಿರಿಯ ನಾಗರಿಕರಿಗೆ ಉಚಿತ ಪ್ರವೇಶ ನೀಡಲಾಗುತ್ತದೆ ಎಂದು ಆಯೋಜಕ ದಿನೇಶ್ ತಿಳಿಸಿದ್ದಾರೆ.

ಚಾಮರಾಜಪುರಂ ಕೃಷ್ಣರಾಜ ಬುಲೇವಾರ್ಡ್ ರಸ್ತೆಯ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.22ರಿಂದ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನ ಆವರಣದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಗಳನ್ನು ಸಾರುವ ನಿಟ್ಟಿನಲ್ಲಿ ಆಯೋಜಿಸಿದ್ದ ದಸರಾ ಕೇಕ್ ಶೋಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಇದುವರೆಗೂ 50 ಸಾವಿರಕ್ಕೂ ಅಧಿಕ ಮಂದಿ ವೀಕ್ಷಿಸಿದ್ದಾರೆ ಎಂದರು.

30 ಸಾವಿರಕ್ಕೂ ಅಧಿಕ ಮಂದಿಗೆ ಈಗಾಗಲೇ ಉಚಿತ ಪ್ರವೇಶ ನೀಡಲಾಗಿದ್ದು, ಅ.6, 7ರಂದು 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು, ಅನಾಥಾಶ್ರಮದ ಮಕ್ಕಳು ಹಾಗೂ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವೃದ್ಧಾಶ್ರಮದಲ್ಲಿರುವವರಿಗೆ ಉಚಿತ ಪ್ರವೇಶ ಕಲ್ಪಿಸಲಾಗುತ್ತಿದ್ದು, ಪ್ರಮುಖ ಆಕರ್ಷಣೆಯಾದ ನಾಲ್ವಡಿ ಅವರ ಪ್ರತಿಮೆ, ಕೆಆರ್‌ಎಸ್ ಡ್ಯಾಂ, ಮೈಸೂರು ಅಂಬಾವಿಲಾಸ ಅರಮನೆ, ಅಂಬಾರಿ ಹೊತ್ತಿರುವ ಆನೆ ಜೊತೆ ಎರಡು ಕುಮ್ಕಿ ಆನೆ, ಚಾಕ್‌ಲೇಟ್‌ನಿಂದ ನಿರ್ಮಾಣಗೊಂಡಿರುವ ನಾಲ್ವಡಿ ಅವರ ಪ್ರತಿಮೆಯನ್ನು ವೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ನಾಗನಹಳ್ಳಿ ಶ್ರೀಲಕ್ಷ್ಮಿ ದೇವಸ್ಥಾನ ಉದ್ಘಾಟನೆ...



ಮೈಸೂರು ತಾಲೂಕು ನಾಗನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಲಕ್ಷ್ಮೀ ದೇವಸ್ಥಾನವನ್ನು ಮಾಜಿ ಸಚಿವ ಸಿ.ಟಿ.ರವಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಎನ್.ಜಗದೀಶ್‌ಗೌಡ, ಮಹದೇವಪ್ಪ, ಮಹೇಶ್, ಶ್ರೀಕಂಠಯ್ಯ, ಸಿಂಗಪ್ಪ, ಸೋಮಣ್ಣ, ವೇಣು ಗೋಲ್ಡ್ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಸೂರು ವಿವಿ ಅಂತರ ಕಾಲೇಜು ವಿವಿಧ ಸ್ಪರ್ಧೆ



ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ 2025–26ನೇ ಸಾಲಿನ ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಜಿಮ್ನಾಸ್ಟಿಕ್, ಕುಸ್ತಿ, ಈಜು, ಯೋಗಾಸನ, ಕರಾಟೆ, ಕಿಕ್ ಬಾಕ್ಸಿಂಗ್, ಭಾರ ಎತ್ತುವ ಹಾಗೂ ಅತ್ಯುತ್ತಮ ದೇಹದಾರ್ಢ್ಯ ಸ್ಪರ್ಧೆಗಳು ಸ್ಪೋರ್ಟ್ಸ್ ಪೆವಿಲಿಯನ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು.

ಹಸಿರು ಪರಿಸರ ಸ್ವಚ್ಛ ಸಮಾಜ ಜಾಗೃತಿ ಮೆರವಣಿಗೆ



ಮೈಸೂರು ಎಂಡಿಇಎಸ್ ಸಂಸ್ಥೆಯ ವಜ್ರ ಮಹೋತ್ಸವದ ಪ್ರಯುಕ್ತ ಮೈಸೂರಿನ ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆಯ ವಿದ್ಯಾರ್ಥಿಗಳು ಹಸಿರು ಪರಿಸರ, ಸ್ವಚ್ಛ ಸಮಾಜ ಧ್ಯೇಯವಾಕ್ಯದೊಂದಿಗೆ ಪರಿಸರ ಜಾಗೃತಿ ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕೇಂದ್ರ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯ–ನೆಸ್ಲೆ ಇಂಡಿಯಾ ಒಡಂಬಡಿಕೆ



ನವದೆಹಲಿಯಲ್ಲಿ ನಡೆದ ವಿಶ್ವ ಆಹಾರ ಭಾರತ ಶೃಂಗಸಭೆಯಲ್ಲಿ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯದೊಂದಿಗೆ ನೆಸ್ಲೆ ಇಂಡಿಯಾ ಒಪ್ಪಂದಕ್ಕೆ ಸಹಿ ಹಾಕಿತು.

ಮೈಸೂರು, ಅ.5–ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ನೆಸ್ಲೆ ಇಂಡಿಯಾ ಭಾರತಕ್ಕೆ ತನ್ನ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿದೆ. ನವದೆಹಲಿಯಲ್ಲಿ ನಡೆದ 2025ರ ವಿಶ್ವ ಆಹಾರ ಭಾರತ ಶೃಂಗಸಭೆಯಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯದೊಂದಿಗೆ ಈ ಒಪ್ಪಂದಕ್ಕೆ ಸಹಿ ಹಾಕಿರುವುದು, ಒಡಿಶಾ ಮತ್ತು ಅಸ್ತಿತ್ವದಲ್ಲಿರುವ ಉತ್ಪಾದನಾ ಸ್ಥಳಗಳಲ್ಲಿ ಮುಂದಿನ 2ರಿಂದ 3 ವರ್ಷಗಳ ಅವಧಿಯಲ್ಲಿ ಹಸಿರು ಕ್ಷೇತ್ರ ಮತ್ತು ಕಂದು ಕ್ಷೇತ್ರ ಯೋಜನೆಗಳಲ್ಲಿ ಆಹಾರ ಸಂಸ್ಕರಣಾ ವಲಯದಲ್ಲಿ ಹೂಡಿಕೆ ಮಾಡಲು ನೆಸ್ಲೆ ಇಂಡಿಯಾದ ಬದ್ಧತೆಯನ್ನು ತೋರಿಸುತ್ತದೆ ಎಂದು ನೆಸ್ಲೆ ಇಂಡಿಯಾ ಅಧ್ಯಕ್ಷ ಹಾಗೂ ನಿರ್ವಾಹಕ ನಿರ್ದೇಶಕ ಮನೀಷ್ ತಿವಾರಿ ಹೇಳಿದ್ದಾರೆ.

ನೆಸ್ಲೆ ಇಂಡಿಯಾ ಸುಸ್ಥಿರ, ಅಂತರ್ಗತ ಮತ್ತು ಭವಿಷ್ಯಕ್ಕೆ ಸಿದ್ಧವಾದ ಆಹಾರ ವ್ಯವಸ್ಥೆಗಳನ್ನು ರಚಿಸುವುದು, ಬ್ರ್ಯಾಂಡ್‌ಗಳು ಮತ್ತು ಮೂಲಸೌಕರ್ಯಗಳಲ್ಲಿ ಹೂಡಿಕೆ ಮಾಡುವುದರ ಬಗ್ಗೆ ತನ್ನ ಗಮನ ಕೇಂದ್ರೀಕರಿಸಿದೆ. ಇದು ಆರ್ಥಿಕ ಪ್ರಗತಿಯನ್ನು ಉತ್ತೇಜಿಸುತ್ತದೆ ಮತ್ತು ಎಲ್ಲಾ ನಾಗರಿಕರ ಜೀವನದ ಗುಣಮಟ್ಟವನ್ನು ಸುಧಾರಿಸುತ್ತದೆ. ಇದಲ್ಲದೆ, ದಿಟ್ಟ ನಾವೀನ್ಯತೆಗಳ ಮೂಲಕ ಗ್ರಾಹಕರಿಗೆ ಉತ್ಪನ್ನಗಳು ಮತ್ತು ಅನುಭವಗಳನ್ನು ವೇಗವಾಗಿ, ದೊಡ್ಡದಾಗಿ ಮತ್ತು ಉತ್ತಮವಾಗಿ ತರಲು ಬದ್ಧವಾಗಿದೆ ಎಂದಿದ್ದಾರೆ. ಪ್ರೀತ್‌ಪಾಲ್ ಸಿಂಗ್, ಅವಿನಾಶ್ ಜೋಶಿ ಉಪಸ್ಥಿತರಿದ್ದರು.

ದಸರಾ ಸಂಭ್ರಮ ಸಂಪನ್ನ: ಮಲ್ಲೇಶ್ ಧನ್ಯವಾದ



ಕೆ.ವಿ.ಮಲ್ಲೇಶ್

ಮೈಸೂರು, ಅ. 5–ವಿಶ್ವವಿಖ್ಯಾತ ಮೈಸೂರು ದಸರಾ ಸಂಪನ್ನಗೊಂಡಿದೆ. ಲಕ್ಷಾಂತರ ಜನರು ಚಿನ್ನದ ಅಂಬಾರಿಯಲ್ಲಿ ತಾಯಿ ಚಾಮುಂಡೇಶ್ವರಿಯನ್ನು ಕಣ್ತುಂಬಿಕೊಂಡಿದ್ದಾರೆ. ಈ ಬಾರಿ 11 ದಿನಗಳ ಕಾಲ ನಡೆದ ವೈಭವೋಪೇತ ದಸರಾ ಮಹೋತ್ಸವವನ್ನು ರಾಜ್ಯ ಸರಕಾರ ಅತ್ಯಂತ ಮುತುವರ್ಜಿಯಿಂದ ಪಾರಂಪರಿಕವಾಗಿ ನಡೆಸಿಕೊಟ್ಟಿದೆ. ಸರಕಾರದ ಆಶಯಕ್ಕೆ ತಕ್ಕಂತೆ ಅಧಿಕಾರಿ ವರ್ಗ, ಸಿಬ್ಬಂದಿ ವರ್ಗ ಹಗಲಿರುಳು ದಸರಾ ಯಶಸ್ಸಿಗೆ ಶ್ರಮಿಸಿದ್ದಾರೆ ಎಂದು ದಸರಾ ಸಾಂಸ್ಕೃತಿಕ ಉಪಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್ ತಿಳಿಸಿದ್ದಾರೆ.

ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರಾಜ್ಯ ಸರಕಾರದೊಂದಿಗೆ ಸಮನ್ವಯತೆ ಸಾಧಿಸಿ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಬಾರದಂತೆ ರಾಜಪ್ರಭುತ್ವದ ಪರಂಪರೆಯನ್ನು ಮೇಳೈಸಿದ್ದಾರೆ. ಇವರ ಜತೆಗೆ ಅರಣ್ಯ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಮಾವುತರು, ಕಾವಾಡಿಗರು ತಮ್ಮ ತಮ್ಮ ಕೆಲಸಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿರುವುದು ಶ್ಲಾಘನೀಯ. ವಿರೋಧ ಪಕ್ಷಗಳು ಎಷ್ಟೇ ಬೊಬ್ಬೆ ಹೊಡೆದರೂ ಮೈಸೂರು ದಸರಾ ಪಕ್ಷಾತೀತವಾಗಿ, ಧರ್ಮಾತೀತವಾಗಿ, ಜಾತ್ಯಾತೀತವಾಗಿ ಎಲ್ಲರೂ ಒಪ್ಪುವಂತೆ ಈ ನೆಲದ ಮಣ್ಣಿನ ಸೊಗಡಿಗೆ ತಕ್ಕಂತೆ ಸಂಪನ್ನಗೊಂಡಿದೆ. ಈ ಐತಿಹಾಸಿಕ ಸೌಹಾರ್ದಯುತ ಮಹೋತ್ಸವಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಧರ್ಮಾ ಸಂಸ್ಕೃತ ಪತ್ರಿಕೆಯ ವಾರ್ಷಿಕೋತ್ಸವ

ಸಂಸ್ಕೃತ ಆಧಾರದ ಮೇಲೆ ಜಗತ್ತಿನ ಇತರ ಭಾಷೆಗಳು ಹುಟ್ಟಿಕೊಂಡಿವೆ

ಹಿರಿಯ ಪತ್ರಿಕೋದ್ಯಮಿ ಡಾ.ವಿಜಯ ಸಂಕೇಶ್ವರ್ ಅಭಿಮತ



'ಸುಧರ್ಮಾ' ಸಂಸ್ಕೃತ ದಿನ ಪತ್ರಿಕೆಯ 56ನೇ ವಾರ್ಷಿಕೋತ್ಸವದ ವಿಶೇಷ ಸಂಚಿಕೆ ಹಾಗೂ ಪುಸ್ತಕಗಳನ್ನು ಹಿರಿಯ ಪತ್ರಿಕೋದ್ಯಮಿ ಡಾ.ವಿಜಯ ಸಂಕೇಶ್ವರ ಭಾನುವಾರ ಬಿಡುಗಡೆ ಮಾಡಿದರು. ಸಂಸ್ಕೃತ ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್, ವಿಶ್ರಾಂತ ಪ್ರಾಧ್ಯಾಪಕ ವಿ.ಡಿ.ಹೆಗಡೆ, ಎಂಎಲ್‌ಸಿ ಕೆ.ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು,ಅ.5(ಎಂಕೆ)–ಸನಾತನ ಧರ್ಮದ ಪ್ರತಿಬಿಂಬವಾಗಿರುವ 'ಸುಧರ್ಮಾ' ಸಂಸ್ಕೃತ ದಿನಪತ್ರಿಕೆಯು ರಾಷ್ಟ್ರದಾದ್ಯಂತ ಹೆಸರು ಮಾಡಿದೆ. ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಮೂಲಕ ಜಗತ್ತಿನ ಎಲ್ಲಾ ಕಡೆಗೂ ತಲುಪುತ್ತಿರುವ 'ಸುಧರ್ಮಾ' ನೂರು ವರ್ಷಗಳನ್ನು ಪೂರೈಸಲಿ ಎಂದು ಪದ್ಮಶ್ರೀ ಪುರಸ್ಕೃತರೂ ಆದ ಹಿರಿಯ ಪತ್ರಿಕೋದ್ಯಮಿ ಡಾ.ವಿಜಯ ಸಂಕೇಶ್ವರ ಹಾರೈಸಿದರು.

ಮೈಸೂರಿನ ಬಿಎಸ್‌ಎಸ್ ವಿದ್ಯೋದಯ ಶಾಲೆ ಸಭಾಂಗಣದಲ್ಲಿ 'ಸುಧರ್ಮಾ' ಸಂಸ್ಕೃತ ದಿನಪತ್ರಿಕೆಯ 56ನೇ ವಾರ್ಷಿಕೋತ್ಸವದ ಅಂಗವಾಗಿ ವಿಶೇಷ ಸಂಚಿಕೆ ಹಾಗೂ ಪುಸ್ತಕಗಳ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ಸುಧರ್ಮಾ' ಸಂಸ್ಕೃತ ದಿನ ಪತ್ರಿಕೆಯು ಡಿಜಿಟಲೀಕರಣದ ಮೂಲಕ ಇನ್ನೂ ದೊಡ್ಡ ಮಟ್ಟದಲ್ಲಿ ಹೆಸರು ಮಾಡಬೇಕಿದೆ ಎಂದರು.

ಜಗತ್ತಿನ ಯಾವುದೇ ಭಾಷೆಯ ಮೂಲ ಸಂಸ್ಕೃತವಾಗಿದ್ದು, ಅದರ ಆಧಾರದ ಮೇಲೆ ಇನ್ನಿತರೆ ಭಾಷೆಗಳು ಹುಟ್ಟಿಕೊಂಡಿವೆ. ಅತ್ಯಂತ ಜನಪ್ರಿಯ ಸಂಸ್ಕೃತ ಭಾಷೆಯ ಒಂದೇ ಒಂದು ಪತ್ರಿಕೆ 'ಸುಧರ್ಮಾ' ಆಗಿದ್ದು, ಕಾಲಚಕ್ರ ಉರುಳಿದಂತೆ ಇಂದು ಸಂಸ್ಕೃತ ಒಂದು ನೆಪವಾಗಿ ಉಳಿದುಕೊಂಡಿದೆ. ಆದ್ದರಿಂದ ಪತ್ರಿಕೆ ನೆಪ ಮಾತ್ರ. ಸಂಸ್ಕೃತ ಬೆಳೆಯಬೇಕು. ವಿದೇಶಗಳಲ್ಲಿ ಸಂಸ್ಕೃತ ಶ್ಲೋಕಗಳ ಪಾರ್ಥನೆ ನಡೆಯುತ್ತಿದ್ದರೆ, ನಮ್ಮ ದೇಶದಲ್ಲಿ ಸಂಸ್ಕೃತವನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ನನಗೆ ಶಾಲಾ ದಿನಗಳಲ್ಲಿಯೇ ದಿನಪತ್ರಿಕೆ, ವಾರ ಮತ್ತು ಮಾಸ ಪತ್ರಿಕೆಗಳನ್ನು ಓದುವ ಹವ್ಯಾಸ ಮತ್ತು ಅಭ್ಯಾಸ ಇತ್ತು. ಪತ್ರಿಕಾ ಕ್ಷೇತ್ರದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಯನ್ನು ಜನರಿಗೆ ಕೊಡುವ ಪ್ರಯತ್ನವನ್ನು ಎಲ್ಲರ ಆಶೀರ್ವಾದದಿಂದ ಮಾಡಿದ್ದೇನೆ. ಒಂದು ಸಾವಿರ ಪತ್ರಿಕೆಗಳು ಹುಟ್ಟಿದರೆ, ವರ್ಷದ ಅವಧಿಯಲ್ಲಿ ಒಂದೆರಡು ಪತ್ರಿಕೆ ಉಳಿಯುವುದು ಕಷ್ಟ ಎನ್ನುತ್ತಲೇ ತಮ್ಮ ಪತ್ರಿಕಾ ರಂಗದ ದಿನಗಳನ್ನು ಮೆಲುಕು ಹಾಕಿದರು.

ಓದುಗರ ಸಂಖ್ಯೆ ಕಡಿಮೆಯಾಗಿದೆ: ಇತ್ತೀಚಿನ ದಿನಗಳಲ್ಲಿ ಅದರಲ್ಲೂ ಕೋವಿಡ್ ನಂತರ ಬಹಳಷ್ಟು ಜನ ಪತ್ರಿಕೆ ಓದುವುದನ್ನು ಬಿಟ್ಟಿದ್ದಾರೆ. ರಾಜ್ಯದಾದ್ಯಂತ ಮುದ್ರಣವಾಗುತ್ತಿದ್ದ ಸುಮಾರು 26–27 ಲಕ್ಷ ಪತ್ರಿಕೆಗಳಲ್ಲಿ ಈಗ ಸುಮಾರು 10 ಲಕ್ಷ ಪತ್ರಿಕೆಗಳ ಮುದ್ರಣ ಕಡಿಮೆಯಾಗಿದೆ. ಜನರು ಪತ್ರಿಕೆ ಓದುವುದನ್ನು ಕಡಿಮೆ ಮಾಡಿ ಟಿವಿ ಕಡೆ ಆಕರ್ಷಿತರಾದರು. ಈಗ ಟಿವಿಯನ್ನು ಕಡಿಮೆ ಮಾಡಿ ಮೊಬೈಲ್ ಹಿಂದೆ ಬಿದ್ದಿದ್ದಾರೆ ಎಂದು ತಿಳಿಸಿದರು.

'ಸುಧರ್ಮಾ' ನಮ್ಮ ಸುದೈವ!: ವಿಧಾನಪರಿಷತ್ ಸದಸ್ಯ ಕೆ.ಶಿವಕುಮಾರ್ ಮಾತನಾಡಿ, ತಂತ್ರಜ್ಞಾನ ಹಾಗೂ ವಿದೇಶಿ ಸಂಸ್ಕೃತಿ ಪ್ರಭಾವದ ನಡುವೆಯೂ 'ಸುಧರ್ಮಾ' ಸಂಸ್ಕೃತ ದಿನಪತ್ರಿಕೆ ಮುನ್ನಡೆಯುತ್ತಿರುವುದು ನಮ್ಮ ಸುದೈವ. ಇವತ್ತು ಜಗತ್ತಿನ ಎಲ್ಲಾ ಮೂಲೆಗೂ 'ಸುಧರ್ಮಾ' ತಲುಪಿದೆ. ಭಾರತೀಯ ಸಾಂಸ್ಕೃತಿಕ ರಾಯಭಾರಿಯಾಗಿ 'ಸುಧರ್ಮಾ' ಸಂಸ್ಕೃತ ದಿನ ಪತ್ರಿಕೆ ಕೆಲಸ ಮಾಡುತ್ತಿದೆ. ಆದರೆ, ಸರ್ಕಾರದಿಂದ ಸಿಗಬೇಕಾದ ಮನ್ನಣೆ ದೊರೆಯುತ್ತಿಲ್ಲ ಎಂಬ ಬೇಸರವಿದ್ದು, ಮುಂದಿನ ದಿನಗಳಲ್ಲಿ 'ಸುಧರ್ಮಾ' ಪತ್ರಿಕೆಗೆ ಸರ್ಕಾರದಿಂದ ಆರ್ಥಿಕ ಸಹಕಾರ ಕೊಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು. ಸಂಸ್ಕೃತ ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್, ವಿಶ್ರಾಂತ ಪ್ರಾಧ್ಯಾಪಕ ವಿ.ಡಿ.ಹೆಗಡೆ, ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್, ಬಿಎಸ್‌ಎಸ್ ವಿದ್ಯೋದಯ ಕಾರ್ಯದರ್ಶಿ ಆರ್.ವಾಸುದೇವ್ ಭಟ್, ಅನುವಾದಕ ಎಸ್.ನಟರಾಜ್, 'ಸುಧರ್ಮಾ' ಸಂಸ್ಕೃತ ದಿನಪತ್ರಿಕೆ ಸಂಪಾದಕರಾದ ಶ್ರೀಮತಿ ಜಯಲಕ್ಷ್ಮಿ, ಶ್ರೀವತ್ಸ ಆಚಾರ್ಯ ಮತ್ತಿತರರು ಉಪಸ್ಥಿತರಿದ್ದರು.

ವಿಶೇಷ ಸಂಚಿಕೆ ಹಾಗೂ ಪುಸ್ತಕಗಳ ಬಿಡುಗಡೆ...

'ಸುಧರ್ಮಾ' ಸಂಸ್ಕೃತ ದಿನ ಪತ್ರಿಕೆಯ ವಾರ್ಷಿಕೋತ್ಸವದ ಅಂಗವಾಗಿ ವಿಶೇಷ ಸಂಚಿಕೆ, ಹಿರಿಯ ಪತ್ರಕರ್ತ ಕೂಡ್ಲಿ ಗುರುರಾಜ್ ರಚಿತ 'ಸುಧರ್ಮಾ' ಕೃತಿಯ ಇಂಗ್ಲಿಷ್ ಅನುವಾದ 'ದಿ ಸಾಗ ಆಫ್ ಸುಧರ್ಮಾ', ಸಂಸ್ಕೃತ ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್ ಅವರ 'ಸುವಚನಶತಕಮ್', 'ಶಿಖರಿಣೀಶತಕಮ್' ಹಾಗೂ ವಿದ್ವಾನ್ ಡಾ.ಟಿ.ವಿ.ಸತ್ಯನಾರಾಯಣ ರಚಿತ 'ನವರಾತ್ರ ದುರ್ಗಾ ವೈಭವ' ಕೃತಿಯನ್ನು ಬಿಡುಗಡೆ ಮಾಡಲಾಯಿತು.

ಸಂಸ್ಕೃತ ಭಾಷೆಯ ನಿರ್ಲಕ್ಷ್ಯ...

"ರಾಜ್ಯ ರಾಜಕೀಯ ದೊಂಬರಾಟದಲ್ಲಿ ಪ್ರಾದೇಶಿಕ ಭಾಷೆಗಳ ಜೊತೆಗೆ ಸಂಸ್ಕೃತ ಭಾಷೆಯನ್ನು ನಿರ್ಲಕ್ಷ್ಯ ಮಾಡಲಾಗಿದೆ. ಪತ್ರಿಕೆಗಳು ಬದುಕಬೇಕಾದರೆ ಜಾಹಿರಾತು ಬೇಕು. ಈ ನಿಟ್ಟಿನಲ್ಲಿ ವರ್ಷದಲ್ಲಿ ಒಂದೆರಡು ಬಾರಿಯಾದರೂ ಜಾಹಿರಾತು ಕೊಡಬೇಕು. ಸುಧರ್ಮಾ ಪತ್ರಿಕೆ ನೂರು ಕಾಲ ಮುಟ್ಟತ್ತೆ ಎಂಬ ಆತ್ಮವಿಶ್ವಾಸವಿದೆ. – **ಡಾ.ವಿಜಯ ಸಂಕೇಶ್ವರ, ಹಿರಿಯ ಪತ್ರಿಕೋದ್ಯಮಿ.**



ಶ್ರೀ ಮಹಾಲಕ್ಷ್ಮಿ ಉತ್ಸವ

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಹಳೆ ಬಂಡಿಕೇರಿಯ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದಮ್ಮ ದೇವಾಲಯದಲ್ಲಿ ಉತ್ಸವ ವಿಜೃಂಭಣೆಯಿಂದ ಜರುಗಿತು. ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗರಾಜು, ಸದಸ್ಯ ವಿಶ್ವನಾಥ್ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಸುದರ್ಶನ ಕ್ರಿಯೆ ಶಿಬಿರ

ಮೈಸೂರು: ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಅ.7ರಿಂದ 11ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ಎರಡು ಅವಧಿಯಲ್ಲಿ ನಡೆಯಲಿದೆ. ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.10.2025 ಸೋಮವಾರ, ಮಳೆ ನಕ್ಷತ್ರ: ಹಸ್ತ 27.09.2025ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಚತುರ್ದಶಿ, ಬೆಳಗ್ಗೆ ಮಹಾಭಿಷೇಕ, ದುರ್ಗಾಪೂಜೆ, ದುರ್ಗಾಹೋಮ, ದುರ್ಗಾ ಪಾರಾಯಣ, ಸಂಜೆ ಮಹಾಮಂಗಳಾರತಿ, ಶಯನೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಲಕ್ವ, ಪ್ಯಾಕಲಿಸಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ : ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಶೃಂಗೇರಿ ಶ್ರೀ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025, ಚತುರ್ದಶಿ, ಶ್ರೀ ಕಾಮಧೇನು ಅಲಂಕಾರ, ಶ್ರೀ ಲಕ್ಷ್ಮೀನರಸಿಂಹ ಹೋಮ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ, ಬೆಳಗ್ಗೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಬಿಳಿಮುಟ್ಟು, ಮೂಗು ಕಟ್ಟುವುದು, ಮೂಗು ಸುರಿಯುವುದು, ಮೂಗಿನಿಂದ ರಕ್ತ ಬರುವುದು, ಮೂಗಿನಲ್ಲಿ ದುರ್ಮಾಂಸ, ಸೀನುವಿಕೆ, ಕೆಂಪು ಕಣ್ಣುಗಳು, ಮೂಗು, ಗಂಟಲು, ಕಣ್ಣುಗಳು ಮತ್ತು ಬಾಯಿಯಲ್ಲಿ ತುರಿಕೆ, ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭ ಸಂಸ್ಕಾರ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 10ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ಮಹದೇಶ್ವರನಗರ, ಬೆಳಗ್ಗೆ 10ರಿಂದ.

■ **ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** ಶಿಕ್ಷಕರ ದಿನಾಚರಣೆ, ದಿವ್ಯ ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ನಿ.ಪ್ರ.ಸ್ವ. ಶ್ರೀ ಚಿದಾನಂದ ಮಹಾಸ್ವಾಮಿಗಳು, ಮುಖ್ಯ ಅತಿಥಿಗಳು: ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಸಿ.ಕೆ.ರೇಣುಕಾರ್ಯ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾಭವನ, ಹೊಸಮಠ, ಬೆಳಗ್ಗೆ 10 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10: ಚಿಂತನ–ಡಾ.ವಿ.ರಂಗನಾಥ್, 6.15: ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40: ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಯಂತಿ.ವಿ.ಭಟ್, ಟಿ.ಎಸ್.ಸ್ನೇಹಾ, ಕೆ.ಶ್ರೇಯಾ, ವ್ಯಾಖ್ಯಾನ: ಡಾ.ಬಿ.ವಿ.ವಸಂತಕುಮಾರ್, 6.50: ರೈತರಿಗೆ ಸಲಹೆ, 7.15: ಭಾವಗೀತೆಗಳು, 8.30: ಚಿತ್ರಗೀತೆಗಳು, 9.00: ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಡಾ.ಪ್ರಧಾನ ಗುರುದತ್ತ ಹಾಗೂ ಎಂ.ಎಸ್.ಕೆ.ಪ್ರಭು ಅವರು ನಡೆಸಿದ್ದ ಸಂವಾದದ ಎರಡನೇ ಭಾಗ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಮಾನಸಿಕ ಆರೋಗ್ಯದ ಮಹತ್ವ ಕುರಿತು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಭಾಗ್ಯವತಿ ಎಚ್.ಡಿ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20: ಭಾವಗೀತೆಗಳು, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ, 4.00–ಮಹಿಳಾರಂಗ ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ: ವಕೀಲರು ಹಾಗೂ ಕಾನೂನು ಶಿಕ್ಷಕರಾದ ಸಿರಿ ವಾನಳ್ಳಿ, ಪ್ರಸ್ತುತಿ: ಸಹನಾ, 4.30–ಹಿಂದಿ ಚಿತ್ರಗೀತೆಗಳು, 4.45–ಹಿಂದಿ ಪಾಠ–ಪ್ರಸ್ತುತಿ, ಸ್ಮಿತಾ ಚಿಪ್ಳೂಣ್‌ಕರ್, 5.05: ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆ ಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಮೇವು ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳು ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ಮಹದೇವು ಮತ್ತು ಡಾ.ಡಿ.ಹೆಚ್.ರೂಪಶ್ರೀ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ: ಮೈಸೂರಿನ ವಸಂತ ಮಹಲ್‌ನಲ್ಲಿರುವ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ. 8.30–ಹಿಂದಿ ಚಿತ್ರಗೀತೆಗಳು, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಸುರಭಿ ಪಿ.–ವೀಣಾವಾದನ, 10.00–ನಿನಾದ: ವೈಣಿಕ ವಾಗ್ಗೇಯ ವಾಹಿನಿ, 10.30 ಸವಿನೆನಪು.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಪೀಠ:** ಅಂತರ ಕಾಲೇಜುಗಳ ಹಬ್ಬ–2025–26, ಪ್ರಭಿಗ್ಯಾನ್, ಬೆಳಗ್ಗೆ 9.30ಕ್ಕೆ ಉದ್ಘಾಟನೆ, ಮುಖ್ಯ ಅತಿಥಿ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಕಾಲೇಜು ಆವರಣ.

ದೈನಂದಿನ ಆಕರ್ಷಣೆಗಳು

ಮ. 1, 4 ಮತ್ತು ಸಂಜೆ 7	: ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9	: ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),
ಬೆ. 10ರಿಂದ 5	: ದಸರಾ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ
ಬೆ. 10ರಿಂದ	: ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ.
ಬೆ. 10ರಿಂದ 10ರವರೆಗೆ	: ದಸರಾ ವಸ್ತುಪ್ರದರ್ಶನ.

ಮೈಸೂರು ಮಿತ್ರ ಸೋಮವಾರ 6 ಅಕ್ಟೋಬರ್ 2025

ಡಿ.ಮಾದೇಗೌಡ, ಯು.ಟಿ.ಖಾದರ್, ಸೇರಿ ಮೂವರಿಗೆ ಬೆಂಗಳೂರು ವಿವಿಯಿಂದ ಗೌರವ ಡಾಕ್ಟರೇಟ್


ಡಿ.ಮಾದೇಗೌಡ


ಯು.ಟಿ.ಖಾದರ್

ಮೈಸೂರು, ಅ.5– ವಿಧಾನಪರಿಷತ್ ಮಾಜಿ ಸದಸ್ಯರಾದ ಮೈಸೂರಿನ ಡಿ.ಮಾದೇಗೌಡರು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹಾಗೂ ಜೆ.ಪಿ.ಅಗ್ರಿ ಜೆನೆಟಿಕ್ಸ್ ಸಂಸ್ಥಾಪಕ ಟಿ.ಬಿ.ಪ್ರಸನ್ನ ಅವರು ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದಾರೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಅ.8ರ ಬೆಳಗ್ಗೆ 11.30ಕ್ಕೆ ನಡೆಯಲಿರುವ ಬೆಂಗಳೂರು ವಿವಿಯ 60ನೇ ಘಟಿಕೋತ್ಸವ ಸಮಾರಂಭದಲ್ಲಿ ಈ ಮೂವರು ಗಣ್ಯರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ. ಡಿಆರ್‌ಡಿಓ ನಿವೃತ್ತ ನಿರ್ದೇಶಕ ಡಾ.ಪ್ರಹ್ಲಾದ ರಾಮರಾವ್ ಘಟಿಕೋತ್ಸವ ಭಾಷಣ ಮಾಡಲಿದ್ದು, ಹಲವು ಗಣ್ಯರು ಭಾಗವಹಿಸಲಿದ್ದಾರೆ.

ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಡಿ.ಮಾದೇಗೌಡರು, ಉದ್ಯೋಗಾಧಿಕಾರಿ, ವಕೀಲ, ಭಾರತ ಸೇವಾದಳದ ಸದಸ್ಯ, ಸಿಐಟಿಬಿ ಅಧ್ಯಕ್ಷ, ವಿಧಾನಪರಿಷತ್ ಸದಸ್ಯ, ಹೀಗೆ ಹಂತ ಹಂತವಾಗಿ ವಿವಿಧ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿಬಾಯಿಸುವ ಮೂಲಕ ಜನರ ಪ್ರೀತಿ ಗಳಿಸಿದ್ದಾರೆ. ಮೈಸೂರು ಯೂಥ್ ಹಾಸ್ಟೆಲ್ ರೂವಾರಿಯಾಗಿರುವ ಇವರು ದಶಕಗಳ ಹಿಂದೆಯೇ ನಿರ್ಮಲ ಯೋಜನೆ ಮೂಲಕ ಸ್ವಚ್ಛ ನಗರಿ ಪರಿಕಲ್ಪನೆಗೆ ಒತ್ತಾಸೆಯಾದವರು. ಆಶಾಮಂದಿರ ಯೋಜನೆಯಡಿ ಸಾವಿರಾರು ಕುಟುಂಬಗಳಿಗೆ ಸೂರು ಕಲ್ಪಿಸಿಕೊಟ್ಟು ಮನೆ ಮನೆ ಮಾದೇಗೌಡರೆಂದೇ ಪ್ರಸಿದ್ಧರಾದರು. ಇದೀಗ ಬೆಂಗಳೂರು ಗೌರವ ಡಾಕ್ಟರೇಟ್‌ಗೆ ಭಾಜನರಾಗಿದ್ದು, ಡಿ.ಮಾದೇಗೌಡರ ಅಭಿನಂದನಾ ಸಮಿತಿ ಅಧ್ಯಕ್ಷರಾದ ಲಯನ್ ಎಂ.ವಿ. ದೇವಿಪ್ರಸಾದ್ ಅಭಿನಂದನೆ ಸಲ್ಲಿಸಿದ್ದಾರೆ.

ದಸರಾ ಆಹಾರ ಮೇಳಕ್ಕೆ ತೆರೆ; ಕೊನೆ ದಿನವೂ ಜನವೋ ಜನ


ಆಹಾರ ಮೇಳದಲ್ಲಿ ನೆರೆದಿದ್ದ ಜನಸ್ತೋಮ

ಮೈಸೂರು, ಅ.5(ವಿವಿಹೆಚ್)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ 15 ದಿನಗಳ ಕಾಲ ಆಯೋಜಿಸಲಾಗಿದ್ದ ಆಹಾರ ಮೇಳಕ್ಕೆ ಭಾನುವಾರ ತೆರೆಬಿತ್ತು.

ಕೊನೆಯ ದಿನವಾದ ಇಂದು ಆಹಾರ ಮೇಳಕ್ಕೆ ಜನಜಂಗುಳಿ ಹೆಚ್ಚಾಗಿಯೇ ಸೇರಿತ್ತು. ಏಕಲವ್ಯ ವೃತ್ತ, ಕೃಷ್ಣರಾಜ ಬುಲೇವಾರ್ಡ್ ರಸ್ತೆ ಮಹಾರಾಜ ಕಾಲೇಜು, ಯುವರಾಜ ಕಾಲೇಜು, ಸ್ಪೋರ್ಟ್ಸ್ ಪೆವಿಲಿಯನ್ ಮೈದಾನವೆಲ್ಲಾ ವಾಹನಗಳಿಂದಲೇ ತುಂಬಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಬೈಕ್ ನಿಲ್ಲಿಸಿ ಸವಾರರು ವಿದ್ಯುತ್ ದೀಪಾಲಂಕಾರದೊಂದಿಗೆ ಸೆಲ್ಫಿಗೆ ಮುಗಿಬಿದ್ದರು. ಇತ್ತ ಆಹಾರ ಮೇಳಕ್ಕೆ ಬರುವವರು ತಮ್ಮ ವಾಹನಗಳನ್ನು ಪಾರ್ಕ್ ಮಾಡಲು ಹರಸಾಹಸಪಟ್ಟರು.

ಆಹಾರ ಪ್ರಿಯರು, ಸಾರ್ವಜನಿಕರಿಂದ ಉತ್ತಮ ಪ್ರಶಂಸೆ ಪಡೆದುಕೊಂಡಿದ್ದ ಈ ಬಾರಿಯ ಆಹಾರ ಮೇಳ, ಈ ಹಿಂದಿನ ಎಲ್ಲಾ ಮೇಳಗಳಿಗಿಂತ ಬಹಳ ವಿಶಿಷ್ಟ, ವೈಭವಪೂರ್ಣವಾಗಿತ್ತು. ದಿನದಿಂದ ದಿನಕ್ಕೆ ಜನಸಾಗರವೇ ಹರಿದುಬಂದು, ವಿವಿಧ ರುಚಿಕರವಾದ ಆಹಾರವನ್ನು ಸವಿದು ಬಾಯಿ ಚಪ್ಪರಿಸಿದರು.

ಗುರುವಾರ (ಅ.2) ನಾಡಹಬ್ಬ ದಸರಾ ಜಂಬೂಸವಾರಿ ಮೆರವಣಿಗೆಯೊಂದಿಗೆ ಮೈಸೂರಿನಾದ್ಯಂತ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಕ್ತಾಯವಾಗಿವೆ. ಆದರೆ ದೀಪಾಲಂಕಾರವನ್ನು 14 ದಿನಗಳ ಕಾಲ ವಿಸ್ತರಣೆ ಮಾಡಲಾಗಿದ್ದು, ಅದನ್ನು ನೋಡಲು ಬರುವವರು ಆಹಾರ ಮೇಳಕ್ಕೆ ಆಗಮಿಸುವ ಉದ್ದೇಶ ಹೊಂದಿ, ಮೂರು ದಿನಗಳ ಅವಧಿ ವಿಸ್ತರಣೆ ಮಾಡಲಾಗಿತ್ತು. ಅದರಂತೆ ಇಂದು (ಭಾನುವಾರ, ಅ.5) ಆಹಾರ ಮೇಳಕ್ಕೆ ತೆರೆ ಎಳೆಯಲಾಯಿತು. ಸೆ.22 ರಂದು ದಸರಾ ಉದ್ಘಾಟನೆ ದಿನದಂದೇ ಆರಂಭವಾಗಿದ್ದ ಈ ಮೇಳ ಸತತ 15 ದಿನಗಳ ಕಾಲ ಜನರಿಗೆ ಪ್ರಿಯಕರವಾದ ತಿನಿಸುಗಳನ್ನು ಬಡಿಸುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

165 ಮಳಿಗೆಗಳು, 49 ಮಾಂಸಹಾರಿ ಮಳಿಗೆಗಳು ಹಾಗೂ 116 ಸಸ್ಯಹಾರಿ ಮಳಿಗೆಗಳು ಈ ಬಾರಿಯ ಮೈಸೂರು ದಸರಾ ಆಹಾರ ಮೇಳದಲ್ಲಿದ್ದು, ಬೊಂಬು ಬಿರಿಯಾನಿ, ಜೋಳದ ರೊಟ್ಟಿಯಂತಹ ಸಾಂಪ್ರದಾಯಿಕ ಖಾದ್ಯಗಳು ಸೇರಿದಂತೆ ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಹೊರ ರಾಜ್ಯದ ಆಹಾರ ಪದ್ಧತಿಯಡಿಯಲ್ಲಿ ಕಾಶ್ಮೀರಿ, ಪಂಜಾಬಿ, ರಾಜಸ್ಥಾನಿ, ಈಶಾನ್ಯ ಭಾರತ ಆಹಾರ ಪದ್ಧತಿ, ಆಂಧ್ರ ಶೈಲಿ, ಕೇರಳ ಶೈಲಿ, ತಮಿಳುನಾಡು ಶೈಲಿ, ಮರಾಠಿ, ಅರೇಬಿಯನ್ ಶೈಲಿಯಲ್ಲಿನ ಸಸ್ಯಾಹಾರಿ ಮತ್ತು ಮಾಂಸಹಾರಿ ಶೈಲಿಯ ವಿಶೇಷ ಆಹಾರ ತಿಂಡಿಪ್ರಿಯರ ಮನ ಗೆಲ್ಲುವಲ್ಲಿ ಯಶಸ್ವಿಯಾದವು.

ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಆಹಾರ ಮೇಳ ಉಪ ಸಮಿತಿಯ ಉಪ ವಿಶೇಷಾಧಿಕಾರಿ ಮಂಟೆಸ್ವಾಮಿ 15 ದಿನಗಳ ಮೇಳಕ್ಕೆ ಸುಮಾರು 5 ರಿಂದ 6 ಲಕ್ಷ ಮಂದಿ ಬಂದು ತಮಗಿಷ್ಟದ ಖಾದ್ಯಗಳನ್ನು ಸವಿದಿದ್ದಾರೆ. ದಿನವೊಂದಕ್ಕೆ 25 ಸಾವಿರ ಮಂದಿ ಬಂದಿರುವುದುಂಟು. ವೀಕೆಂಡ್‌ಗಳಲ್ಲಿ 50 ಸಾವಿರ ಜನರು ಆಗಮಿಸಿರುವುದು ಉಂಟು. ಇನ್ನು ಈ ಬಾರಿ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ನಮ್ಮ ಪೌರಕಾರ್ಮಿಕರು ತಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಒಟ್ಟು 120 ಕ್ಕೂ ಹೆಚ್ಚಿನ ಪೌರಕಾರ್ಮಿಕರು ಮೂರು ಪಾಳಿಯಲ್ಲಿ ನಿರಂತರವಾಗಿ ಕರ್ತವ್ಯ ನಿರ್ವಹಿಸಿದ್ದು, ಮೇಳದ ಯಶಸ್ಸಿಗೆ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಇನ್ನು ಆಹಾರ ಮೇಳದ ಕೊನೆಯ ದಿನಂದು ಮಹಾರಾಜ ಕಾಲೇಜು ಮೈದಾನದಲ್ಲಿ ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕನ್ನಡದ ಯುವ ಗಾಯಕ ಆರ್. ಎಂ. ವಶಿಷ್ಠ ಅವರ ವಶಿಷ್ಠ ಗಾಯನ ತಂಡದಿಂದ ಕನ್ನಡದ ಭಕ್ತಿಗೀತೆ, ಭಾವಗೀತೆ ಹಾಗೂ ಕನ್ನಡ ಚಲನಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಿದರು. ಕನ್ನಡ ಹಾಡುಗಳಿಗೆ ನೆರೆದಿದ್ದ ಶ್ರೋತೃಗಳು ಶಿಳ್ಳೆ ಚಪ್ಪಾಳೆ ನೀಡುವ ಮೂಲಕ ಬೆಂಬಲ ಸೂಚಿಸಿದರು.

"ಜಿಲ್ಲಾಡಳಿತ, ಉಪ ಸಮಿತಿ, ಪೌರ ಕಾರ್ಮಿಕರ ಶ್ರಮ, ಪೊಲೀಸ್ ಇಲಾಖೆ ಎಲ್ಲರ ಒಗ್ಗೂಡಿಕೆಯಿಂದ ಈ ಬಾರಿಯ ಆಹಾರ ಮೇಳ ಯಶಸ್ವಿಯಾಗಿದೆ. ಆಹಾರ ಮೇಳದ ಯಶಸ್ಸಿನಲ್ಲಿ ಸಾರ್ವಜನಿಕರ ಪಾತ್ರವೂ ಪ್ರಮುಖವಾಗಿದೆ. ಜನರಿಗೆ ಅಗತ್ಯವಾದದ್ದನ್ನು ನೀಡಿದ್ದೇವೆ ಎಂಬ ವಿಶ್ವಾಸ ನಮಗಿದೆ.

-ಮಂಟೆಸ್ವಾಮಿ, ಆಹಾರ ಮೇಳ ಉಪಸಮಿತಿ ಉಪ ವಿಶೇಷಾಧಿಕಾರಿ.

ಮಹಿಳಾ ಕ್ರಿಕೆಟ್‌ನಲ್ಲೂ ಪಾಕ್ ಆಟಗಾರರ ಮಣಿಸಿದ ಭಾರತ


ಪಾಕಿಸ್ತಾನ ವಿರುದ್ಧ ಗೆದ್ದ ಭಾರತೀಯ ಆಟಗಾರ್ತಿಯರ ಸಂಭ್ರಮ.

ಕೊಲಂಬೊ, ಅ.5(ವಿವಿಹೆಚ್)– ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡ ಭರವಸೆಯ ಆಟಗಾರ್ತಿ ಕ್ರಾಂತಿ ಗೌಡ ಹಾಗೂ ದೀಪ್ತಿ ಶರ್ಮಾ ಅವರು ಜವಾಬ್ದಾರಿಯುತ ಆಟದ ನೆರವಿನಿಂದ ಪಾಕಿಸ್ತಾನವನ್ನು 88 ರನ್‌ಗಳಿಂದ ಮಣಿಸಿ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಎರಡನೇ ಗೆಲುವು ದಾಖಲಿಸಿದೆ.

ಇಲ್ಲಿನ ಆರ್.ಪ್ರೇಮದಾಸ ಕ್ರಿಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತವು 50 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು 247 ರನ್ ಗಳಿಸಲಷ್ಟೇ ಶಕ್ತವಾಯಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಪಾಕಿಸ್ತಾನ 43 ಓವರ್‌ಗಳಲ್ಲಿ ಆಲ್‌ಔಟ್ ಆಗುವ ಮೂಲಕ 159 ರನ್ ಗಳಿಸಿ 88 ರನ್‌ಗಳ ಅಂತರದಿಂದ ಸೋಲೊಪ್ಪಿಕೊಂಡಿತು.

ಭಾರತದ ಪರ ಆರಂಭಿಕ ಆಟಗಾರ್ತಿಯರಾದ ಪ್ರತೀಕಾ ರಾವಲ್ 31 ರನ್ (37 ಎಸೆತ), ಸ್ಮೃತಿ ಮಂದಾನ 23 ರನ್ (32 ಎಸೆತ) ಮೊದಲ ವಿಕೆಟ್‌ಗೆ 48 ರನ್‌ಗಳ ಜೊತೆಯಾಟ ಆಡಿದರು.

ಹರ್ಲೀನ್ ಡಿಯೋಲ್ 46 ರನ್ (65 ಎಸೆತ), ಜೆಮಿಮಾ ರಾಡ್ರಿಗಸ್ 32 ರನ್ (37 ಎಸೆತ) ಹಾಗೂ ರಿಚಾ ಘೋಷ್ 35 ರನ್ (20 ಎಸೆತ) ತಂಡದ ಮೊತ್ತವನ್ನು ಹಿಗ್ಗಿಸಿದರು.

ಪಾಕ್ ಪರ ಡಯಾನಾ ಬೇಗ್ 4 ವಿಕೆಟ್, ನಾಯಕಿ ಫಾತಿಮಾ ಸನಾ ಹಾಗೂ ಸಾದಿಯಾ ಇಕ್ಬಾಲ್ ತಲಾ 2 ವಿಕೆಟ್ ಪಡೆಯುವ ಮೂಲಕ ಭಾರತದ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಭಾರತ ನೀಡಿದ 247 ರನ್‌ಗಳ ಗುರಿ ಬೆನ್ನತ್ತಿದ ಪಾಕಿಸ್ತಾನಕ್ಕೆ ಟೀಂ ಇಂಡಿಯಾ ಬೌಲರ್‌ಗಳು ಕಾಡಿದರು. ಪಾಕಿಸ್ತಾನ ತಂಡದ ಪರ ಸಿದ್ರಾ ಅಮೀನ್ ಅಮೋಘ ಆಟದ ಪ್ರದರ್ಶನ ನೀಡಿ ಮಿಂಚಿದರು. ಇವರು 9 ಬೌಂಡರಿ, 1 ಸಿಕ್ಸರ್ ನೆರವಿನಿಂದ 81 ರನ್ ಸಿಡಿಸಿದರು. ಉಳಿದಂತೆ ನಟಾಲಿಯಾ ಪರ್ವೈಜ್ 33 ರನ್ ಸಿಡಿಸಿದರು. ಬಳಿಕ ಬಂದ ಮತ್ತ್ಯಾರಿಂದಲೂ ನಿರೀಕ್ಷಿತ ಆಟ ಕಂಡುಬರಲೇ ಇಲ್ಲ. ಬರೋಬ್ಬರಿ 8 ಆಟಗಾರ್ತಿಯರು ಒಂದಕ್ಕಿ ಮೊತ್ತಕ್ಕೆ ಔಟಾಗುವ ಮೂಲಕ ಪಾಕ್ ಅಂತಿಮವಾಗಿ ಪಾಕ್ 159 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಪರ ಕ್ರಾಂತಿ ಗೌಡ ಹಾಗೂ ದೀಪ್ತಿ ಶರ್ಮಾ ತಲಾ 3 ವಿಕೆಟ್ ಕಬಳಿಸಿದರು. ಸ್ನೇಹ್ ರಾಣ ಎರಡು ವಿಕೆಟ್ ಪಡೆದು ಮಿಂಚಿದರು. ಉತ್ತಮ ಬೌಲಿಂಗ್ ಪ್ರದರ್ಶನ ತೋರಿದ ಕ್ರಾಂತಿ ಗೌಡ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮುಂದುವರಿದ ನೋ ಶೇಕ್ ಹ್ಯಾಂಡ್ ಸಂಸ್ಕೃತಿ




ಪಾಕ್ ನಾಯಕಿಗೆ ಹಸ್ತಲಾಘವ ನೀಡದ ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್

ಪಹಲ್ಗಾಮ್ ದಾಳಿ ಬಳಿಕ ಮೊದಲ ಬಾರಿಗೆ ಏಷ್ಯಾಕಪ್ ಪಂದ್ಯಾವಳಿಯಲ್ಲಿ ಮುಖಾಮುಖಿಯಾಗಿದ್ದ ಭಾರತ ಮತ್ತು ಪಾಕಿಸ್ತಾನ ಪುರುಷರ ತಂಡಗಳು ಪರಸ್ಪರ ಹಸ್ತಲಾಘವ ನೀಡದೇ ಹೋಗಿದ್ದರು. ಟೂರ್ನಿಯಲ್ಲಿ ಭಾರತ ಗೆದ್ದರೂ ಪಾಕಿಸ್ತಾನ ನಖ್ವಿ ಅವರಿಂದ ಟ್ರೋಫಿ ಸ್ವೀಕರಿಸಲು ನಿರಾಕರಿಸಿತ್ತು.

ಇಂದು ಭಾರತ ಅತಿಥ್ಯದಲ್ಲಿ ನಡೆಯುತ್ತಿರುವ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಬಾರಿಗೆ ಮುಖಾಮುಖಿಯಾಗಿದ್ದ ಭಾರತ ಮತ್ತು ಪಾಕಿಸ್ತಾನ ಮಹಿಳಾ ತಂಡಗಳು ಟಾಸ್ ವೇಳೆ ಪರಸ್ಪರ ಹಸ್ತಲಾಘವ ನೀಡಲು ನಿರಾಕರಿಸಿದ ಘಟನೆ ನಡೆಯಿತು. ಇನ್ನು ಟಾಸ್ ವೇಳೆ ತಪ್ಪು ನಿರ್ಧಾರವೊಂದು ಜರುಗಿತು. ಪಂದ್ಯದ ಟಾಸ್ ವೇಳೆ ಭಾರತದ ನಾಯಕಿ ಹರ್ಮನ್‌ಪ್ರೀತ್ ಅವರು ನಾಣ್ಯವನ್ನು ಚಿಮ್ಮಿಸಿದಾಗ, ಪಾಕ್ ನಾಯಕಿ ಫಾತಿಮಾ ಸನಾ ಅವರು 'ಟೇಲ್ಸ್' ಎಂದು ಹೇಳಿದ್ದಾರೆ. ಆದರೆ, ಪಂದ್ಯದ ರೆಫರಿ ಶಾಂಡ್ರೆ ಫ್ರಿಟ್ಸ್ ಹಾಗೂ ವೀಕ್ಷಕ ವಿವರಣೆಗಾರ್ತಿ ಮೆಲ್ ಜೋನ್ಸ್ ಅವರು 'ಹೆಡ್' ಎಂದು ತಪ್ಪಾಗಿ ಕೇಳಿಸಿಕೊಂಡಿದ್ದಾರೆ. ನಾಣ್ಯವು ಹೆಡ್ ಬಿದ್ದಿತ್ತಾದರೂ ರೆಫರಿ ಸೂಚನೆಯಂತೆ ಪಾಕ್ ನಾಯಕಿಯು ಬೌಲಿಂಗ್ ಆಯ್ದುಕೊಂಡಿದ್ದರು.

ಟಾಸ್ ವೇಳೆ ನಡೆದ ಈ ಗೊಂದಲಕ್ಕೆ ಭಾರತ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ಅವರು ತಕ್ಷಣವೇ ಯಾವುದೇ ಪ್ರತಿರೋಧ ವ್ಯಕ್ತಪಡಿಸಲಿಲ್ಲ.

ಬಿ. ನಾಗೇಶಗೆ ಪಿಹೆಚ್.ಡಿ ಪದವಿ



ಮೈಸೂರು, ಅ. 5– ಡಾ. ಎನ್.ಆರ್. ಚಂದ್ರೇಗೌಡ ಅವರ ಮಾರ್ಗದರ್ಶನದಲ್ಲಿ ಬಿ. ನಾಗೇಶ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಬಸವಣ್ಣ ಮತ್ತು ಕುವೆಂಪು ಅವರ ವೈಚಾರಿಕತೆ : ತೌಲನಿಕ ಅಧ್ಯಯನ ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಸ್ತು ಪ್ರದರ್ಶನಕ್ಕೆ ಭಾರೀ ಜನ...


ದಸರಾ ಸಂಪನ್ನಗೊಂಡರೂ ಮೈಸೂರಿನಲ್ಲಿ ಜನ ದಟ್ಟಣೆ ಮುಂದುವರೆದಿದ್ದು, ಪ್ರವಾಸಿ ತಾಣಗಳಿಗೆ ಜನರ ದಂಡೇ ಹರಿದು ಬರುತ್ತಿದೆ. ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ವಸ್ತು ಪ್ರದರ್ಶನಕ್ಕೂ ಜನ ಭಾರೀ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದು, ಭಾನುವಾರ ಸಂಜೆ ವಸ್ತು ಪ್ರದರ್ಶನದ ಮುಖ್ಯದ್ವಾರದ ಬಳಿ ಭಾರೀ ಪ್ರಮಾಣದಲ್ಲಿ ಜನ ನೆರೆದಿರುವುದನ್ನು ಚಿತ್ರದಲ್ಲಿ ಕಾಣಬಹುದಾಗಿದೆ.

ಇಂಧನ ಸಚಿವ ಕೆಜೆ ಜಾರ್ಜ್ ವಿಶೇಷಾಧಿಕಾರಿ ಲೋಕಾಯುಕ್ತ ಬಲೆಗೆ


ಜ್ಯೋತಿ ಪ್ರಕಾಶ್ ಹಾಗೂ ಅವರ ಕಾರು ಚಾಲಕ ನವೀನ್

ಬೆಂಗಳೂರು, ಅ.5– ಇಂಧನ ಸಚಿವ ಕೆಜೆ ಜಾರ್ಜ್ ವಿಶೇಷ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹಾಗು ಕೆಪಿಟಿಸಿಎಲ್ ಕಾರ್ಯನಿರ್ವಾಹಕ ಅಧಿಕಾರಿ 50 ಸಾವಿರ ಲಂಚ ಪಡೆಯುವಾಗ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಬಲೆಗೆ ಬಿದ್ದಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. ಕೆಪಿಟಿಸಿಎಲ್‌ನ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿರುವ ಜ್ಯೋತಿ ಪ್ರಕಾಶ್ ಅವರು, ಇಂಧನ ಸಚಿವ ಕೆಜೆ ಜಾರ್ಜ್ ಅವರ ವಿಶೇಷಾಧಿಕಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ವಿದ್ಯುತ್ ಸಂಪರ್ಕಕ್ಕೆ ಅನುಮತಿ (ಎನ್‌ಒಸಿ) 50 ಸಾವಿರ ರೂಪಾಯಿ ಲಂಚದ ಹಣ ಸ್ವೀಕರಿಸುತ್ತಿದ್ದಾಗಲೇ ಜ್ಯೋತಿ ಪ್ರಕಾಶ್ ಹಾಗೂ ಅವರ ಕಾರು ಚಾಲಕ ನವೀನ್ ಎಂಬಾತನನ್ನು ಬಂಧಿಸಲಾಗಿದೆ. ಬ್ಯಾಡರಹಳ್ಳಿಯ ನಿವಾಸಿಯಾದ ಕೆ.ಎಂ. ಅನಂತರಾಜು ಅವರು ಬಡಾವಣೆ ನಿರ್ಮಾಣ ಕಾಮಗಾರಿಗೆ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ್ದರು.

ಆದರೆ ಇದಕ್ಕೆ ಎನ್‌ಒಸಿ ನೀಡಲು ಜ್ಯೋತಿ ಪ್ರಕಾಶ್ ಅವರು 1 ಲಕ್ಷ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು. ಈ ಕುರಿತು ಅನಂತರಾಜು ಅವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಈ ದೂರಿನನ್ವಯ ಕಾರ್ಯಾಚರಣೆ ಕೈಗೊಂಡ ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜು ನೇತೃತ್ವದ ತಂಡ ಅನಂತರಾಜು ಅವರಿಂದ 50 ಸಾವಿರ ರೂ. ಸ್ವೀಕರಿಸುತ್ತಿದ್ದ ಜ್ಯೋತಿ ಪ್ರಕಾಶ್ ಮತ್ತು ಅವರ ಚಾಲಕ ನವೀನ್‌ನನ್ನು ಅರೆಸ್ಟ್ ಮಾಡಿದ್ದಾರೆ.

ಹಿರಿಯ ಸಾಹಿತಿ ಮೊಗಳ್ಳಿ ಗಣೇಶ್ ಇನ್ನಿಲ್ಲ



ಹೊಸಪೇಟೆ: ಹಿರಿಯ ಸಾಹಿತಿ ಪ್ರೊ.ಮೊಗಳ್ಳಿ ಗಣೇಶ್ ಅವರು ಭಾನುವಾರ ವಿಧಿವಶರಾಗಿದ್ದಾರೆ. ಅವರಿಗೆ 62 ವರ್ಷ ವಯಸ್ಸಾಗಿತ್ತು. ಮೊಗಳ್ಳಿ ಗಣೇಶ್ ಪ್ರಸ್ತುತ ಹಂಪಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ಮೊಗಳ್ಳಿ ಗಣೇಶ್ ಅವರು 1963, ಜುಲೈ 1ರಂದು ಚನ್ನಪಟ್ಟಣ ತಾಲ್ಲೂಕಿನ ಸಂತೆಮೊಗೇನ ಹಳ್ಳಿಯಲ್ಲಿ ಜನಿಸಿದರು. ಬಾಲ್ಯದ ದಿನಗಳನ್ನು ಹಳ್ಳಿಯಲ್ಲಿ ಕಳೆದ ಗಣೇಶ್ ಅವರು ಹಳ್ಳಿ ಜೀವನದ ಅನುಭವಗಳನ್ನು ಆಧರಿಸಿ ಅವರು ವಿಶಿಷ್ಟ ಕಥೆಗಳನ್ನು ಬರೆಯುತ್ತಿದ್ದರು. ಅವರು ಬರೆದ ಬುಗುರಿ, ನನ್ನಜ್ಜನಿಗೊಂದಾಸೆಯಿತ್ತು ಒಂದು ಹಳೆಯ ಚಡ್ಡಿ ಇತ್ಯಾದಿ ಕಥೆಗಳು ಕನ್ನಡದ ಅತ್ಯುತ್ತಮ ಸಣ್ಣ ಕಥೆಗಳಾಗಿ ಗುರುತಿಸಲ್ಪಟ್ಟಿವೆ.

ಅ.9ಕ್ಕೆ ಹಾಸನಾಂಬ ದರ್ಶನೋತ್ಸವ ಆರಂಭ; ಜಿಲ್ಲಾಡಳಿತದಿಂದ ಸಿದ್ಧತೆ



ಹಾಸನ, ಅ.5– ಹಾಸನದಲ್ಲಿ ವರ್ಷಕ್ಕೊಮ್ಮೆ ನಡೆಯುವ ಶ್ರೀ ಹಾಸನಾಂಬ ದೇವಿಯ ದರ್ಶನೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಮುಂದಿನ ವಾರದಿಂದ ಭಕ್ತರಿಗೆ ಹಾಸನಾಂಭೆ ದರ್ಶನ ಸಿಗಲಿದೆ. ಈಗಾಗಲೇ ಜಿಲ್ಲಾಡಳಿತ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ.

ಇದೇ ಗುರುವಾರ, ಅ.9 ರಂದು ಮಧ್ಯಾಹ್ನ 12.30ಕ್ಕೆ ದೇವಾಲಯದ ಗರ್ಭಗುಡಿಯ ಬಾಗಿಲು ತೆರೆಯಲಿದ್ದು, ಈ ವರ್ಷದ ಜಾತ್ರಾ ಮಹೋತ್ಸವವು ಅ.9 ರಿಂದ 23 ರವರೆಗೆ ನಡೆಯಲಿದೆ. ಸಾರ್ವಜನಿಕರಿಗೆ ಅ.10 ರಿಂದ 22 ರವರೆಗೆ ದರ್ಶನಕ್ಕೆ ಅವಕಾಶವಿರುತ್ತದೆ. ಆದರೆ, ಮೊದಲ ದಿನ (ಅ.9) ಮತ್ತು ಕೊನೆಯ ದಿನ (ಅ.23) ಸಾರ್ವಜನಿಕ ದರ್ಶನಕ್ಕೆ ಅವಕಾಶವಿರುವುದಿಲ್ಲ.

ವರ್ಷಕ್ಕೊಮ್ಮೆ ದರ್ಶನ ನೀಡುವ ಹಾಸನಾಂಬೆ: ಹಾಸನಾಂಬ ದೇವಾಲಯವು ವರ್ಷಕ್ಕೊಮ್ಮೆ ಮಾತ್ರ ತೆರೆಯಲಾಗುತ್ತದೆ. ಇದರಿಂದ ಈ ಉತ್ಸವಕ್ಕೆ ವಿಶೇಷ ಮಹತ್ವವಿದೆ. ಲಕ್ಷಾಂತರ ಭಕ್ತರು ದೇವಿಯ ದರ್ಶನಕ್ಕಾಗಿ ದೇಶದ ವಿವಿಧ ಭಾಗಗಳಿಂದ ಹಾಸನಕ್ಕೆ ಆಗಮಿಸುತ್ತಾರೆ. ಈ ಬಾರಿಯ ಜಾತ್ರೆಯನ್ನು ಸುಗಮವಾಗಿ ಮತ್ತು ಸುರಕ್ಷಿತವಾಗಿ ನಡೆಸಲು ಜಿಲ್ಲಾಡಳಿತವು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಭಕ್ತರ ಸುಗಮ ದರ್ಶನಕ್ಕಾಗಿ ಬ್ಯಾರಿಕೇಡ್, ಸರತಿ ಸಾಲು ವ್ಯವಸ್ಥೆ, ಜರ್ಮನ್ ಟೆಂಟ್‌ಗಳ ಸ್ಥಾಪನೆ, ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ, ವಿದ್ಯುತ್ ದೀಪಾಲಂಕಾರ ಮತ್ತು ಇತರ ಅಗತ್ಯ ಕಾರ್ಯಗಳನ್ನು ತೀವ್ರಗೊಳಿಸಲಾಗಿದೆ.

ದೇವಾಲಯದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಡಲು ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಭಕ್ತರ ಭದ್ರತೆಗಾಗಿ ಪೊಲೀಸ್ ಇಲಾಖೆಯಿಂದ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಜನಸಂದಣಿಯ ನಿರ್ವಹಣೆಗೆ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜೊತೆಗೆ, ತಾತ್ಕಾಲಿಕ ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳು ಮತ್ತು ತುರ್ತು ಸೇವೆಗಳನ್ನು ಒದಗಿಸಲಾಗುತ್ತಿದೆ. ದೇವಾಲಯದ ಸುತ್ತಲಿನ ರಸ್ತೆಗಳಲ್ಲಿ ದಟ್ಟಣೆ ತಡೆಗಟ್ಟಲು ವಿಶೇಷ ಸಂಚಾರ ವ್ಯವಸ್ಥೆಯನ್ನು ರೂಪಿಸಲಾಗಿದೆ.

ಹಾಸನಾಂಬ ದೇವಿಯ ದರ್ಶನಕ್ಕಾಗಿ ದೂರದ ಊರುಗಳಿಂದ ಬರುವ ಭಕ್ತರಿಗೆ ಸ್ಥಳೀಯ ಆಡಳಿತವು ತಂಗುವ ಸೌಕರ್ಯಗಳನ್ನು ಒದಗಿಸಲು ಯೋಜನೆ ರೂಪಿಸಿದೆ.

ಸುಶ್ರಾವ್ಯವಾಗಿ ಸೂಸಿದ ಶ್ರೀಕೃಷ್ಣನ ನಾಮಗಳ ವೈಶಿಷ್ಟ್ಯ

ಮುಗ್ಧ ವೀರಾ ಗೋಡ್ಸೆ ಕಂಠಸಿರಿಯಲ್ಲಿ ಶ್ರೀಕೃಷ್ಣನ ಗುಣವಿಶೇಷಣದ ಗುಣಗಾನ

ಮೈಸೂರು ಬೆಲ್ಲಿ ರೂಮ್‌ನಲ್ಲಿ ಗೋಪಾಲನಿಗೆ ಗೀತಾರಾಧನೆ


ಮೈಸೂರಿನ ಗೋಕುಲಂ 2ನೇ ಹಂತದ ಮೈಸೂರು ಬೆಲ್ಲಿ ರೂಮ್‌ನಲ್ಲಿ ಭಾನುವಾರ ಬಾಲಿವುಡ್ ನಟಿ ಮುಗ್ಧ ವೀರಾ ಗೋಡ್ಸೆ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು.

ಮೈಸೂರು,ಅ.5(ಪಿಎಂ)– ಶ್ರೀ ಕೃಷ್ಣನ ನಾಮಗಳ ವೈಶಿಷ್ಟ್ಯ ಹಾಗೂ ಗುಣವಿಶೇಷಣವು ಬಾಲಿವುಡ್ ನಟಿ ಮುಗ್ಧ ವೀರಾ ಗೋಡ್ಸೆ ಅವರ ಕಂಠಸಿರಿಯಲ್ಲಿ ಸುಶ್ರಾವ್ಯವಾಗಿ ಸೂಸಿ ನೆರೆದವರಲ್ಲಿ ಭಕ್ತಿಭಾವ ಮೂಡಿಸಿತು.

ಮೈಸೂರಿನ ಗೋಕುಲಂ 2ನೇ ಹಂತದ ಮೈಸೂರು ಬೆಲ್ಲಿ ರೂಮ್‌ನಲ್ಲಿ ಭಾನುವಾರ ಮೈಸೂರು ಬೆಲ್ಲಿ ಗ್ರೂಪ್ ವತಿಯಿಂದ ಹಮ್ಮಿಕೊಂಡಿದ್ದ ಶ್ರೀಕೃಷ್ಣನ ಕುರಿತ ಭಜನೆ ಹಾಗೂ ಕೀರ್ತನೆಯ ಗಾಯನ ಕಾರ್ಯಕ್ರಮದಲ್ಲಿ ಕೃಷ್ಣ ವಂದನಾ ಶೀರ್ಷಿಕೆಯಡಿ 108 ಹೆಸರುಗಳು ಹಾಗೂ ಗುಣಗಳ ಗೀತಾರಾಧನೆಯನ್ನು ಅವರು ಸಾದರಪಡಿಸಿದರು.

'ಕೃಷ್ಣ ಕೃಷ್ಣ ಸರ್ವವ್ಯಾಪಿ ಶ್ರೀಕೃಷ್ಣ... ಮುರಾರಿ...' ಸೇರಿದಂತೆ ವಿವಿಧ ಗೀತೆಗಳಲ್ಲಿ ಶ್ರೀಕೃಷ್ಣ ಆರಾಧನೆಯಲ್ಲಿ ತಲ್ಲೀನರಾದ ಮುಗ್ಧ ವೀರಾ ಗೋಡ್ಸೆ ಅವರು, ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದರು. ಇದಕ್ಕೂ ಮುನ್ನ 'ಓಂ ನಮೋ ಭಗವತೇ ವಾಸುದೇವ...' ಗೀತೆಯೊಂದಿಗೆ ತಮ್ಮ ಭಕ್ತಿಗೀತೆಯ ಸುಧೆ ಶುರು ಮಾಡಿದ ಅವರು, ಸಭಿಕರನ್ನು ಭಕ್ತಿಯಲ್ಲಿ ಪರವಶರಾಗುವಂತೆ ಮಾಡಿ ಭಕ್ತಿಯ ಪರಾಕಾಷ್ಠೆ ಮೆರೆದರು.

ಆ ಬಳಿಕ ಶ್ರೀಕೃಷ್ಣನ ಪ್ರೀತಿಯ ವಾದ್ಯವಾದ ಕೊಳಲು ನಾದ ಹೊಮ್ಮಿತು. ಪಂಡಿತ್ ರವಿಶಂಕರ್ ಮಿಶ್ರಾ ಅವರು ಕೊಳಲು ವಾದನದ ಮೂಲಕ ಶ್ರೋತೃಗಳನ್ನು ಮೈಮರೆಯುವಂತೆ ಮಾಡಿದರು. ಕೊಳಲು ನಾದಕ್ಕೆ ಸಭಿಕರು ಚಪ್ಪಾಳೆಯ ತಾಳ ಹಾಕಿ ಸಂಭ್ರಮಿಸಿದರು. 15 ನಿಮಿಷಕ್ಕೂ ಹೆಚ್ಚು ಕಾಲ ಕೊಳಲು ನಾದದ ಹೊನಲು ಹರಿದು ಸಭಿಕರು ಮನಸೋತು ಅಭಿಮಾನದ ಚಪ್ಪಾಳೆ ನೀಡಿದರು. ಅಲ್ಲದೆ, ಭಕ್ತಿಗೀತೆ ಗಾಯಕ ಅವಿರಾಸ್ ಅವರು, 'ಗೋವಿಂದ ಗೋಪಾಲ ರಾಧೆ ರಾಧೆ...' ಸೇರಿದಂತೆ ಭಜನೆಗಳನ್ನು ಪ್ರಸ್ತುಪಡಿಸಿ ಸಭಿಕರನ್ನು ಭಕ್ತಿಯ ಅಲೆಯಲ್ಲಿ ತೇಲಿಸಿದರು.

ಇದಕ್ಕೂ ಮುನ್ನ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಬೆಲ್ಲಿ ಗ್ರೂಪ್‌ನ ಎನ್.ಎಸ್. ಆನಂದ್, ನಮ್ಮ ಬೆಲ್ಲಿ ಮೆಡಿಟೇಷನ್ ಗ್ರೂಪ್ ಮೈಸೂರು ಘಟಕ ವತಿಯಿಂದ ಇಂದಿನ ಭಜನೆ ಹಾಗೂ ಕೀರ್ತನೆ ಗಾಯನ ಆಯೋಜನೆ ಮಾಡಲಾಗಿದೆ. ಗೋವಾ, ದೆಹಲಿ, ಮುಂಬೈ, ಬೆಂಗಳೂರು ಸಹ ಆಯಾ ಬೆಲ್ಲಿ ಗ್ರೂಪ್‌ಗಳಿಂದ ಈ ಕಾರ್ಯಕ್ರಮ ನಡೆಸಲಾಗಿದೆ ಈಗ ಮೈಸೂರಲ್ಲಿ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಆಧ್ಯಾತ್ಮಿಕ ಗುರು ತರ್ನೀವ್ ಜೀ ಅವರು ಬೆಲ್ಲಿ ಮಾಸ್ಟರ್ ಎಂದು ಖ್ಯಾತನಾಮರಾಗಿದ್ದು, ಅವರು ಬೆಲ್ಲಿ ಮೆಡಿಟೇಷನ್‌ನ ಮಾರ್ಗದರ್ಶಕರು. ಅವರ ಪ್ರಸ್ತುತ ಕೆನಾಡದಲ್ಲಿದ್ದು, ಮೈಸರಿನಲ್ಲೂ ಮೂರು ವರ್ಷಗಳ ಕಾಲ ಇದ್ದರು. ಅವರು ಹಾಗೂ ನಾನು ಸೇರಿ ಪ್ರತಿವರ್ಷ ನ.ರತ್ನ ಅವರ ಹೆಸರಿನಲ್ಲಿ ಉದೋನ್ಮುಖ ರಂಗಭೂಮಿ ಕಲಾವಿದರಿಗೆ 'ರಂಗರತ್ನ' ಎಂಬ ಪ್ರಶಸ್ತಿ ಸಹ ಕೊಡಮಾಡುತ್ತಿದ್ದೇವೆ. ತರ್ನೀವ್ ಅವರಿಗೆ ಮೈಸೂರು ಸಾಂಸ್ಕೃತಿಕ ಕೇಂದ್ರವಾಗಿ ಇನ್ನು ಎತ್ತರಕ್ಕೆ ಬೆಳೆಯಬೇಕೆಂಬ ಕಳಕಳಿ ಇದೆ ಎಂದು ಹೇಳಿದರು.

ತರ್ನೀವ್ ಜೀ ಅವರು ಮೆಡಿಟೇಷನ್ ಹೇಳಿಕೊಡಲು ಯಾವುದೇ ಶುಲ್ಕ ಬಯಸುವುದಿಲ್ಲ. ಆಹಾರದ ಬಗ್ಗೆಯೂ ಯಾವುದೇ ನಿರ್ಬಂಧ ವಿಧಿಸುವುದಿಲ್ಲ. ನಮ್ಮ ದೇಹವನ್ನು ನಾವು ಅವಲೋಕಿಸುವುದೇ ಬೆಲ್ಲಿ ಮೆಡಿಟೇಷನ್. ಈ ಮೆಡಿಟೇಷನ್‌ನ ಒಂದು ಭಾಗ ಈ ರೀತಿಯ ಸಂಗೀತ. ನಮ್ಮ ಗುರುಗಳಾದ ತರ್ನೀವ್ ಜೀಯವರು ಕಳೆದ 20 ವರ್ಷಗಳಿಂದ ದಿನಕ್ಕೆ 9 ಗಂಟೆ ಮೆಡಿಟೇಷನ್ ಮಾಡುತ್ತಿದ್ದಾರೆ. ನಮ್ಮ ಯಾವುದೇ ಸಮಸ್ಯೆಯನ್ನು ಅವರ ಬಳಿ ಹೇಳಿಕೊಂಡರೆ ಪರಿಹಾರ ತಿಳಿಸಿಕೊಡುತ್ತಾರೆ ಎಂದು ತಿಳಿಸಿದರು. ಮುಗ್ಧ ವೀರಾ ಗೋಡ್ಸೆ ಅವರ ಪತಿಯೂ ಆದ ಬಾಲಿವುಡ್ ನಟ ರಾಹುಲ್ ದೇವ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಮದುವೆಗೆ ಒಂದು ದಿನ ಬಾಕಿಯಿರುವಾಗ
ಪತ್ನಿಯಾಗುವವಳಿಂದ ಗುಂಡನಿಗೆ ಮೆಸೇಜ್ ಬಂತು.
'ನಮ್ಮಿಬ್ಬರ ಮದುವೆ ಆಗುವುದಿಲ್ಲ. ನನ್ನ
ಮದುವೆ ಬೇರೆ ಕಡೆ ಫಿಕ್ಸ್ ಆಗಿದೆ. ನನ್ನನ್ನು ಕ್ಷಮಿಸು...'
ಗುಂಡನಿಗೆ ಟೆನ್ಷನ್ ಆಯ್ತು.
ಕೆಲವೇ ಕ್ಷಣಗಳ ಅಂತರದಲ್ಲಿ ಅವಳಿಂದಲೇ
ಮತ್ತೊಂದು ಮೆಸೇಜ್ ಬಂತು.
Sorry ಆ ಮೆಸೇಜ್ ನಿಮಗಲ್ಲ. By mistake ನಿಮಗೆ ಕಳುಹಿಸಿ ಬಿಟ್ಟೆ
ಗುಂಡನಿಗೆ ಮತ್ತೆ ಟೆನ್ಷನ್ ಜಾಸ್ತಿಯಾಗಿ ಬಿಡ್ತು....

ಮೈಸೂರು ಮಿತ್ರ

ಸೋಮವಾರ, 6 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಜೀವನದಲ್ಲಿ ಬಹುತೇಕ ಸಮಸ್ಯೆಗಳಿಗೆ ಪರಿಹಾರವೆಂದರೆ, ಆ ಸಮಸ್ಯೆಗಳೇ ಚಿಕ್ಕವೆನಿಸುವಷ್ಟು ದೊಡ್ಡ ಮಟ್ಟಕ್ಕೆ ಬೆಳೆಯುವುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮೀಸೆ ಬಂದವನಿಗೆ ದೇಶ ಕಾಣದು.

ನಿಮ್ಮ ಪತ್ರಗಳು

ಸಾಹಿತ್ಯ ಪರಿಷತ್ ಸೂಪರ್ ಸೀಡ್ ಮಾಡಿ

ಮಾನ್ಯರೆ,

ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ ಕುರಿತಾಗಿ ಕೇಳಿಬರುತ್ತಿರುವ ಭ್ರಷ್ಟಾಚಾರ ಹಾಗೂ ಅವ್ಯವಹಾರದ ಸುದ್ದಿಗಳು ಕನ್ನಡ ಪ್ರೇಮಿಗಳಿಗೆ ನೋವುಂಟು ಮಾಡಿದೆ. ಕನ್ನಡಿಗರ ಭಾವನೆಗಳಿಗೆ ನಂಟಿರುವ ಈ ಪರಿಷತ್ ಸಂಸ್ಥೆ ಒಂದು ಕಾಲದಲ್ಲಿ ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡ ಭಾಷೆಯ ಪ್ರಚಾರಕ್ಕೆ ಅಹರ್ನಿಶಿ ಕಾರ್ಯ ನಿರ್ವಹಿಸಿದ್ದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಈ ಪ್ರತಿಷ್ಠಿತ ಸಂಸ್ಥೆಯ ಮೇಲೆಯೇ ಭ್ರಷ್ಟಾಚಾರದ ಕಳಂಕ ಕೇಳಿಬರುತ್ತಿರುವುದು ದುಃಖಕರ ಸಂಗತಿ. ಸಾಹಿತ್ಯ ಪರಿಷತ್‌ನಿಂದ ಜನರಿಗೆ ಕನ್ನಡದ ಸೇವೆ, ಪಾರದರ್ಶಕತೆ ಮತ್ತು ಸಾಹಿತ್ಯ ಪ್ರೋತ್ಸಾಹ ನಿರೀಕ್ಷೆಯಿದೆ.ಆದರೆ ಈ ಸ್ಥಾನದಲ್ಲಿ ಕುಳಿತಿರುವರೇ ಅಧಿಕಾರದ ದುರುಪಯೋಗ, ಹಣಕಾಸಿನ ಅವ್ಯವಹಾರ ಮತ್ತು ಸ್ವಾರ್ಥದ ನಡವಳಿಕೆಯಲ್ಲಿ ತೊಡಗಿರುವರೆಂಬ ಆರೋಪ ಕೇಳಿ ಬಂದಿರುವುದು ಕನ್ನಡ ಸಂಸ್ಕೃತಿಗೆ ಅಪಮಾನ. ಸರ್ಕಾರವು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸೂಪರ್ ಸೀಡ್ ಕ್ರಮ ಕೈಗೊಳ್ಳುವುದು ಸೂಕ್ತ. ಇನ್ನೂ ಕೇವಲ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಮೂಲಭೂತ ಬದಲಾವಣೆಗಳು, ಕಾನೂನು ಬದ್ಧತೆ, ಪಾರದರ್ಶಕ ಹಣಕಾಸು ವ್ಯವಸ್ಥೆ ಮತ್ತು ನೈತಿಕ ಹೊಣೆಗಾರಿಕೆಗಳನ್ನೊಳಗೊಂಡ ಸುಧಾರಣೆಗಳು ಅಗತ್ಯ. ಸಾಹಿತ್ಯ ಪರಿಷತ್ ರಾಜಕೀಯದ ವೇದಿಕೆಯಾಗಬಾರದು, ಅದು ಕನ್ನಡಿಗರ ಗೌರವದ ಸಂಕೇತವಾಗಿ ಉಳಿಯಬೇಕು. ಇನ್ನೂ ಮುಂಬರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮಾರಂಭಕ್ಕೂ ಮುನ್ನ ಸರ್ಕಾರವು ಸೂಪರಸೀಡ್ ಕ್ರಮ ಜರುಗಿಸಿ ಜನರಲ್ಲಿ ನಂಬಿಕೆ ಮೂಡಿಸುವುದು ಅತ್ಯಗತ್ಯ. ಇಲ್ಲದಿದ್ದರೆ ಪರಿಷತ್ ತನ್ನ ಪ್ರತಿಷ್ಠೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ಅಪಾಯವಿದೆ.

–ಡಾ.ಎಚ್.ಕೆ.ವಿಜಯಕುಮಾರ್, ಮೈಸೂರು.

ಸಮೀಕ್ಷೆ ಆ್ಯಪ್ ಖಾಸಗಿ ವ್ಯಕ್ತಿಗಳ ಕೈಯಲ್ಲಿ

ಮಾನ್ಯರೆ,

ಸರ್ಕಾರದ ಮಹತ್ವಾಕಾಂಕ್ಷೆಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ಕಾರ್ಯದ ಗಣತಿಯ ಅಪ್ಲಿಕೇಷನ್ ಈಗ ಕೆಲವು ಕಡೆ ಖಾಸಗಿ ವ್ಯಕ್ತಿಗಳ ಕೈ ಸೇರಿದೆ. ಸರ್ಕಾರಿ ಸಿಬ್ಬಂದಿ ತಮ್ಮ ಮೊಬೈಲ್‌ನ್ನು ಬದಲಿ ವ್ಯಕ್ತಿಗಳಿಗೆ ನೀಡಿ ಸರ್ವೆಗೆ ಕಳುಹಿಸುತ್ತಿದ್ದಾರೆ. ಸರ್ವೇ ಕಾರ್ಯಕ್ಕೆ ಸರ್ಕಾರಿ ಸಿಬ್ಬಂದಿಯನ್ನು ಹೊರತು ಪಡಿಸಿ ಬೇರೆಯವರು ಬರುತ್ತಿರುವುದು ಜನರಲ್ಲಿ ಸಂದೇಹವನ್ನು ಮೂಡಿಸುತ್ತಿದೆ

ವೈಯಕ್ತಿಕ ಮಾಹಿತಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಈ ರೀತಿ ಬೇರೆ ವ್ಯಕ್ತಿಗಳು ಮಾಹಿತಿ ಪಡೆಯುವಂತಿಲ್ಲ. ಸರ್ಕಾರದ ನಿಯಮಾವಳಿಗಳ ಪ್ರಕಾರ ಗಣತಿ ಕಾರ್ಯಕ್ಕೆ ನಿಯೋಜಿತರಾದ ಸಿಬ್ಬಂದಿಯೇ ಗಣತಿ ಮಾಡಬೇಕು. ಹಾಗೊಮ್ಮೆ ಬೇರೆಯವರಿಗೆ ಮಾಹಿತಿ ಸಿಕ್ಕರೆ ಅದು ದುರ್ಬಳಕೆಯಾಗುವ ಸಾಧ್ಯತೆಯೂ ಉಂಟು. ಸಾರ್ವಜನಿಕರಿಂದ ಮಾಹಿತಿ ಕಲೆ ಹಾಕುವ ಈ ಖಾಸಗಿ ವ್ಯಕ್ತಿಗಳು ಏನಾದರೂ ಖಾಸಗಿ ಕಂಪನಿಗಳಿಗೆ ಡಾಟಾ ಮಾರಿಕೊಂಡರೆ ಅಥವಾ ಮಾಹಿತಿಯನ್ನು ಹ್ಯಾಕರ್‌ಗಳಿಗೆ ತಲುಪಿಸಿದರೆ ಗತಿ ಏನು? ಒಬ್ಬಂಟಿ ವ್ಯಕ್ತಿಗಳು ಇರುವ ಮನೆಯ ಮಾಹಿತಿಯನ್ನು ಕಳ್ಳಕಾಕರಿಗೆ, ದರೋಡೆಕೋರರಿಗೆ ತಿಳಿಸಿದಲ್ಲಿ ಆಗುವ ಅನಾಹುತ ಎಂತಹದ್ದು ಎಂಬ ಬಗ್ಗೆ ಸರ್ಕಾರ ಚಿಂತನೆ ನಡೆಸಬೇಕಾಗಿದೆ. ಈ ರೀತಿ ಆಗಬಾರದು ಎಂದರೆ ಸಂಬಂಧಪಟ್ಟ ಅಧಿಕಾರಿಗಳು, ಶಿಕ್ಷಣ ಇಲಾಖೆ ಸರ್ವೆ ಮಾಡಲು ನೇಮಿಸಿರುವಂತಹ ಮೇಲ್ವಿಚಾರಕರು ಸರ್ವೆ ಮಾಡುವವರ ಪ್ರತಿದಿನದ ಮಾಹಿತಿ ಪಡೆಯಬೇಕು ಅವರನ್ನು ಗಮನಿಸಬೇಕು. ಗಮನಿಸಿ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕು.

ಗಣತಿಗೆ ಬರುವ ವ್ಯಕ್ತಿಯ ಗುರುತಿನ ಚೀಟಿಯನ್ನು ಪರಿಶೀಲಿಸಿ. ಆತ ಸರ್ಕಾರಿ ಸಿಬ್ಬಂದಿಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ . ಆತನ ಕೈಯಲ್ಲಿರುವ ಮೊಬೈಲ್‌ನಲ್ಲಿ ಸರ್ವೇ ಆ್ಯಪ್ ಇರಬಹುದಾದರೂ ಅದು ಆತನ ಹೆಸರಿನ ಐ.ಡಿ. ಹೌದೋ ಅಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಸೂಕ್ತ. ಅಲ್ಲದೇ ಬಂದ ವ್ಯಕ್ತಿ ಸರ್ಕಾರಿ ಸಿಬ್ಬಂದಿಯೇ ಆಗಿದ್ದರೂ ನಿಮ್ಮ ಮನೆಯಲ್ಲಿ ರುವ ಹಣ, ಚಿನ್ನದ ಒಡವೆಯ ಮಾಹಿತಿ ಕೇಳಿದ್ದಲ್ಲಿ ಕೊಡಬೇಕಾಗಿಲ್ಲ. ಅಲ್ಲದೇ ಬ್ಯಾಂಕ್ ಆಕೌಂಟ್ ನಂಬರ್ ಆಗಲಿ, ಯಾವುದೇ ಬ್ಯಾಂಕ್ ಅಕೌಂಟ್‌ನ ಓಟಿಪಿ ಯಾಗಲಿ ಕೊಡಬಾರದು.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು.

ಚಕ್ರವ್ಯೂಹ ಭೇದಿಸಿದ 'ಅಭಿಮನ್ಯು'!

ಮಾನ್ಯರೆ,

ಈ ಬಾರಿ ಅತ್ಯಂತ ವೈಭವಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಸಂಪನ್ನಗೊಂಡ ಐತಿಹಾಸಿಕ ಮತ್ತು ಚಾರಿತ್ರಿಕ ಮೈಸೂರು ದಸರಾದ ಮುಖ್ಯ ಕೇಂದ್ರ ಬಿಂದು ದಸರಾ ಜಂಬೂ ಸವಾರಿಯ ನೇತೃತ್ವ ವಹಿಸಿದ್ದ ಅಭಿಮನ್ಯು. ತನಗೆ ಸರ್ಕಾರ ನೀಡಿದ ಜವಾಬ್ದಾರಿಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪ್ರೀತಿ ಪಾತ್ರನಾಗಿದ್ದಾನೆ. ಕುರುಕ್ಷೇತ್ರ ಯುದ್ಧದಲ್ಲಿ ದ್ರೋಣಾಚಾರ್ಯರು ರಚಿಸಿದ್ದ ಚಕ್ರವ್ಯೂಹವನ್ನು ಭೇದಿಸಲು ಆ ಅಭಿಮನ್ಯು ವಿಫಲನಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡರೆ, ದಸರಾ ಮೆರವಣಿಗೆ ಎಂಬ ಚಕ್ರವ್ಯೂಹವನ್ನು ಅತ್ಯಂತ ಯಶಸ್ವಿಯಾಗಿ ಭೇದಿಸಿ ಎಲ್ಲರ ಮೆಚ್ಚುಗೆ ಗಳಿಸಿದ್ದಾನೆ ನಮ್ಮ ಈ ಅಭಿಮನ್ಯು.

–ಕೆ.ವಿ.ವಾಸು, ವಕೀಲರು–ನೋಟರಿ, ವಿವೇಕಾನಂದನಗರ, ಮೈಸೂರು

ಇಬ್ಬರು 'ಆತ್ಮಶ್ರೀ'ಯವರು

ಮಾನ್ಯರೆ,

1. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರನ್ನು ಒಮ್ಮೆ ಯಾರೋ ಕೇಳಿದರಂತೆ: "ನೀವು ಕಲಿಯುವುದಕ್ಕಾಗಿ (ಎಂದರೆ ಉನ್ನತ ವಿದ್ಯಾಭ್ಯಾಸಕ್ಕಾಗಿ) ವಿದೇಶಕ್ಕೆ ಹೋಗುವುದಿಲ್ಲವೆ? ರಾಧಾಕೃಷ್ಣನ್ ಉತ್ತರಿಸಿದರಂತೆ: "ಕಲಿಯುವುದಕ್ಕಲ್ಲ, ಕಲಿಸುವುದಕ್ಕಾಗಿ ಹೋಗುತ್ತೇನೆ!" ಮುಂದೆ ಅವರು ಆಕ್ಸ್‌ಫರ್ಡ್ ವಿ.ವಿ. ನಿಲಯಕ್ಕೆ ಪ್ರಾಧ್ಯಾಪಕರಾಗಿ ಹೋದರು.

2. ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಅವರು ಮಾತಿನ ಮಲ್ಲರಲ್ಲ; ಬದುಕೆಲ್ಲ ನೀರವಧ್ಯಾನ. ವೇದಿಕೆಯ ಬೋಧಕರಲ್ಲ; ಮೌನ ಸಾಧಕರು. ಸ್ತುತಿ ಪ್ರಿಯರೂ ಅಲ್ಲ; ಕೃತಿವೀರರು!

ಇಂಥ ಆತ್ಮ ಪ್ರತ್ಯಯ–'ಆತ್ಮಶ್ರೀ'–ಎಷ್ಟು. –ಸಿಪಿಕೆ, ಹಿರಿಯ ಸಾಹಿತಿ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ದೇಹ ದುಡಿದರೆ ಕಾರ್ಮಿಕ; ಬುದ್ಧಿ ದುಡಿದರೆ ಮಾಲೀಕ....!

ಕಾಯಕವೇ ಕೈಲಾಸ ಎಂದು ಶರಣರು ಹೇಳಿರುವಂತೆ ಮನುಷ್ಯನಾಗಿ ಹುಟ್ಟಿದ ಮೇಲೆ ಬುದಕಿಗಾಗಿ ಏನಾದರೂ ದುಡಿಮೆ ಮಾಡುವುದು ಧರ್ಮ. ದುಡಿಮೆ ಎಂದಾಕ್ಷಣ ಬಹುಪಾಲು ಎಲ್ಲರೂ ದೈಹಿಕ ಶ್ರಮ ಹಾಕಿ ಮಾಡುವ ಕೆಲಸ ಎಂದು ಭಾವಿಸುತ್ತಾರೆ. ದೇಹ ದಂಡಿಸಿ ಮಾಡುವ ಕೆಲಸದಷ್ಟೇ ಬುದ್ಧಿ ವ್ಯಯ ಮಾಡಿ ಮಾಡುವ ಕೆಲಸದಿಂದಲೂ ಸಹ ದಣಿವಾಗುತ್ತದೆ. ಆದರೆ ದೇಹ ದಂಡಿಸಿ ಮಾಡುವ ದುಡಿಮೆಗಿಂತ ಬುದ್ಧಿ ಓಡಿಸಿ ಮಾಡುವ ದುಡಿಮೆಯಿಂದ ಹೆಚ್ಚು ಸಂಪಾದನೆ ಮಾಡುವುದು ಸುಳ್ಳಲ್ಲ.

ಜಮೀನಿನಲ್ಲಿ ಬೆಳಗ್ಗೆಯಿಂದ ಸಂಜೆಯವರೆವಿಗೆ ಬೆವರು ಸುರಿಸಿ ದುಡಿಯುವ ಒಬ್ಬ ಕೂಲಿ ಕಾರ್ಮಿಕನ ಒಂದಿಡೀ ವರ್ಷದ ಸಂಪಾದನೆಯನ್ನು ಷೇರು ದಲ್ಲಾಳಿಯೊಬ್ಬ ಒಂದೇ ದಿನದಲ್ಲಿ ಗಳಿಸಿಬಿಡಬಹುದು. ಆದರೆ ಬುದ್ಧಿ ಬಳಸಿ ಮಾಡುವ ದುಡಿಮೆಯಲ್ಲಿ ಸೋಲಿನ ಭೀತಿಯೂ ಇರುತ್ತದೆ. ದೇಹ ದಂಡಿಸುವವರು ಕಂಫರ್ಟ್ ಜೋನ್‌ನಲ್ಲಿ ಬದುಕಬಹುದು, ಆದರೆ ಬುದ್ಧಿ ಬಳಸಿ ದುಡಿಯುವವ ರಿಸ್ಕ್ ಜೋನ್‌ನಲ್ಲಿಯೇ ಇರಬೇಕಾಗುತ್ತದೆ. ದೇಹ ಬಳಸಿ ದುಡಿಯುವವನಿಗೆ ದೈಹಿಕ ಶ್ರಮ ಇದ್ದರೂ ಬುದ್ಧಿ ಬಳಸಿ ದುಡಿಯುವವನಿಗೆ ಇರುವಷ್ಟು ಮಾನಸಿಕ ಒತ್ತಡ ಇರುವುದಿಲ್ಲ.

ದಿನದ ಅಂತ್ಯಕ್ಕೆ ನೀನು ಸಂಪಾದಿಸಿದ ಹಣವಷ್ಟೇ ಗಣನೆಗೆ ಬರುತ್ತದೆ ಎಂಬ ಆಂಗ್ಲ ನಾಣ್ಣುಡಿ ಇದೆ. ಅಂದರೆ ಒಬ್ಬ ವ್ಯಕ್ತಿಯನ್ನು ಸಮಾಜ ಗೌರವಿಸುವುದು ಅವನ ಸಂಪಾದನೆಯ ಹಿನ್ನೆಲೆಯಲ್ಲಿ ಎಂಬುದು ಅರ್ಥ. ಆ ಕಾರಣಕ್ಕೆ ಸುಲಭ ಮಾರ್ಗದಲ್ಲಿ ಸಂಪಾದಿಸಿಬಿಡುವ ಇರಾದೆ ಅನೇಕರದ್ದು. ಸಜ್ಜನರು ತಮ್ಮ ಬುದ್ಧಿಶಕ್ತಿಯನ್ನು ಬಳಸಿ ಉತ್ತಮ ಮಾರ್ಗದಲ್ಲಿ ಹಣ ಗಳಿಸಲು ಪರಿಶ್ರಮಪಟ್ಟರೆ, ದುರ್ಜನರು ತಮ್ಮ ದುರ್ಬುದ್ಧಿಯನ್ನು ಬಳಸಿ ವಾಮಮಾರ್ಗದಲ್ಲಿ ಹಣ ಗಳಿಸಲು ಪ್ರಯತ್ನಿಸುತ್ತಾರೆ. ಮೋಸ ಮಾಡಲು ಅವರು ಹೆಚ್ಚಾಗಿ ಬಳಸುವುದು ತಮ್ಮ ದೇಹವನ್ನಲ್ಲ, ಬುದ್ಧಿಯನ್ನೇ. ಇತ್ತೀಚಿಗೆ ಬರುವ ಡಿಜಿಟಲ್ ಅರೆಸ್ಟ್, ಆನ್‌ಲೈನ್ ವಂಚನೆ, ಹ್ಯಾಕಿಂಗ್ ಇತ್ಯಾದಿ ಮೋಸದಾಟಕ್ಕೂ ಕಳ್ಳರು ಯಾವ ಬುದ್ಧಿವಂತರಿಗೂ ಕಮ್ಮಿಯಿಲ್ಲ. ಒಬ್ಬ ವ್ಯಕ್ತಿ ಎಷ್ಟು ಸಂಪಾದಿಸಿದ ಎನ್ನುವುದಕ್ಕಿಂತ ಹೇಗೆ ಸಂಪಾದಿಸಿದ ಎನ್ನುವ ಕಾರಣಕ್ಕೆ ಸಮಾಜದಲ್ಲಿ ಬೆಲೆ ಕೊಡುವುದು ಎಂಬ ನಂಬಿಕೆ ಇತ್ತು. ಆದ್ದರಿಂದ ಹಿಂದೆ ಮೋಸ ಮಾಡಲು ಜನ ಹೆದರುತ್ತಿದ್ದರು. ಆದರೆ ಇಂದು ಆತ ಹೇಗೆ ಸಂಪಾದಿಸಿರಲಿ, ಸಂಪತ್ತು ಸಂಗ್ರಹಿಸಿದ್ದಾನೆ ಎಂದರೆ ಸಮಾಜ ಅವನನ್ನು ಬುದ್ಧಿವಂತ ಎಂದು ಗೌರವಿಸುತ್ತಿದೆ. ಆ ಕಾರಣಕ್ಕೆ ಜನ ಮೋಸ ಮಾಡಲು ಸಹ ಹಿಂಜರಿಯುತ್ತಿಲ್ಲ. ಅಂದರೆ ತಮ್ಮ ಬುದ್ಧಿಯನ್ನು ಕೆಟ್ಟ ಕೆಲಸಗಳಿಗೆ ಬಳಸುವಷ್ಟು ಒಳ್ಳೆಯ ಕೆಲಸಗಳಿ ಬಳಸುವುದಿಲ್ಲ.

ಶಿಕ್ಷಣ ವ್ಯವಸ್ಥೆಯು ಮನುಷ್ಯನು ಹೆಚ್ಚು ದೇಹ ದಂಡಿಸದೇ ಒಂದೇ ಕಡೆ ಕುಳಿತು ಸಂಪಾದಿಸುವ ಕೆಲಸ/ಉದ್ಯಮ ಗಿಟ್ಟಿಸಲು ಸಹಕರಿಸುತ್ತಿದೆ. ಅಂದ ಮಾತ್ರಕ್ಕೆ ವಿದ್ಯಾವಂತರೆಲ್ಲಾ ಬುದ್ಧಿವಂತರಾಗಿತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಅಕ್ಷರ ಜ್ಞಾನ ಇದ್ದಾಕ್ಷಣ, ನೆನಪಿನ ಶಕ್ತಿ ಇದ್ದಾಕ್ಷಣ, ರಚನಾತ್ಮಕ ಕೆಲಸ ಮಾಡುವ ಗುಣ, ನಾಯಕತ್ವ ಗುಣ, ಬುದ್ಧಿ ಬಳಸಿ ಹಣ ಗಳಿಸುವ ಗುಣ ಮೈಗೂಡಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಎಷ್ಟೋ ಜನ ಅವಿದ್ಯಾವಂತರೂ ಸಹ ವ್ಯಾಪಾರಿ ಕ್ಷೇತ್ರದಲ್ಲಿ ತಮ್ಮ ಚಾಣಾಕ್ಷತನದಿಂದ ಕೋಟ್ಯಾಧಿಪತಿಗಳಾಗಿದ್ದಾರೆ. ವಿದ್ಯಾವಂತರಿಗೆ ಸಂಬಳ ಕೊಟ್ಟು ತಮ್ಮ ಉದ್ಯಮದಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. ಇದೊಂದು ವಿಡಂಭನೆಯಾಗಿ ಕಾಣುತ್ತದೆ.

ಮನುಷ್ಯ ಬುದ್ಧಿವಂತನಾದರೆ, ಅವನಲ್ಲಿ ಒಂದಿನಿತು ವ್ಯಾಪಾರಿ ಮನೋಭಾವ ಇದ್ದರೆ, ಹೆಚ್ಚು ದೈಹಿಕ ಶ್ರಮವಿಲ್ಲದೆ ಹಣ ಗಳಿಸಲು ಸಾಧ್ಯವಿರುತ್ತದೆ. ದಕ್ಷಿಣ ಕರ್ನಾಟಕದ ಯುವಕರ ತಂಡವೊಂದು ಒಮ್ಮೆ ದೆಹಲಿ ಪ್ರವಾಸಕ್ಕೆ ರೈಲಿನಲ್ಲಿ ಹೊರಟಿತ್ತು. ಆ ಯುವಕರು ಪ್ರಯಾಣದಲ್ಲಿ ಆಯಾಸ ಆದಾಗ ಶಕ್ತಿ ತುಂಬಲು ಇರಲಿ ಎಂದು ತಮ್ಮ ನೆಚ್ಚಿನ ಕಬ್ಬಿನ ಜಲ್ಲೆಯ ತುಂಡುಗಳನ್ನು ಕೊಂಡ್ಯೊಯ್ದಿದ್ದರು. ಕಬ್ಬನ್ನು ತಿಂದವರೆ ಸಿಪ್ಪೆಯನ್ನು ಬೋಗಿಯಿಂದ ಹೊರಗೆ ಹಾಕದೆ ಬೋಗಿಯಲ್ಲಿಯೇ ಚೆಲ್ಲುತ್ತಿದ್ದರು. ಇವರದೇ ಬೋಗಿಯ ಬೇರೆ ಭಾಗದಲ್ಲಿ ಇದ್ದ ಒಬ್ಬ ಕುಶಲ ವ್ಯಾಪಾರಿ ಇದನ್ನು ಗಮನಿಸುತ್ತಿದ್ದ. ಯುವಕರು ಚೆಲ್ಲಿದ ಕಬ್ಬಿನ ಸಿಪ್ಪೆಗಳನ್ನು ಸಂಗ್ರಹಿಸುತ್ತಿದ್ದ. ಈತನನ್ನು ನೋಡಿ ಯುವಕರು ನಗಾಡುತ್ತಿದ್ದರು. ಇನ್ನೇನು ದೆಹಲಿ ಮುಟ್ಟಬೇಕು ಎನ್ನುವಷ್ಟರಲ್ಲಿ ಆ ಕುಶಲಕರ್ಮಿ ವ್ಯಾಪಾರಿ ಯುವಕರಿಗೆ ತನ್ನ ಬಳಿ ನೈಸರ್ಗಿಕವಾದ ಬಣ್ಣಬಣ್ಣವಾದ ಹಾರಗಳಿವೆ ಬೇಕೆ ಎಂದು ಕೇಳಿ ಹಾರಗಳನ್ನು ತೋರಿಸಿದ, ಅವುಗಳು ಬಣ್ಣಬಣ್ಣದಿಂದ ಕೂಡಿದ್ದು ಅಷ್ಟೇ ಅಲ್ಲದೆ, ಸುಗಂಧಭರಿತವಾಗಿದ್ದವು. ಎಲ್ಲರೂ ಅವುಗಳನ್ನು ನೋಡಿ ಖುಷಿಪಟ್ಟು ಅವನು ಹೇಳಿದಷ್ಟು ಹಣ ಕೊಟ್ಟು ಖರೀದಿಸಿದರು. ರೈಲಿನಿಂದ ಇಳಿದ ಮೇಲೆ ಒಬ್ಬ ಯುವಕ ಕೇಳಿದ, ಈ ಹಾರ ಯಾವುದರಿಂದ ಮಾಡಿದ್ದು ಎಂದು? ಆಗ ಆ ಕುಶಲಕರ್ಮಿ ನೀವು ತಿಂದು ಬೀಸಾಡಿದ ಕಬ್ಬಿನ ಸಿಪ್ಪೆಗಳನ್ನು ಒಣಗಿಸಿ, ಅವುಗಳಿಗೆ ವಿವಿಧ ಬಣ್ಣಗಳನ್ನು ಹಾಕಿ ಹಾರ ಮಾಡಿ, ಸ್ಯಾಂಡಲ್ ಸೆಂಟ್ ಹಾಕಿ ನಿಮಗೆ ಮಾರಾಟ ಮಾಡಿದೆ ಎಂದು ಹೇಳಿ ನಗೆ ಬೀರಿದ. ಯುವಕರು ಅವನ ಚಾಣಾಕ್ಷತಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಬ್ಬನ್ನು ಬೆಳೆಯಲು ರೈತ ಸುಮಾರು ಒಂದು ವರ್ಷಗಳ ಕಾಲ ಶ್ರಮಿಸಿರುತ್ತಾನೆ, ಅದೇ ಕಬ್ಬಿನ ಸಿಪ್ಪೆಯಲ್ಲಿ ಒಂದೇ ದಿನದಲ್ಲಿ ಹಣ ಗಳಿಸುವ ಕಲೆ ಬುದ್ಧಿ ಉಪಯೋಗಿಸಿದ ಕಾರಣಕ್ಕೆ ಆಗಿದ್ದು. ಇದೇ ರೀತಿ ಕಸದಿಂದ ರಸ ಮಾಡಿ, ತಮ್ಮ ಬುದ್ಧಿಶಕ್ತಿಯಿಂದ ಹೆಚ್ಚು ದೈಹಿಕ ಶ್ರಮವಿಲ್ಲದೆ ಸುಲಭವಾಗಿ ಹಣಗಳಿಸುವ ಅನೇಕ ಸಂಗತಿಗಳನ್ನು ಕಾಣಬಹುದು.

ರೈತ ಪರಿಶ್ರಮದಿಂದ ಹಲವಾರು ತಿಂಗಳುಗಳ ಕಾಲ ಬೆಳೆಯುವ ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ನಲುಗುತ್ತಿದ್ದರೆ, ಬೆಳೆಗಳನ್ನು ಕೈಬದಲಾಯಿಸುವ ದಲ್ಲಾಳಿ ಕೆಲಸ ಮಾಡುವವರು ಕೆಲವೇ ನಿಮಿಷಗಳಲ್ಲಿ ಲಾಭ ಗಳಿಸಿಬಿಡುತ್ತಾರೆ. ಅಷ್ಟೇ ಅಲ್ಲ ರೈತನ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ಮೌಲ್ಯವರ್ಧಿತ ತಿನಿಸುಗಳನ್ನಾಗಿ ಮಾಡಿ ಸುಲಭವಾಗಿ ಹಣಗಳಿಸುವ ಜನರನ್ನು ಸಹ ಕಾಣಬಹುದು. ಉದಾಹರಣೆಗೆ ಕಾರ್ನ್ ಎಂದು ಕರೆಯಲ್ಪಡುವ ಮುಸುಕಿನ ಜೋಳ ಬೆಳೆಯಲು ರೈತ ತುಂಬಾ ಕಷ್ಟ ಪಟ್ಟಿರುತ್ತಾನೆ. ಒಂದು ಮುಸುಕಿನ ಜೋಳದ ತೆನೆಗೆ ಅವನಿಗೆ ಐದು ರೂಪಾಯಿ ಸಿಕ್ಕರೆ ಹೆಚ್ಚು, ಅದನ್ನು ಬೀದಿಬದಿಯಲ್ಲಿ ಕೆಂಡದಲ್ಲಿ ಸುಟ್ಟು ಅಥವಾ ಹಬೆಯಲ್ಲಿ ಬೇಯಿಸಿ ಉಪ್ಪು, ಹುಳಿ, ಖಾರ ಹಾಕಿ ಕೊಟ್ಟರೆ ಒಂದಕ್ಕೆ ಇಪ್ಪತ್ತು ರೂಪಾಯಿ ಆಗುತ್ತದೆ. ಅದನ್ನೇ ಪಾಪ್‌ಕಾರ್ನ್ ಮಾಡಿ ಮಾರಿದರೆ ಒಂದಕ್ಕೆ ಐವತ್ತು ರೂಪಾಯಿ ಆಗುತ್ತದೆ. ಇಲ್ಲಿ ದೈಹಿಕ ಶ್ರಮಕ್ಕಿಂತ ಬುದ್ಧಿವಂತಿಕೆ ಹೆಚ್ಚು ಸಂಪಾದಿಸುತ್ತದೆ. ಮೈಬಗ್ಗಿಸಿ ದುಡಿದವನು ಕೂಲಿ ಕಾರ್ಮಿಕನಾಗಿಯೇ ಉಳಿಯುತ್ತಾನೆ, ಬುದ್ಧಿ ಉಪಯೋಗಿಸಿ ಗಳಿಸುವವನು ಮಾಲೀಕನಾಗುತ್ತಾನೆ.



> “ಎಷ್ಟೋ ಜನ ಕಾರ್ಮಿಕರಿಗೆ ಮಾಲೀಕನಾಗುವ ಅರ್ಹತೆ ಇದ್ದರೂ ರಿಸ್ಕ್ ತೆಗೆದುಕೊಳ್ಳದ ಕಾರಣ ಕಾರ್ಮಿಕರಾಗಿಯೇ ಉಳಿದುಬಿಡುತ್ತಾರೆ. ಆದರೆ ತನ್ನ ಬದುಕಿನ ಬಗ್ಗೆ ಉನ್ನತವಾದ ಕನಸನ್ನು ಹೊಂದಿರುವ ಕಾರ್ಮಿಕ ಒಂದು ದಿನ ಮಾಲೀಕನಾಗಿಬಿಡುತ್ತಾನೆ. ಅದಕ್ಕಾಗಿ ಹಗಲಿರುಳು ತನ್ನ ಬುದ್ಧಿಯನ್ನು ವ್ಯಯ ಮಾಡಿ ಕನಸನ್ನು ಈಡೇರಿಸಿಕೊಳ್ಳುತ್ತಾನೆ. ಉದಾಹರಣೆಗೆ ಧೀರುಬಾಯಿ ಅಂಬಾನಿ ಪೆಟ್ರೋಲ್ ಬಂಕ್ ಒಂದರಲ್ಲಿ ಕೂಲಿ ಕಾರ್ಮಿಕನಾಗಿದ್ದವರು, ಮಹಾತ್ವಾಕಾಂಕ್ಷೆ ಹೊಂದಿದ್ದ ಕಾರಣಕ್ಕೆ ಸಾವಿರಾರು ಕೋಟಿ ರೂಪಾಯಿಯ ರಿಲಯನ್ಸ್ ಸಾಮ್ರಾಜ್ಯದ ದೊರೆಯಾದರು. ಕಷ್ಟಪಟ್ಟು ದುಡಿಯುವುದು ದೊಡ್ಡತನ ಅಷ್ಟೇ ಅಲ್ಲ ದಡ್ಡತನವೂ ಆಗಿಬಿಡಬಹುದು. ದೇಹವನ್ನು ಶ್ರಮಕ್ಕೆ ಹಚ್ಚುವಂತೆ ಬುದ್ಧಿಗೂ ಶ್ರಮ ಹಚ್ಚಿದರೆ ಕಾರ್ಮಿಕ ಮಾಲೀಕನಾಗಲು ಬಹು ದಿವಸಬೇಕಿಲ್ಲ. ಇದಕ್ಕೆ ಸಾವಿರಾರು ಉದ್ಯಮಿಗಳು ಭಾರತದಲ್ಲಿಯೇ ನಿದರ್ಶನವಾಗಿದ್ದಾರೆ.

ಅನೇಕ ಕೂಲಿ ಕಾರ್ಮಿಕರು ತಮ್ಮ ಮಾಲೀಕನನ್ನು ನೋಡಿ, ಅವರ ಜೀವನ ಶೈಲಿಯನ್ನು ಕಂಡು ಬಹಳ ಆರಾಮಾಗಿ ಇದ್ದಾರೆ ಎಂದು ಭಾವಿಸುತ್ತಾರೆ. ಮಾಲೀಕನ ಐಷಾರಾಮದ ಬದುಕು ಅವರ ಕಣ್ಣು ಕುಕ್ಕುತ್ತಿರುತ್ತದೆ. ಆದರೆ ಮಾಲೀಕನಾದವನಿಗೆ ಅವನದೇ ಆದ ಒತ್ತಡಗಳು ಇರುತ್ತವೆ. ಕಾರ್ಮಿಕ ದಿನದ ಅಂತ್ಯಕ್ಕೆ ಸುಖವಾಗಿ ನಿದ್ರಿಸುವಷ್ಟು ಮಾಲೀಕ ನಿದ್ರಿಸಲು ಸಾಧ್ಯವಿಲ್ಲ. ಮಾರುಕಟ್ಟೆ, ಸ್ಪರ್ಧೆ, ಗುಣಮಟ್ಟ, ಸೋಲಿನ ಭೀತಿ ಅವನನ್ನು ಸದಾ ಕಾಡುತ್ತಿರುತ್ತದೆ. ದೇಹ ಬಳಸಿದಾಗ ಬಳಲಿಗೆ ಆಗುವಷ್ಟೇ ಬುದ್ಧಿ ಬಳಸಿದಾಗಲು ಬಳಲಿಕೆ ಆಗುತ್ತದೆ. ಆದ್ದರಿಂದ ದೈಹಿಕ ಶ್ರಮವನ್ನಷ್ಟೇ ಶ್ರಮ ಎನ್ನಲಾಗದು, ಮಾನಸಿಕವಾದ ಶ್ರಮವೂ ಶ್ರಮವೇ.

ಒಮ್ಮೊಮ್ಮೆ ಕಾರ್ಮಿಕನಿಗೆ ಇರುವಷ್ಟು ಸಾಮಾಜಿಕ ಭದ್ರತೆ ಹಾಗೂ ಆರ್ಥಿಕ ಭದ್ರತೆ ಮಾಲೀಕನಿಗೆ ಇರುವುದಿಲ್ಲ. ಎಷ್ಟೋ ಉದ್ದಿಮೆಗಳಲ್ಲಿ ಕಾರ್ಮಿಕರಿಗೆ ನಿಯಮಿತವಾಗಿ ಹಾಗೂ ನಿಗದಿತವಾಗಿ ಸಂಬಳ ದೊರಕುತ್ತಿರುತ್ತದೆ. ಆದರೆ ಮಾಲೀಕನಿಗೆ ಲಾಭಾಂಶ ನಿಯಮಿತವಾಗಿ ಇರುತ್ತದೆ ಎಂದು ಹೇಳಲಾಗದು. ಸಮಾಜದಲ್ಲಿ ಕಾರ್ಮಿಕನಿಗೆ ವಿವಾಹವಾಗಲು ಕಷ್ಟವಾಗುವುದಿಲ್ಲ, ಆದರೆ ಮಾಲೀಕನಿಗೆ ಹೆಣ್ಣು ಕೊಡಲು ಎಷ್ಟೋ ಜನ ಹಿಂಜರಿಯುತ್ತಿತ್ತಾರೆ. ಕಾರಣ, ಬ್ಯುಸಿನೆಸ್ ಎಲ್ಲಾ ಸಮಯದಲ್ಲೂ ಒಂದೇ ರೀತಿ ಇರುವುದಿಲ್ಲ ಎಂಬ ಮನೋಭಾವ ಜನರದ್ದು.

ಎಷ್ಟೋ ಜನ ಕಾರ್ಮಿಕರಿಗೆ ಮಾಲೀಕನಾಗುವ ಅರ್ಹತೆ ಇದ್ದರೂ ರಿಸ್ಕ್ ತೆಗೆದುಕೊಳ್ಳದ ಕಾರಣ ಕಾರ್ಮಿಕರಾಗಿಯೇ ಉಳಿದುಬಿಡುತ್ತಾರೆ. ಆದರೆ ತನ್ನ ಬದುಕಿನ ಬಗ್ಗೆ ಉನ್ನತವಾದ ಕನಸನ್ನು ಹೊಂದಿರುವ ಕಾರ್ಮಿಕ ಒಂದು ದಿನ ಮಾಲೀಕನಾಗಿಬಿಡುತ್ತಾನೆ. ಅದಕ್ಕಾಗಿ ಹಗಲಿರುಳು ತನ್ನ ಬುದ್ಧಿಯನ್ನು ವ್ಯಯ ಮಾಡಿ ಕನಸನ್ನು ಈಡೇರಿಸಿಕೊಳ್ಳುತ್ತಾನೆ. ಉದಾಹರಣೆಗೆ ಧೀರುಬಾಯಿ ಅಂಬಾನಿ ಪೆಟ್ರೋಲ್ ಬಂಕ್ ಒಂದರಲ್ಲಿ ಕೂಲಿ ಕಾರ್ಮಿಕನಾಗಿದ್ದವರು, ಮಹಾತ್ವಾಕಾಂಕ್ಷೆ ಹೊಂದಿದ್ದ ಕಾರಣಕ್ಕೆ ಸಾವಿರಾರು ಕೋಟಿ ರೂಪಾಯಿಯ ರಿಲಯನ್ಸ್ ಸಾಮ್ರಾಜ್ಯದ ದೊರೆಯಾದರು. ಕಷ್ಟಪಟ್ಟು ದುಡಿಯುವುದು ದೊಡ್ಡತನ ಅಷ್ಟೇ ಅಲ್ಲ ದಡ್ಡತನವೂ ಆಗಿಬಿಡಬಹುದು. ದೇಹವನ್ನು ಶ್ರಮಕ್ಕೆ ಹಚ್ಚುವಂತೆ ಬುದ್ಧಿಗೂ ಶ್ರಮ ಹಚ್ಚಿದರೆ ಕಾರ್ಮಿಕ ಮಾಲೀಕನಾಗಲು ಬಹುದಿವಸಬೇಕಿಲ್ಲ. ಇದಕ್ಕೆ ಸಾವಿರಾರು ಉದ್ಯಮಿಗಳು ಭಾರತದಲ್ಲಿಯೇ ನಿದರ್ಶನವಾಗಿದ್ದಾರೆ.

ಆನೆಯೊಂದನ್ನು ಪಳಗಿಸಿದ ನಂತರ ಒಂದು ಚೈನ್ ಹಾಕಿ ಮರಕ್ಕೆ ಕಟ್ಟಿ ಹಾಕಲಾಗುತ್ತದೆ. ಆನೆಗೆ ಕಾಲಿನಲ್ಲಿ ಚೈನು ಇದ್ದರೆ ನಾನು ಬಂಧಿ ಎನ್ನುವ ಮನೋಭಾವ ಮೂಡಿಸಲಾಗುತ್ತದೆ. ಮುಂದೊಂದು ದಿನ ಆನೆಯ ಕಾಲಿಗೆ ಕಬ್ಬಿಣದ ಚೈನ್ ಹಾಕಿ ಮರಕ್ಕೆ ಕಟ್ಟಿ ಹಾಕದಿದ್ದರೂ ಅದು ತಾನು ಬಂಧಿತನಾಗಿದ್ದೇನೆ, ಈ ಚೈನ್‌ನಿಂದ ಮುಕ್ತಿ ಸಾಧ್ಯವಿಲ್ಲ ಎಂದು ಭಾವಿಸುತ್ತದೆ. ಒಂದು ಸಣ್ಣ ಗಿಡಕ್ಕೆ ಚೈನ್ ಹಾಕಿ ಕಟ್ಟಿ ಹಾಕಿದರೂ ಅದು ಅಲ್ಲಿಂದ ತನ್ನ ಸಾಮರ್ಥ್ಯದಿಂದ ತಪ್ಪಿಸಿಕೊಂಡು ಹೋಗುವ ಪ್ರಯತ್ನವನ್ನೇ ಮಾಡುವುದಿಲ್ಲ. ಅದೇ ರೀತಿ ಕಾರ್ಮಿಕರ ಪರಿಸ್ಥಿತಿ ಆಗಿರುತ್ತದೆ. ಒಂದು ಆರ್ಥಿಕ ಅಭದ್ರತೆ, ರಿಸ್ಕ್ ತೆಗುದುಕೊಳ್ಳದೆ ಕಂಫರ್ಟ್ ಜೋನ್‌ನಲ್ಲಿರುವುದು, ಸೋತು ಬಿಡುತ್ತೇವೆ ಎಂಬ ಭಯ ಅವರನ್ನು ಕೊನೆಯವರೆವಿಗೂ ಕಾರ್ಮಿಕನಾಗಿಯೇ ಇರುವಂತೆ ಮಾಡುತ್ತದೆ. ಬುದ್ಧಿವಂತ ಮಾಲೀಕ ತನ್ನ ಕಾರ್ಮಿಕರನ್ನು ಪ್ರಾಣಿಗಳಂತೆ ದುಡಿಸಿಕೊಳ್ಳುವುದನ್ನು ಕಾಣಬಹುದು.

ಹೂರಣ: ಸೋಲಿನ ಭೀತಿ ಕಾರ್ಮಿಕನಾಗಿಯೇ ಉಳಿಸುತ್ತದೆ, ಗೆಲ್ಲುತ್ತೇನೆ ಎಂಬ ಭರವಸೆ ಮಾಲೀಕನನ್ನಾಗಿ ಮಾಡುತ್ತದೆ.

ರವೀಂದ್ರ ಮುದ್ದಿ ಅವರ 'ಗಾಡ್ ಈಸ್ ನಾಟ್ ರೀಚಬಲ್', ಅನಂತ ಕುಣಿಗಲ್‌ರ 'ಇರುವುದೊಂದೇ ಬದುಕು' ಕೃತಿ ಬಿಡುಗಡೆ

ಮೈಸೂರು,ಅ.5(ಜಿಎ)–(ಅ)ಪರಿಚಿತ ಓದುಗರ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ರವೀಂದ್ರ ಮುದ್ದಿ ಅವರ 'ಗಾಡ್ ಈಸ್ ನಾಟ್ ರೀಚಬಲ್' ಹಾಗೂ ಅನಂತ ಕುಣಿಗಲ್ ಅವರ 'ಇರುವುದೊಂದೇ ಬದುಕು' ಕೃತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಲೋಕಾರ್ಪಣೆಗೊಳಿಸಿದರು.

ಕಾರ್ಯಕ್ರಮ ಆರಂಭಕ್ಕೂ ಮುನ್ನ ಖ್ಯಾತ ಕಾದಂಬರಿಕಾರರಾದ ಡಾ. ಎಸ್.ಎಲ್. ಭೈರಪ್ಪ, ಪೂರ್ಣಚಂದ್ರ ತೇಜಸ್ವಿ ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಸಲ್ಲಿಸಿ, ಒಂದು ನಿಮಿಷ ಮೌನಾಚರಿಸಿ, ಇತ್ತೀಚೆಗೆ ನಿಧನರಾದ ಖ್ಯಾತ ಕಾದಂಬರಿಕಾರ ಡಾ. ಭೈರಪ್ಪ ಹಾಗೂ ಭಾನುವಾರ ನಿಧನರಾದ ಕಥೆಗಾರ ಡಾ. ಮೊಗಳ್ಳಿ ಗಣೇಶ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಂತರ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಯುವಕರು ಮೊಬೈಲ್ ಹಿಂದೆ ಹೋಗಿದ್ದಾರೆ. ಸಾಹಿತ್ಯ ಕೃತಿಗಳನ್ನು ಓದುತ್ತಿಲ್ಲ ಎಂದು ಹೇಳಲಾಗುತ್ತದೆ. ಆದರೆ (ಅ)ಪರಿಚಿತ ಓದುಗರ ವೇದಿಕೆಯಲ್ಲಿ ಶೇ.99ರಷ್ಟು ಯುವ ಮನಸ್ಸುಗಳೇ ಇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರಿನ ಕಬ್ಬನ್ ಉದ್ಯಾನವನ ಮೈಸೂರಿನ ಯಾದವಗಿರಿಯ ಉದ್ಯಾನವನ ಮೊದಲಾದ ಕಡೆ ಅ–ಪರಿಚಿತ ಓದುಗರ ವೇದಿಕೆಯ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಸಾಹಿತ್ಯಾಭಿರುಚಿ ಬೆಳೆಸುವ ಜೊತೆಗೆ ಪುಸ್ತಕಗಳನ್ನು ಬಿಡುಗಡೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಅಂಕಣಕಾರರಾದ ಕುಸುಮಾ ಆಯರಹಳ್ಳಿ ಮಾತನಾಡಿ, ಲ್ಯಾಂಡ್‌ಲೈನ್ ಫೋನ್‌ಗಳು, ಲೆಟರ್‌ಗಳು ಅಳಿವಿನ ಅಂಚಿನಲ್ಲಿವೆ. ಹೀಗಾಗಿ ಸಾಹಿತ್ಯ ಕೃತಿಗಳು ಇವತ್ತಿಗೆ ಮಾರಾಟವಾಗಬಹುದು. ಆದರೆ ಐವತ್ತು ವರ್ಷಗಳ ನಂತರ ಅವುಗಳ ಪ್ರಸ್ತುತವಾಗುತ್ತವೆಯೇ? ಎಂಬುದನ್ನು ಚಿಂತಿಸಬೇಕು.

ಕೇವಲ ಸಿನಿಮಾ ಆಗಲಿ ಎಂಬ ಉದ್ದೇಶದಿಂದ ಕಾದಂಬರಿ ರಚಿಸಬಾರದು. ಕಾದಂಬರಿ ರಚಿಸಿದ ನಂತರ ಸಿನಿಮಾ ಆದರೆ ಅಡ್ಡಿ ಇಲ್ಲ. ಈಗ ರೀಲ್ಸ್ ಎಂಬ ಆತಂಕದ ಕಾಲ. ಎಲ್ಲಾ ಹೋರಾಟಗಳು ಮನೆಯಲ್ಲಿಯೇ ನಡೆಯುತ್ತಿವೆ. ಹೀಗಿರುವಾಗ ಅ–ಪರಿಚಿತ ಓದುಗರ ವೇದಿಕೆಯು ಭರವಸೆಯ ಬೆಳಕು ಎಂದರು. ಕಾರ್ಯಕ್ರಮದಲ್ಲಿ ರಂಗಕರ್ಮಿ ನಂದಕುಮಾರ್, ಕಿರಣ್ ಪಿ.ಕೌಶಿಕ್, ಸುನಿಲ್, ನಾಗರಾಜ್, ಅರ್ಪಿತಾ, ದೀಪು, ಲೇಖಕರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ರವೀಂದ್ರ ಮುದ್ದಿ ಅವರ 'ಗಾಡ್ ಈಸ್ ನಾಟ್ ರೀಚಬಲ್' ಹಾಗೂ ಅನಂತ ಕುಣಿಗಲ್ ಅವರ 'ಇರುವುದೊಂದೇ ಬದುಕು' ಕೃತಿಗಳನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಲೋಕಾರ್ಪಣೆಗೊಳಿಸಿದರು.

ವಿದ್ಯಾಸಿರಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಅ.5–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಮೆಟ್ರಿಕ್ ನಂತರದ 'ವಿದ್ಯಾರ್ಥಿ ವೇತನ', 'ಶುಲ್ಕ ಮರುಪಾವತಿ' ಮತ್ತು 'ವಿದ್ಯಾಸಿರಿ' ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅಭ್ಯರ್ಥಿಗಳು https://ssp.postmatric.karnataka.gov.in/ ಮೂಲಕ ಅ.31ರೊಳಗೆ ಅರ್ಜಿ ಸಲ್ಲಿಸಬೇಕು. ಕಾರ್ಯಕ್ರಮಗಳ ವಿವರ ಅರ್ಹತೆ ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ https://bcwd.karnataka.gov.in, ಸಹಾಯವಾಣಿ ಸಂ:8050770005, ಇಮೇಲ್: bcwdhelpline@gmail.com, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ದೂ.ಸಂ: 1902, ಇಮೇಲ್: postmatrichelp@karnataka.gov.in ಸಂಪರ್ಕಿಸಿ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸೋಮವಾರ 6 ಅಕ್ಟೋಬರ್ 2025

ಎಂ.ಎಸ್. ಭವ್ಯಾಗೆ ಪಿಎಚ್.ಡಿ ಪದವಿ



ಮೈಸೂರು, ಅ.5– ಡಾ. ಸಿ.ಡಿ. ಪರಶುರಾಮ ಅವರ ಮಾರ್ಗದರ್ಶನದಲ್ಲಿ ಎಂ.ಎಸ್. ಭವ್ಯಾ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಮಹಿಳಾ ಅಂಕಣ ಸಾಹಿತ್ಯ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜಗತ್ತು ಕಂಡ ಅಪರೂಪದ ವ್ಯಕ್ತಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಭಿಮತ

ಮೈಸೂರು, ಅ.5– ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಹಾತ್ಮ ಗಾಂಧೀಜಿಯವರ 156ನೇ ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅವರು ಮಾತನಾಡುತ್ತಾ, ಇಡೀ ಜಗತ್ತಿನ ಇತಿಹಾಸದಲ್ಲೇ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ, ಅಧಿಕಾರದ ಗದ್ದುಗೆ ಏರದೆ, ತನ್ನ ಕುಟುಂಬದ ಸೌಖ್ಯವನ್ನು ಬಯಸದೇ, ಸರ್ವ ರೀತಿಯ ತ್ಯಾಗ ಮಾಡಿದ ಜಗತ್ತು ಕಂಡ ಅಪರೂಪದ ವ್ಯಕ್ತಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಎಂದು ನುಡಿದರು.

ಮೋಹನ್ ದಾಸ್ ಕರಮ್‌ಚಂದ್ ಗಾಂಧಿ ಅವರು ದಕ್ಷಿಣ ಆಫ್ರಿಕಾದಿಂದ ಬಂದ ನಂತರ ಅಲ್ಲಿನ ವರ್ಣಭೇದನೀತಿ, ಅಸಮಾನತೆ ವಿರುದ್ಧ ಹೋರಾಟ ಮಾಡಿದರು. ಜೊತೆಗೆ ಗಾಂಧೀಜಿ ಅವರ ಸ್ವಾತಂತ್ರ್ಯದ ಕೂಗು ಇಡೀ ದೇಶದೆಲ್ಲೆಡೆ ಸಂಚಲನ ಮೂಡಿಸಿತು. ಭಾರತೀಯರಲ್ಲಿದ್ದ ಮೌಢ್ಯ, ಅಸ್ಪೃಶ್ಯತೆ ಮೊದಲಾದವುಗಳ ವಿರುದ್ಧ ಜಾಗೃತಿ ಮೂಡಿಸುವ ಕೆಲಸದಲ್ಲಿ ಮುಂದಾದರು. ಸತ್ಯ ಮತ್ತು ಅಹಿಂಸೆಯ ಮೂಲಕ ಸ್ವಾತಂತ್ರ್ಯವನ್ನು ಪಡೆಯಲು ಮುಂದಾಗುವುದರ ಜೊತೆಗೆ ಅದನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರು.

ಗಾಂಧೀಜಿ ಅವರ ಜೀವನ ಸರಳತೆಗೆ ಹೆಸರಾಗಿದ್ದು, ಅವರ ಬದುಕೇ ಒಂದು ಪ್ರಯೋಗ ಶಾಲೆಯಾಗಿತ್ತು. ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ ಹಾಗೂ ಉಪವಾಸ ಸತ್ಯಾಗ್ರಹಗಳ ಮೂಲಕ ಭಾರತ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಗಾಂಧೀಜಿಯ ತತ್ವಗಳು ಕೇವಲ ಆಚರಣೆಯಾಗಬಾರದು, ಅದು ಎಲ್ಲರನ್ನೂ ಒಳಗೊಳ್ಳಬೇಕು ಎಂದರು. ಇಂದಿನ ಭಾರತೀಯರ ಎಲ್ಲಾ ಸಾಧನೆಗೆ ಗಾಂಧೀಜಿ ಅವರು ತಂದುಕೊಟ್ಟ ಸ್ವಾತಂತ್ರ್ಯವೇ ಕಾರಣ ಎಂಬುದನ್ನು ಯುವಕರು ಮರೆಯುವಂತಿಲ್ಲ. ಯುವಕರು ಗಾಂಧೀಜಿಯವರ ಜೀವನ ಸಾಧನೆಯನ್ನು ಅಧ್ಯಯನ ಮಾಡದಿದ್ದರೆ ದೇಶಕ್ಕೆ ಮಾಡಿದ ದ್ರೋಹವಾಗುತ್ತದೆ ಎಂದು ವಿಷಾಧ ವ್ಯಕ್ತಪಡಿಸಿದರು.



ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಆಚರಿಸಲಾಯಿತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ಅಧ್ಯಾಪಕೇತರ ವರ್ಗದವರಿಗೆ ಸ್ವಚ್ಛತಾ ಆಂದೋಲನಾ ಪ್ರತಿಜ್ಞೆಯನ್ನು ಬೋಧಿಸಲಾಯಿತು. ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕ/ಸೇವಕಿಯರಿಂದ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಜಾಥಾವನ್ನು ಪಡುವಾರಹಳ್ಳಿ, ಜಯಲಕ್ಷ್ಮೀಪುರಂನಲ್ಲಿ ಮಾಡಲಾಯಿತು. ಜಯಲಕ್ಷ್ಮೀಪುರಂನ ಶ್ರೀಮತಿ ಲಕ್ಷ್ಮೀದೇವಮ್ಮ ಶಂಕರಶೆಟ್ಟಿ ಹೆರಿಗೆ ಆಸ್ಪತ್ರೆಯ ಆವರಣ ಹಾಗೂ ಕಾಲೇಜಿನ ಸುತ್ತಮುತ್ತ ಶ್ರಮದಾನವನ್ನು ಕೈಗೊಳ್ಳುವುದರ ಮೂಲಕ ಸ್ವಚ್ಛತೆಯನ್ನು ಮಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗ ಮುಖ್ಯಸ್ಥ ಡಾ.ಎಚ್.ಆರ್. ತಿಮ್ಮೇಗೌಡ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳಾದ ಡಾ.ದೊಡ್ಡರಸಯ್ಯ ಜಿ, ನಿರಂಜನ್ ಎಲ್, ಎನ್‌ಸಿಸಿ ಆಫೀಸರ್ ಶ್ರೀಮತಿ ಗಾಯತ್ರಿ, ಅಧ್ಯಾಪಕರು, ಅಧ್ಯಾಪಕೇತರರು, ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಸ್ವಯಂ ಸೇವಕರು ಹಾಜರಿದ್ದರು.

ಅಭಿನಂದನೆ...



ತಾಂಡವಪುರ ಪಿಎಸಿಸಿ ಬ್ಯಾಂಕ್ ಚುನಾವಣೆಯಲ್ಲಿ ನಿರ್ದೇಶಕರಾಗಿ ಆಯ್ಕೆಯಾದ ಬಿ.ಪ್ರಕಾಶ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಬಿ.ಎಂ.ನಾಗರಾಜು (ಧಣಿ) ಹಾಗೂ ಇತರರು ಉಪಸ್ಥಿತರಿದ್ದರು.

ನಾಲೇಜ್ಡ್ ಸಿಸ್ಟಮ್ ಕುರಿತು ಉಪನ್ಯಾಸ



ಮೈಸೂರು ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದೊಂದಿಗೆ ಇಂಡಿಯನ್ ನಾಲೇಜ್ಡ್ ಸಿಸ್ಟಮ್: ಇಂಡಿಯನ್ ಅಸ್ಟ್ರಾನಮಿ ಅಂಡ್ ಅಸ್ಟ್ರಾನಮೀಸ್ ಇನ್‌ಫ್ಲ್ಯೂಯನ್ಸ್ ಇನ್ ಜಿಯೋಗ್ರಾಫಿ ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಯಾಗಿ ಹುಣಸೂರಿನ ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಪಿ.ಎನ್. ಹೇಮಚಂದ್ರ ಪಾಲ್ಗೊಂಡಿದ್ದರು.

ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಗಾಂಧಿ ಜಯಂತಿ



ಮೈಸೂರಿನ ಬೋಗಾದಿ ಮುಖ್ಯ ರಸ್ತೆಯಲ್ಲಿರುವ ಗಂಗೋತ್ರಿ ಪಬ್ಲಿಕ್ ಶಾಲೆಯಲ್ಲಿ ಗಾಂಧಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಆಡಳಿತಾಧಿಕಾರಿ ಕಾಂತಿ ನಾಯಕ್, ಸಹ ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪುರುಷರ ಕಬಡ್ಡಿ ಸ್ಪರ್ಧೆ



2025–26ನೇ ಸಾಲಿನ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಪುರುಷರ ಕಬಡ್ಡಿ ಸ್ಪರ್ಧೆ ಅಕ್ಟೋಬರ್ 4ರಿಂದ 7ರವರೆಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಸದರಿ ಪಂದ್ಯಾವಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಪುರುಷರ ಕಬಡ್ಡಿ ತಂಡ ಭಾಗವಹಿಸಲಿದೆ. (ನಿಂತಿರುವವರು ಎಡದಿಂದ ಬಲಕ್ಕೆ) ಸಚಿನ್ ಪನ್ವಾರ್, ಓಂಕಾರ್ ಗವಾಡೆ, ವಿನೋದ್ ಚೌಧರಿ, ಶ್ರೇಯಸ್ ಸಚಿನ್ ಉಂಬರ್ದಾನ್, ಹರೀಶ್, ಅಭಿಷೇಕ್ ಪವರ್, ಚಂದನ್, ಪೃಥ್ವಿ ರಾಜ್ ಶಿಂಡೆ, ಯಶ್‌ವಂತ್, ಕೃಪಾ ಸಾಗರ್, ಬಾಲಪ ಶಂಕರ್ ಉಮಾರೆ, ಸಂಸ್ಕಾರ ಮಿಶ್ರ. (ಕುಳಿತಿರುವವರು ಎಡದಿಂದ ಬಲಕ್ಕೆ) ಸುಭಾಷ್, ಅನಿಕೇತ್, ವೆಂಕಟೇಶ್, ಭರತ್, ರಮೇಶ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಒಂದನೇ ಪುಟದಿಂದ

ಸರ್ಕಾರಿ ಶಾಲಾ ಕೊಠಡಿ ಧ್ವಂಸ



ಎಂದು ಆರೋಪಿಸಿದರು, ಅಲ್ಲದೇ ಶಾಲೆಯ ಎದುರಿಗೆ ತಾಲೂಕು ಕಚೇರಿ ಇದ್ದರೂ ಇಂತಹ ಘಟನೆಗಳು ನಡೆಯುವಾಗ ಅಧಿಕಾರಿಗಳು ಕ್ರಮ ಕೈಗೊಳ್ಳದೇ ಇರುವುದು ನಾಚಿಕೆಗೇಡಿನ ಸಂಗತಿ ಎಂದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಲೆ ಕೊಠಡಿ ಧ್ವಂಸ ಮಾಡಿ ರಸ್ತೆ ನಿರ್ಮಿಸಿಕೊಂಡು ಮನೆ ನಿರ್ಮಾಣಕ್ಕಾಗಿ ಟ್ರ್ಯಾಕ್ಟರ್ ಮೂಲಕ ಮಣ್ಣು ಸಾಗಾಣಿಕೆ ಮಾಡುತ್ತಿದ್ದರೂ ಶಿಕ್ಷಣ ಇಲಾಖೆ ಹಾಗೂ ತಾಲೂಕು ಆಡಳಿತ ಕಣ್ಮುಚ್ಚಿ ಕುಳಿತಿದೆ ಎಂದು ಆರೋಪಿಸಿದರು.

ಸಾಲಿಗ್ರಾಮದ ಸರ್ಕಾರಿ ಶಾಲಾ ಕೊಠಡಿ ಧ್ವಂಸಕ್ಕೆ ಸಂಬಂಧಿಸಿದಂತೆ ಓರ್ವ ವ್ಯಕ್ತಿ ಹಾಗೂ ಆತನ ಸಹಚರರ ವಿರುದ್ಧ ಈಗಾಗಲೇ ಶಾಲೆಯ ಸಹ ಶಿಕ್ಷಕರ ಮೂಲಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಘಟನೆ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೂ ತರಲಾಗಿದೆ. ಶಾಲೆ ಆವರಣವನ್ನು ಒತ್ತುವರಿ ಮಾಡಿಕೊಂಡಿದ್ದವರನ್ನು ತೆರವು ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ.
– ಆರ್.ಕೃಷ್ಣಪ್ಪ, ಬಿಇಓ, ಕೆ.ಆರ್.ನಗರ.

ಇದು ನಮ್ಮೂರಿನ ಸಾಹುಕಾರ್ ದಿವಂಗತ ಬೋರಣ್ಣನವರ ಕುಟುಂಬ ಶಾಲೆಗಾಗಿ ನೀಡಿರುವ ಭೂಮಿ ಇದಾಗಿದ್ದು, ಈ ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದ ನಂತರ ಶಾಲೆಯನ್ನು ಬೇರೆ ಶಾಲೆಗೆ ವಿಲೀನಗೊಳಿಸಲಾಗಿದೆ. ಆದರೆ ಉರ್ದು ಶಾಲೆ ಇಲ್ಲಿಯೇ ನಡೆಯುತ್ತಿದೆ. ಶಾಲಾ ಕೊಠಡಿ ಧ್ವಂಸ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ಪ್ರಕರಣದಲ್ಲಿ ತಾಲೂಕು ಆಡಳಿತ ಮತ್ತು ಶಿಕ್ಷಣ ಇಲಾಖೆ ಅಸಡ್ಡೆ ತೋರಿದ್ದು, ನಮ್ಮ ಹಿರಿಯರು ಓದಿರುವ ಈ ಶಾಲೆ ಕಟ್ಟಡವನ್ನು ಉಳಿಸುವ ಕಾರ್ಯ ಆಗಬೇಕು. – ಸಾ.ರಾ.ನಂದೀಶ್, ಜಿಪಂ ಮಾಜಿ ಅಧ್ಯಕ್ಷರು.

ಮನೆಗೆ ನುಗ್ಗಿ ಮಹಿಳೆ ಮೇಲೆ ಕಬ್ಬಿಣದ ರಾಡಿನಿಂದ ಹಲ್ಲೆ ನಡೆಸಿ, ಪೆಟ್ರೋಲ್ ಸುರಿದು ಜೀವಂತ ದಹಿಸಲು ಯತ್ನ

ಕೆ.ಆರ್.ಪೇಟೆ ತಾಲೂಕಿನ ಮಾಂಬಹಳ್ಳಿಯಲ್ಲಿ ಘಟನೆ



ಕೆ.ಆರ್.ಪೇಟೆ, ಅ.5– ಗುಂಪೊಂದು ಮನೆಗೆ ನುಗ್ಗಿ ವಕೀಲರೊಬ್ಬರ ಪತ್ನಿ ಮೇಲೆ ಕಬ್ಬಿಣದ ರಾಡಿನಿಂದ ಮಾರಣಾಂತಿಕ ಹಲ್ಲೆ ನಡೆಸಿ, ಮೈಮೇಲೆ ಪೆಟ್ರೋಲ್ ಸುರಿದು ಜೀವಂತ ದಹಿಸಿ ಹತ್ಯೆಗೈಯಲು ಯತ್ನಿಸಿರುವ ಘಟನೆ ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಮಾಂಬಹಳ್ಳಿಯಲ್ಲಿ ಸಂಭವಿಸಿದೆ.

ಮಾಂಬಹಳ್ಳಿ ಗ್ರಾಮದ ವಕೀಲ ದಿ. ಕುಚೇಲೇ ಗೌಡರ ಪತ್ನಿ ಸುಲೋಚನ (41) ಎಂಬುವರೇ ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡವರಾಗಿದ್ದು, ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅದೇ ಗ್ರಾಮದ ಪರಶಿವ ಪವಿತ್ರ ಯತೀಶ, ಯಶೋಧ, ಕುಮಾರಿ ಅವರುಗಳು ಮಾರಣಾಂತಿಕ ಹಲ್ಲೆ ನಡೆಸಿ ಜೀವಂತ ದಹಿಸಲು ಯತ್ನಿಸಿದ ಆರೋಪಿಗಳಾಗಿದ್ದಾರೆ.

ಘಟನೆಯ ವಿವರ: ಇಬ್ಬರು ಹೆಣ್ಣು ಮಕ್ಕಳನ್ನು ಓದಿಸಿಕೊಂಡು ಮಾಂಬಹಳ್ಳಿ ಗ್ರಾಮದಲ್ಲಿ ತಮ್ಮ ಮನೆಯಲ್ಲಿ ವಾಸವಿದ್ದ ದಿವಂಗತ ವಕೀಲ ಕುಚೇಲೇಗೌಡರ ಪತ್ನಿ ಸುಲೋಚನ ಅವರ ಮನೆಗೆ ಏಕಾಏಕಿ ನುಗ್ಗಿರುವ ಆರೋಪಿಗಳು ಕಬ್ಬಿಣದ ರಾಡಿನಿಂದ ತಲೆ, ಮರ್ಮಾಂಗ, ಕೈ, ಕಾಲು, ಬೆನ್ನು ಸೇರಿದಂತೆ ಇತರೆ ಭಾಗಗಳಿಗೆ ಮನಬಂದಂತೆ ಮಾರಣಾಂತಿಕವಾಗಿ ಹಲ್ಲೆ ನಡೆಸಿದ್ದಾರೆ. ಅಷ್ಟೇ ಅಲ್ಲದೇ ಪೆಟ್ರೋಲ್ ಸುರಿದು ಜೀವಂತವಾಗಿ ದಹಿಸುವ ಪ್ರಯತ್ನ ಮಾಡಿದ್ದಾರೆ.

ಇದನ್ನು ನೋಡಿದ ಸುಲೋಚನ ಅವರ ಮಗಳು ಹರ್ಷವರ್ಧಿನಿ ಗೌಡ ಸಹಾಯಕ್ಕಾಗಿ ಜೋರಾಗಿ ಕೂಗಿಕೊಂಡಿದ್ದಾರೆ. ಗ್ರಾಮಸ್ಥರು ಓಡಿ ಬಂದು ಆರೋಪಿಗಳಿಂದ ಬೆಂಕಿ ಹಚ್ಚುವ ಮುನ್ನ ಸುಲೋಚನಾ ಅವರನ್ನು ರಕ್ಷಿಸಿ, ತಕ್ಷಣ 108 ಆಂಬುಲೆನ್ಸ್ ಮೂಲಕ ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದರು. ಈ ವೇಳೆ ಆರೋಪಿಗಳು ಪರಾರಿಯಾಗಿದ್ದಾರೆ.

ಆರೋಪಿಗಳನ್ನು ಬಂಧಿಸುವಲ್ಲಿ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸರು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಗಾಯಾಳು ಸುಲೋಚನಾ ಅವರ ಪುತ್ರಿ ಯಶಸ್ವಿನಿ ಗೌಡ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ನೋವು ತೋಡಿಕೊಂಡಿದ್ದಾರೆ.

ಕೂಡಲೇ ಪೊಲೀಸರು ಆರೋಪಿಗಳನ್ನು ಬಂಧಿಸಬೇಕು, ತಮ್ಮ ಸೇವೆಯ ಅವಧಿಯಲ್ಲಿ ಬಡವರಿಗೆ, ನೊಂದವರಿಗೆ ಉಚಿತ ಕಾನೂನು ನೆರವು ನೀಡುತ್ತಿದ್ದ ಮೃತ ವಕೀಲನ ಕುಟುಂಬಕ್ಕೆ ರಕ್ಷಣೆ ನೀಡಬೇಕು. ಮಾರಣಾಂತಿಕ ಹಲ್ಲೆ ನಡೆಸಿ ಜೀವಂತ ದಹನಕ್ಕೆ ಯತ್ನಿಸಿರುವ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ತಾಲೂಕಿನ ವಿವಿಧ ಪ್ರಾತಿಪರ ಸಂಘಟನೆಗಳು ಉನ್ನತ ಪೊಲೀಸ್ ಅಧಿಕಾರಿಗಳನ್ನು ಒತ್ತಾಯಿಸಿವೆ.

ಕಿಕ್ಕೇರಿಯಲ್ಲಿ ಯುವಕರ ಗುಂಪು ಘರ್ಷಣೆ

ಕಿಕ್ಕೇರಿ: ಕಿಕ್ಕೇರಿ ಹೊರವಲಯದಲ್ಲಿನ ಗದ್ದೆಹಳ್ಳದಲ್ಲಿರುವ ವೈನ್ ಸ್ಟೋರ್ ಬಳಿ ಯುವಕರ ಗುಂಪಿನ ನಡುವೆ ಘರ್ಷಣೆ ಸಂಭವಿಸಿದ್ದು, ಹಲವರು ಗಾಯಗೊಂಡಿರುವ ಘಟನೆ ಭಾನುವಾರ ಜರುಗಿದೆ.

ಗೆಳೆಯನೊಬ್ಬನ ಹುಟ್ಟುಹಬ್ಬ ಆಚರಣೆಗಾಗಿ ಗೌತಮ್, ಯಶು, ವಿಜಯ್ (ದಾರಾ) ಗದ್ದೆಹಳ್ಳದ ಬಾರ್ ಬಳಿಗೆ ತೆರಳಿದ್ದರು. ಇದೇ ವೇಳೆ ಕಿಕ್ಕೇರಿಯಲ್ಲಿ ವೆಲ್ಡಿಂಗ್ ಕೆಲಸಗಾರರಾದ ಸಚಿನ್, ಚರಣ್ ಇದೇ ಸ್ಥಳಕ್ಕೆ ಆಗಮಿಸಿದ್ದಾರೆ. ಎರಡು ಗುಂಪಿನ ನಡುವೆ ಮಾತಿಗೆ ಮಾತು, ನಡೆದು ಘರ್ಷಣೆಯಾಗಿದೆ. ಈ ಯುವ ಕರು ಹೊರಗಿನವರಾಗಿದ್ದು ಆಯುಧ ಪೂಜೆ ಹಬ್ಬಕ್ಕಾಗಿ ಕಿಕ್ಕೇರಿಗೆ ಬಂದಿದ್ದರು ಎನ್ನಲಾಗಿದೆ.

ಘರ್ಷಣೆಯಲ್ಲಿ ಚರಣ್ ತನಗೆ ಹಲ್ಲೆಯಾಗಿದೆ ಎಂದು ಕಿಕ್ಕೇರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದು ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈತನೊಂದಿಗೆ ಇನ್ನೂ ಕೆಲವರಿಗೆ ಗಾಯಗಳಾಗಿದ್ದು, ಮಾಹಿತಿಗಳು ತಿಳಿದು ಬಂದಿಲ್ಲ.

ಮನು ಕೂಡ ತಮಗೆ ಚರಣ್ ಗುಂಪು ಹಲ್ಲೆ ಮಾಡಿದೆ ಎಂದು ಕಿಕ್ಕೇರಿ ಪೊಲೀಸರಿಗೆ ಪ್ರತಿ ದೂರು ನೀಡಿದ್ದಾರೆ. ಎರಡು ದೂರನ್ನು ಕಿಕ್ಕೇರಿ ಪೊಲೀಸರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮೈಶುಗರ್ ಶಾಲಾ ಆವರಣದಲ್ಲಿ ಶ್ರಮದಾನ



ಸ್ವಚ್ಛತಾ ಶ್ರಮದಾನಕ್ಕೂ ಮುನ್ನ ಗಾಂಧಿ ಜಯಂತಿ ಅಂಗವಾಗಿ ಗಾಂಧೀಜಿ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಲಾಯಿತು.

ಮಂಡ್ಯ: ಸರಳ ಜೀವನ ಮತ್ತು ಸ್ವಚ್ಛಂದ ಬದುಕು ಸುಂದರವಾಗಿರುತ್ತದೆ ಎಂಬುದು ಮಹಾತ್ಮಗಾಂಧೀಜೀ ಅವರ ಆಶಯ ಎಂದು ಕಾಂಗ್ರೆಸ್ ಮುಖಂಡ ಶಿವನಂಜು ಹೇಳಿದರು.

ನಗರದ ಸ್ವರ್ಣಸಂದ್ರ ಬಡಾವಣೆಯಲ್ಲಿರುವ ಮೈಶುಗರ್ ಪ್ರೌಢಶಾಲೆ ಆವರಣದಲ್ಲಿ ಶಿವನಂಜು ಮತ್ತು ಮೈಶುಗರ್ ಪ್ರೌಢಶಾಲಾ ವಾಕಿಂಗ್ ಸ್ನೇಹಿತರಿಂದ ಆಯೋಜಿಸಿದ್ದ ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ಸ್ವಚ್ಛತಾ ಅಭಿಯಾನ–ಧೂಮಪಾನ, ಮದ್ಯಪಾನ ಹಾಗೂ ಪ್ಲಾಸ್ಟಿಕ್ ಬಳಕೆ ನಿಷೇಧ–ಸ್ವಚ್ಛತೆ ಕಾಪಾಡಿ ಪರಿಸರ ಉಳಿಸಿ ಎಂಬ ಘೋಷ ವಾಕ್ಯದೊಂದಿಗೆ ಸ್ವಚ್ಛತಾ ಶ್ರಮದಾನ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂದಿನ ಕಾಲಘಟ್ಟದಲ್ಲಿ ಸರಳಜೀವನ ತುಂಬ ವಿರಳವಾಗಿದೆ, ಗಾಂಧಿಜೀ ಮತ್ತು ಗಾಂಧಿವಾದಿಗಳ ತತ್ವ ಮತ್ತು ಆದರ್ಶ ಜೀವನ ಪ್ರೇರಣೆಯಾಗುತ್ತದೆ, ವಿದ್ಯಾರ್ಥಿಗಳಿಗೆ ಮಹಾತ್ಮ ಗಾಂಧಿ ಮತ್ತು ಸ್ವಾತಂತ್ರ ಹೋರಾಟರಾರ ಜೀವನಚರಿತ್ರೆಯನ್ನು ತಿಳಿಸಿಕೊಡಬೇಕಿದೆ ಎಂದರು.

ಮಹಾತ್ಮಗಾಂಧೀಜೀ ಅವರ ಜೀವನ ಮತ್ತು ಸ್ವಾತಂತ್ರ್ಯ ಚಳುವಳಿಯ ಸನ್ನಿವೇಶಗಳು ಎಲ್ಲರಿಗೂ ತಿಳಿದಿದೆ, ಇವರು ಹಾಕಿಕೊಟ್ಟ ಸರಳ ಮಾರ್ಗ ಮತ್ತು ಜೀವನ ಸಂದೇಶವನ್ನು ಎಲ್ಲರೂ ಪಾಲಿಸಿದರೆ ಸಮ ಸಮಾಜ ಭಾರತ ನಿರ್ಮಾಣವಾಗುತ್ತದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮೈಶುಗರ್ ಪ್ರೌಢ ಶಾಲಾ ವಿದ್ಯಾರ್ಥಿಗಳು ಮತ್ತು ವಾಕಿಂಗ್ ಸ್ನೇಹಿತರು ಆವರದಲ್ಲಿದ್ದ ಅನಗತ್ಯ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ವಸ್ತುಗಳನ್ನು ಆಯ್ದು ಸಂಗ್ರಹಿಸಿದರು.

ಸ್ಥಳೀಯ ಮುಖಂಡರಾದ ಸೋಮಶೇಖರ್ ಉಮಾಪತಿ ರಾಜು, ಜಯರಾಮ್ ಹಾಗೂ ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕೆ.ಆರ್.ಪೇಟೆ, ಅ.5– ಮಂಡ್ಯ ಜಿಲ್ಲಾ ಕುರುಬರ ಸಂಘದ ವತಿಯಿಂದ 2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ರಷ್ಟು, ದ್ವಿತೀಯ ಪಿಯುಸಿಯಲ್ಲಿ ಶೇ.85ರಷ್ಟು ಅಂಕ ಪಡೆದಿರುವ ಕುರುಬ, ಹಾಲುಮತ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಆರ್.ಪೇಟೆ ಎಂ.ಜೆ.ಶಶಿಧರ್ ತಿಳಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 2024–25ಸಾಲಿನಲ್ಲಿ ಎಸ್.ಎಸ್.ಎಲ್.ಸಿ(ಶೇ.90ರಷ್ಟು ಅಂಕ ಪಡೆದವರು) ಮತ್ತು ಪಿಯುಸಿ ಶೇ.85ರಷ್ಟು ಅಂಕ ಪಡೆದು ಉತ್ತೀರ್ಣ ಹೊಂದಿದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿ ಜೊತೆ ಅಂಕಪಟ್ಟಿ, ಆಧಾರ್ ಕಾರ್ಡ್, ಜಾತಿ ದೃಢೀಕರಣ ಪತ್ರಗಳ ಜೆರಾಕ್ಸ್ ಪ್ರತಿಗಳೊಂದಿಗೆ ಎರಡು ಪೋಟೋದೊಂದಿಗೆ ಇದೇ ಅ.31ರೊಳಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಎಲ್ಲಾ ಜೆರಾಕ್ಸ್ ದಾಖಲಾತಿಗಳಿಗೆ ಸ್ವಯಂ ದೃಢೀಕರಣ(ವಿದ್ಯಾರ್ಥಿಗಳ ಸಹಿ) ಇರಬೇಕು. ವಿವರಗಳಿಗೆ ಮೊ.9964568509 ಮೂಲಕ ಸಂಪರ್ಕಿಸಬಹುದು.

ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಕೆ.ಪಿ.ಸ್ವಾಮಿ ಕೊಡುಗೆ ಅಪಾರ: ಕೆ.ಟಿ.ಶ್ರೀಕಂಠೇಗೌಡ



'ರಂಗಕುಸುಮ' ಪುಸ್ತಕ ಬಿಡುಗಡೆಗೊಳಿಸಿದ ಗಣ್ಯರು.

ಮಂಡ್ಯ, ಅ.5– ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಕೆ.ಪಿ.ಸ್ವಾಮಿ ಅವರು ಸಾಂಸ್ಕೃತಿಕ, ಸಾಹಿತ್ಯಿಕ ಹಾಗೂ ರಂಗಭೂಮಿ ಕ್ಷೇತ್ರಗಳಲ್ಲಿ ಅನನ್ಯವಾದ ಕೊಡುಗೆ ನೀಡಿದ್ದಾರೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಶ್ಲಾಘಿಸಿದರು.

ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಕೆ.ಪಿ.ಸ್ವಾಮಿ ಅವರ ಪೌರಾಣಿಕ ನಾಟಕ ಸಂಪುಟವಾದ 'ರಂಗಕುಸುಮ' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ರಂಗಕುಸುಮ ಪುಸ್ತಕದ ಕುರಿತು ಮಾತನಾಡಿದ ಸಾಹಿತಿ, ವಿಮರ್ಶಕರು ಆದ ಡಾ.ಸಿ.ನಾಗಣ್ಣ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ರಂಗ ಕಲಾವಿದರಾದ ಲಕ್ಷ್ಮಯ್ಯ, ಬಿ.ವೆಂಕಟ್, ಅಪ್ಪಾಜಿಗೌಡ, ಸಿ.ದೊಡ್ಡಣ್ಣಚಾರ್, ಕೆ.ಜಯರಾಮ್, ಪುಸ್ತಕ ಪ್ರಕಾಶಕ ಆನಂದ ಕೊರಟಿ, ಅಶೋಕ್‌ಕುಮಾರ್ ಅವರುಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ವೇದಿಕೆಯಲ್ಲಿ ಮಾಜಿ ಶಾಸಕ ಎಂ.ಶ್ರೀನಿವಾಸ್, ಕರ್ನಾಟಕ ಸಂಘದ ಅಧ್ಯಕ್ಷ ಡಾ. ಜಯಪ್ರಕಾಶ್‌ಗೌಡ, ಕೆ.ಪಿ.ಸ್ವಾಮಿ ಉಪಸ್ಥಿತರಿದ್ದರು.

ಕೆರೆ ತುಂಬಿಸುವ ನೀರಾವರಿ ಯೋಜನೆಗೆ ಚಾಲನೆ



ಏತನೀರಾವರಿ ಯೋಜನೆಗೆ ಶಾಸಕ ದರ್ಶನ್‌ಪುಟ್ಟಣ್ಣಯ್ಯ ಭೂಮಿ ಪೂಜೆ ನೆರವೇರಿಸಿದರು.

ಪಾಂಡವಪುರ, ಅ.5– ತಾಲೂಕಿನ ಅಗಟಹಳ್ಳಿ ಗ್ರಾಮದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ 1.80 ಕೋಟಿ ವೆಚ್ಚದಲ್ಲಿ ದುದ್ದ ಏತ ನೀರಾವರಿ ಯೋಜನೆಯಿಂದ ಅಗಟಹಳ್ಳಿ, ಮಾದೇಗೌಡನ ಕೊಪ್ಪಲು ಹಾಗೂ ಚಿಕ್ಕಕೊಪ್ಪಲು ಗ್ರಾಮದ ಕೆರೆ ತುಂಬಿಸುವ ಏತ ನೀರಾವರಿ ಯೋಜನೆಗೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ 1.80 ಕೋಟಿ ವೆಚ್ಚದಲ್ಲಿ ದುದ್ದ ಏತನೀರಾವರಿ ಯೋಜನೆ ವತಿಯಿಂದ ಬಾಬುರಾಯನ ಕಟ್ಟೆಯಿಂದ ತಾಲೂಕಿನ ಗಡಿ ಗ್ರಾಮಗಳಾದ ಅಗಟಹಳ್ಳಿ, ಮಾದೇಗೌಡನಕೊಪ್ಪಲು ಹಾಗೂ ಚಿಕ್ಕಕೊಪ್ಪಲು ಗ್ರಾಮದ ಕೆರೆಗಳಿಗೆ ಜನ ಜಾನುವಾರು ಹಾಗೂ ಅಂತರ್ಜಲವೃದ್ಧಿಗಾಗಿ ನೀರು ತುಂಬಿಸುವ ಯೋಜನೆಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು.

ಅಗಟಹಳ್ಳಿ ಗ್ರಾಮದ ಸಂಪರ್ಕ ರಸ್ತೆಗೂ ಈಗಾಗಲೆ ಕ್ರಮ ವಹಿಸಲಾಗಿದ್ದು ಶೀಘ್ರವೇ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು. ಜತೆಗೆ ರಸ್ತೆಗಳು ಅಧ್ವಾನಗೊಂಡಿರುವುದರಿಂದ ಈ ಭಾಗದ ಸುತ್ತಮುತ್ತಲಿನ ಗ್ರಾಮಗಳಿಗೆ ಸಾರಿಗೆ ಬಸ್ ಸಂಪರ್ಕವು ಸಹ ಕಡಿತಗೊಂಡಿತ್ತು, ಇದರಿಂದ ಶಾಲಾ ಮಕ್ಕಳಿಗೆ ಸಾಕಷ್ಟು ಅನಾನುಕೂಲವಾಗಿತ್ತು. ಈ ಹಿನ್ನೆಲೆಯಲ್ಲಿ ಸಾರಿಗೆ ಬಸ್ ಸಂಪರ್ಕಕ್ಕೂ ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ರವಿರಾಜ್, ಸಣ್ಣ ನೀರಾವರಿ ಇಲಾಖೆ ಎಇಇ ಈಶ್ವರ್, ಎಇ ಕಿರಣ್, ಗುತ್ತಿಗೆದಾರ ಸಚ್ಚಿನ್, ಯಜಮಾನ್ ನಿಂಗೇಗೌಡ, ಮೋಹನ್ ಕುಮಾರ್, ಸತೀಶ್, ಶಂಕರೇಗೌಡ, ನಟರಾಜು, ಪಟೇಲ್ ಪುಟ್ಟಸ್ವಾಮಿ, ಹನುಮೇಶ, ಸಚ್ಚಿನ್, ಪ್ರವೀಣ್, ಚಿಕ್ಕಕೊಪ್ಪಲು ಚಂದ್ರಶೇಖರ್, ಜೈಶಂಕರ್ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ಕಿಕ್ಕೇರಿಯ ಬ್ರಹ್ಮೇಶ್ವರ ದೇಗುಲ ಸ್ವಚ್ಛಗೊಳಿಸಿದ ಅಧಿಕಾರಿಗಳು



ಕಿಕ್ಕೇರಿ: ಇಲ್ಲಿನ ಇತಿಹಾಸ ಪ್ರಸಿದ್ಧ ಹೊಯ್ಸಳರ ಕಾಲದ ಬ್ರಹ್ಮೇಶ್ವರ ದೇಗುಲದಲ್ಲಿ ಬೃಹದಾಕಾರವಾಗಿ ಬೆಳೆದಿದ್ದ ಗಿಡಗಂಟಿ ತೆಗೆದು ಶ್ರಮದಾನ ಮಾಡುವ ಮೂಲಕ ಅಧಿಕಾರಿ ಗಳು, ಪೌರಕಾರ್ಮಿಕರು ದೇಗುಲ ಶುಚಿತ್ವಗೊಳಿಸಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ತಾ ಪಂ, ಕಿಕ್ಕೇರಿ ಗ್ರಾಪಂ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಸ್ವಚ್ಛ ಶನಿವಾರ ಆಚರಣೆ ಕಾರ್ಯಕ್ರಮದಲ್ಲಿ ದೇಗುಲ ಪರಿಸರ ಸ್ವಚ್ಛಗೊಳಿಸಲಾಯಿತು.

ತಾಪಂ ಕಾರ್ಯನಿರ್ವಹಣಾಧಿಕಾರಿ ಸುಷ್ಮಾ ಮಾತನಾಡಿ, ವಾರದಲ್ಲಿ ಒಂದು ದಿನ ಸ್ವಚ್ಛ ದಿನಾಚರಣೆ ಮಾಡುವುದರಿಂದ ಇಡೀ ಗ್ರಾಮ ನೈರ್ಮಲ್ಯತೆಯ ಬೀಡಾಗಲಿದೆ. ವಾರಕ್ಕೊಂದು ಬಡಾವಣೆ ಆಯ್ಕೆ ಮಾಡಿಕೊಂಡು ಸ್ಥಳೀಯ ಮುಖಂಡರು, ಸಂಘ–ಸಂಸ್ಥೆಗಳ ಸಹಕಾರದಿಂದ ಶುಚಿತ್ವಕ್ಕೆ ಮುಂದಾಗಬೇಕು ಎಂದು ಮನವರಿಕೆ ಮಾಡಿದರು.

ಪೌರಕಾರ್ಮಿಕರು, ಅಧಿಕಾರಿಗಳು ಕೈಯಲ್ಲಿ ಕುಡುಗೋಲು, ಹಾರೆ, ಪಿಕಾಸಿ, ಗುದ್ದಲಿ, ಪೊರಕೆ, ಬಾಂಡಲಿಗಳನ್ನು ಹಿಡಿದು ಕೂಲಿ ಕಾರ್ಮಿಕರಿಗೆ ತಾವು ಕಡಿಮೆ ಇಲ್ಲದಂತೆ ಕಲ್ಲು ಮುಳ್ಳು ಪೊದೆಗಳನ್ನು ಕಡಿದು ಎಲ್ಲೆಡೆ ಸ್ವಚ್ಛತೆ ಮಾಡಿದರು.

ಪಿಡಿಒ ಸಿ.ಚಲುವರಾಜು, ಪಾಪೇಗೌಡ, ವಾಸು, ಪೌರಕಾರ್ಮಿಕರು ಇದ್ದರು.

ಒಂದನೇ ಪುಟದಿಂದ

ಜನರು ಎಚ್ಚೆತ್ತುಕೊಳ್ಳಬೇಕು

ಇರುವುದಿಲ್ಲ. ಮೇಲಿದ್ದವರು ಕೆಳಗೆ ಬರಬೇಕು, ಕೆಳಗಿದ್ದವರು ಮೇಲೆ ಬರಲೇಬೇಕು. ಸಮಯ ಬಂದಾಗ ನಾವು ಪುಟಿದೇಳುತ್ತೇವೆ. ಈ ವಾಸ್ತವ ಸತ್ಯವನ್ನು ಅವರು ಅರಿಯಬೇಕು ಎಂದು ಎಚ್ಚರಿಕೆ ನೀಡಿದರಲ್ಲದೆ, ಇಂತಹ ಸವಾಲುಗಳನ್ನು ನಾವು ದಿಟ್ಟತನದಿಂದ ಎದುರಿಸಲು ನಮ್ಮ ಸಮುದಾಯ ಗಟ್ಟಿಯಾಗಿ ನಿಲ್ಲಬೇಕು ಎಂದು ಹೇಳಿದರು. ಕರ್ನಾಟಕ ಶೈಕ್ಷಣಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕವಾಗಿ ಶ್ರೀಮಂತಗೊಳ್ಳಲು ಮಠಗಳ ನಿಸ್ವಾರ್ಥ ಸೇವೆಯೇ ಪ್ರಮುಖ ಕಾರಣವಾಗಿದೆ. ಪ್ರಾಯಶಃ ಮಠಗಳು ಇಲ್ಲದಿದ್ದರೆ ಕರ್ನಾಟಕ ಶೈಕ್ಷಣಿಕವಾಗಿ ಬಹಳ ಹಿಂದುಳಿಯುತ್ತಿತ್ತು ಎಂದು ಅಭಿಪ್ರಾಯಪಟ್ಟರು. ಮಠಗಳು ಕೋಟ್ಯಾಂತರ ಮಕ್ಕಳಿಗೆ ಶಿಕ್ಷಣ ನೀಡಿ ಅವರಿಗೆ ಜ್ಞಾನ ದೀಕ್ಷೆ ನೀಡುತ್ತಿದೆ. ಈ ಹಿನ್ನೆಲೆ ಮಠಗಳ ಕಾರ್ಯವನ್ನು ಪ್ರತಿಯೊಬ್ಬರು ಪ್ರಶಂಸಿಬೇಕು ಎಂದು ವಿಜಯೇಂದ್ರ ಸಲಹೆ ನೀಡಿದರು. ಕನಕಪುರದ ಶ್ರೀ ದೇಗುಲದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಲ್.ನಾಗೇಂದ್ರ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕ 3 ನೇ ಸ್ಥಾನ ಪಡೆಯಲು ಮಠಗಳ ಅಕ್ಷರ ದಾಸೋಹ ಕಾರಣ

ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲಿ 3 ನೇ ಸ್ಥಾನ ಪಡೆಯಲು ಮಠಮಾನ್ಯಗಳ ಅಕ್ಷರ ದಾಸೋಹ ಮೂಲ ಕಾರಣ ಎಂದು ತುಮಕೂರಿನ ಶ್ರೀ ಸಿದ್ದಗಂಗಾ ಮಠದ ಶ್ರೀ ಶಿವಸಿದ್ಧ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮಠಗಳು ತ್ರಿವಿಧ ದಾಸೋಹದ ಜೊತೆಗೆ ನ್ಯಾಯ ಸ್ಥಾನದಲ್ಲಿ ನಿಂತು ಕೆಲಸ ಮಾಡುತ್ತಿವೆ. ಭಾರತ ಸ್ವಾತಂತ್ರ್ಯ ಗಳಿಸುವ ಮೊದಲಿನಿಂದಲೂ ಬ್ರಿಟಿಷರ ಕಾಲದಲ್ಲೇ ಮಠಗಳು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿವೆ ಎಂದು ಹೇಳಿದರು.

ಶಿಕ್ಷಣ ನೀಡುವ ಜೊತೆಗೆ ಮಠಗಳು ಸಂಸ್ಕಾರ ಕೂಡ ನೀಡುತ್ತಿವೆ. ಪ್ರಮುಖವಾಗಿ ಧರ್ಮಾತೀತ ಹಾಗೂ ಜ್ಯಾತ್ಯಾತೀತವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಶ್ರೀ ಶಿವಸಿದ್ಧ ಸ್ವಾಮೀಜಿ ತಿಳಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ ಅವರು, ಶಾಸಕರ ವಿಶೇಷ ಅನುದಾನದಲ್ಲಿ ಶ್ರೀ ಗುರುಮಲ್ಲೇಶ್ವರ ಮಠಕ್ಕೆ 5 ಲಕ್ಷ ರೂಪಾಯಿ ನೀಡುವುದಾಗಿ ಭರವಸೆ ನೀಡಿದರು. ಅನ್ನ ದಾಸೋಹ ಮಾಡುತ್ತಿರುವ ಶ್ರೀ ಗುರುಮಲ್ಲೇಶ್ವರ ಮಠದಲ್ಲಿ ಇನ್ನು ಒಲೆ ಆರದಿರುವುದು ಈ ಮಠದ ವೈಶಿಷ್ಟತೆ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹೇಳಿದರು. ತರುವಾಯ ಮಾತನಾಡಿದ ಶ್ರೀ ಗುರುಮಲ್ಲೇಶ್ವರ ತ್ರಿವಿಧ ದಾಸೋಹ ಮಹಾ ಸಂಸ್ಥಾನದ ಶ್ರೀ ಮಹಾಂತ ಸ್ವಾಮೀಜಿ ಅವರು, ಜನರಿಂದ ದವಸ ಧಾನ್ಯ ಸಂಗ್ರಹಿಸಿ ಮಠದಲ್ಲಿ ಅನ್ನ ದಾಸೋಹ ನಡೆಸಲಾಗುತ್ತಿದೆ. ಆದರೆ ಮಕ್ಕಳಿಗೆ ಶಿಕ್ಷಣ ನೀಡಲು ಹಾಸ್ಟಲ್ ನಿರ್ಮಾಣಕ್ಕೆ ಅನಿವಾರ್ಯವಾಗಿ ಸರ್ಕಾರದಿಂದ ಅನುದಾನ ಪಡೆಯಲಾಗಿದೆ ಎಂದು ಸ್ಪಷ್ಟಪಡಿಸಿದರು.

ಗೊಂದಲದ ಗೂಡಾಗಿರುವ ಜಾತಿ ಸಮೀಕ್ಷೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕೆ

ಮೈಸೂರು, ಅ5(ಬಿಎಲ್‌ಯು)– ಪೂರ್ವ ತಯಾರಿ ಮಾಡಿಕೊಳ್ಳದೆ ಆತುರವಾಗಿ ಕೈಗೊಂಡಿರುವ ಜಾತಿ ಸಮೀಕ್ಷೆಯಿಂದ ಗೊಂದಲ ಹೆಚ್ಚಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದರು. ಮೈಸೂರಿನ ಅಗ್ರಹಾರದ ಶ್ರೀ ಗುರು ಮಲ್ಲೇಶ್ವರ ದಾಸೋಹ ಮಠದ ನೂತನ ವಿದ್ಯಾರ್ಥಿ ನಿಲಯ ಉದ್ಘಾಟಿಸಿ ಮಾತನಾಡಿದ ಅವರು, ಸಮೀಕ್ಷೆಯಲ್ಲಿ ಎಷ್ಟರ ಮಟ್ಟಿಗೆ ಗೊಂದಲ ಇದೆ ಎಂಬುದಕ್ಕೆ ಡಿ.ಕೆ.ಶಿವಕುಮಾರ್ ಅವರ ಪ್ರತಿಕ್ರಿಯೆ ಸ್ಪಷ್ಟ ನಿದರ್ಶನವಾಗಿದೆ ಎಂದು ಹೇಳಿದರು.

ಸಮೀಕ್ಷೆಯಲ್ಲಿ 60 ಪ್ರಶ್ನೆಗಳ ಮುಂದಿಟ್ಟಿದ್ದಾರೆ ಈ ಪ್ರಶ್ನೆಗಳಿಗೆ ಉತ್ತರಿಸಲು ಬಹಳಷ್ಟು ಸಮಯ ಹಿಡಿಯುತ್ತದೆ. ಸಮೀಕ್ಷೆಗೆ ವಿಶೇಷ ಚೇತನರನ್ನು ಬಳಕೆ ಮಾಡಿಕೊಂಡಿರುವುದಕ್ಕೆ ಟೀಕೆಗಳು ವ್ಯಕ್ತವಾಗುತ್ತಿವೆ ಎಂದು ವಿಜಯೇಂದ್ರ ಆಪಾದಿಸಿದರು.

ರಾಜ್ಯ ರಾಜಕೀಯದಲ್ಲಿ ನವೆಂಬರ್ ತಿಂಗಳಿನಲ್ಲಿ ಕ್ರಾಂತಿ ಆಗುತ್ತದೆ ಎಂದು ಸ್ವತಃ ಕಾಂಗ್ರೆಸ್ ನಾಯಕರೇ ಹೇಳುತ್ತಿದ್ದಾರೆ. ಸಿದ್ದರಾಮಯ್ಯ ಅವರು ಆತುರದಿಂದ ಸಮೀಕ್ಷೆ ನಡೆಸುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ನವೆಂಬರ್ ಕ್ರಾಂತಿ ಆಗುವುದನ್ನು ಪುಷ್ಟಿಕರಿಸುತ್ತದೆ ಎಂದು ಹೇಳಿದರು. ದೇಶದಲ್ಲಿ ಜಾತಿ ಜನಗಣತಿ ಮಾಡುವುದಾಗಿ ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೆ ಘೋಷಣೆ ಮಾಡಿದ್ದಾರೆ. ಇಂತಹ ಸಮಯದಲ್ಲಿ ಮತ್ತೊಂದು ಗಣತಿಯ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಮೂಡಿದೆ. ಇದೇನೇ ಇರಲಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ನ್ಯಾಯ ಸಿಗಬೇಕೆಂಬುದೇ ನಮ್ಮ ಪಕ್ಷದ ಮೂಲ ಧ್ಯೇಯ. ಆದರೆ ಇದು ಸಾಧ್ಯವಾಗದಿರುವುದು ನೋವಿನ ಸಂಗತಿ ಎಂದು ಆಪಾದಿಸಿದರು.

ನಾಯಕತ್ವ ಬದಲಾವಣೆ ಬಗ್ಗೆ ಮಾತನಾಡದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಪಕ್ಷದ ಶಾಸಕರು ಹಾಗೂ ಕಾರ್ಯಕರ್ತರಿಗೆ ತಾಕೀತು ಮಾಡಿದ್ದಾರೆ. ಬಿಹಾರ ಚುನಾವಣೆ ಬಳಿಕ ರಾಜ್ಯ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆ ಆಗುತ್ತದೆ ವಿಜಯೇಂದ್ರ ಭವಿಷ್ಯ ನುಡಿದರು.

ಸ್ವಸ್ಥಾನಕ್ಕೆ ಮರಳಿದ ಅಭಿಮನ್ಯು ನೇತೃತ್ವದ ಗಜಪಡೆ



ಕಾಡಿನತ್ತ ತೆರಳುವಾಗ ಸೊಂಡಿಲೆತ್ತಿ ನಮಿಸಿದ ಕ್ಯಾಪ್ಟನ್ ಅಭಿಮನ್ಯು.

ಬೀಡು ಬಿಟ್ಟಿದ್ದ ಹೇಮಾವತಿಗೆ ಮತ್ತೆ ಕಾಡಿಗೆ ಹೋಗಲು ಲಾರಿ ಹತ್ತಿಸಲು ಮುಂದಾದಾಗ ಹತ್ತಲು ಹಿಂದೇಟು ಹಾಕಿತು. ಐದಾರು ಬಾರಿ ಲಾರಿ ಹತ್ತು ವಿಫಲ ಯತ್ನ ಮಾಡಿದ ಹೇಮಾವತಿಗೆ ಕಾಲಿಗೆ ಬೇಡಿ ಹಾಕಿ, ಲಾರಿಗೆ ಹತ್ತಿಸುವಲ್ಲಿ ಮಾವುರು, ಕಾವಾಡಿಗಳು ಯಶಸ್ವಿಯಾದರು.

ಬೆಂಗಾವಲಿನಲ್ಲಿ ಸ್ವಸ್ಥಾನದತ್ತ ಪಯಣ: ಆ.4ರಂದು ಗಜಪಯಣದ ಮೊದಲ ತಂಡದಲ್ಲಿ ಮತ್ತಿಗೋಡು ಆನೆ ಶಿಬಿರದ ಕ್ಯಾಪ್ಟನ್ ಅಭಿಮನ್ಯು, ಭೀಮ, ಏಕಲವ್ಯ, ಕೊಡಗು ಜಿಲ್ಲೆಯ ದುಬಾರೆ ಶಿಬಿರದ ಧನಂಜಯ, ಪ್ರಶಾಂತ, ಕಂಜನ್, ಕಾವೇರಿ, ಬಳ್ಳೆ ಶಿಬಿರದ ಮಹೇಂದ್ರ, ಲಕ್ಷ್ಮೀ ಆನೆ, ಆ.25ರಂದು ಎರಡನೇ ತಂಡದಲ್ಲಿ ಬಂದಿದ್ದ ಮತ್ತಿಗೋಡು ಶಿಬಿರದ ಶ್ರೀಕಂಠ, ಭೀಮನ ಕಟ್ಟೆಯ ರೂಪಾ, ದುಬಾರೆಯ ಹೇಮಾವತಿ, ಗೋಪಿ, ಸುಗ್ರೀವ ಆನೆ ಪೊಲೀಸರ ಬೆಂಗಾವಲು ವಾಹನದೊಂದಿಗೆ ಅರಮನೆಯ ಜಯಮಾರ್ತಾಂಡ ದ್ವಾರದಿಂದ ಬಿಎನ್ ರಸ್ತೆ ಮಾರ್ಗವಾಗಿ ಗನ್ ಹೌಸ್, ಚಾಮರಾಜ ಜೋಡಿ ರಸ್ತೆ ರಾಮ ಸ್ವಾಮಿ ವೃತ್ತ, ಕೃಷ್ಣರಾಜ ಬುಲೆವಾರ್ಡ್ ರಸ್ತೆ, ಹುಣಸೂರು ರಸ್ತೆ ಮಾರ್ಗವಾಗಿ ಕ್ಯಾಂಪ್‌ಗಳತ್ತ ಪಯಣಿಸಿದವು.

ಮಾವುತರು ಕಾವಾಡಿಗಳಿಗೆ ಅರಮನೆ ಮಂಡಳಿ ಗೌರವ ಧನ ನೀಡದ್ದಕ್ಕೆ ಕೆಲ ಕಾಲ ಗೊಂದಲ



ಲಾರಿ ಏರಿ ನಿಂತಿರುವ ಗಜಪಡೆ.

ಮೈಸೂರು,ಅ.5(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ದಸರಾ ಗಜಪಡೆಯ ಮಾವುತರು ಮತ್ತು ಕಾವಾಡಿಗಳಿಗೆ ಬೀಳ್ಕೊಡುವ ವೇಳೆ ಅರಮನೆ ಮಂಡಳಿ ವತಿಯಿಂದ ನೀಡುತ್ತಿದ್ದ ಗೌರವ ಧನ ಈ ಬಾರಿ ನೀಡದ ಕಾರಣ ಮಾವುತರು, ಕಾವಾಡಿಗರು ಆನೆಗಳನ್ನು ಕರೆದೊಯ್ಯುವುದಿಲ್ಲ ಎಂದು ಪಟ್ಟು ಹಿಡಿದ ಕಾರಣ ಕೆಲ ಕಾಲ ಗೊಂದಲ ಉಂಟಾಯಿತು.

ಪ್ರತಿವರ್ಷ ಅರಮನೆ ಮಂಡಳಿಯಿಂದ ದಸರಾ ಗಜಪಡೆಯ ಮಾವುತರು, ಕಾವಾಡಿಗಳು, ವಿಶೇಷ ಮಾವುತರು, ಸಹಾಯಕರಿಗೆ ತಲಾ 15 ಸಾವಿರ ರೂ. ನೀಡಿ ಗೌರವಿಸಲಾಗುತ್ತಿತ್ತು. ಆದರೆ, ಈ ಬಾರಿ ಅರಮನೆ ಮಂಡಳಿ ವತಿಯಿಂದ ಇವರಿಗೆ ಗೌರವ ಧನ ನೀಡಲಿಲ್ಲ. ಇದರಿಂದ ಬೇಸರಗೊಂಡ ಮಾವುತರು, ಕಾವಾಡಿಗಳು ಕಳೆದ ಎರಡು ತಿಂಗಳಿಂದ ದುಡಿಸಿಕೊಂಡು ಒಂದು ಪೈಸೆ ನೀಡದೆ ಕಳುಹಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡರು. ಆನೆಗಳನ್ನು ಲಾರಿ ಮೇಲೆ ಹತ್ತಿಸಿದ ನಂತರ ಗೌರವ ಧನ ನೀಡದಿರುವ ಮಾಹಿತಿ ತಿಳಿಯುತ್ತಿದ್ದಂತೆಯೇ ಎಲ್ಲಾ 14 ಆನೆಗಳ ಮಾವುತರು, ಕಾವಾಡಿಗಳು ಆನೆಗಳನ್ನು ಕರೆದೊಯ್ಯುವುದಿಲ್ಲ ಎಂದು ಬಿಗಿಪಟ್ಟು ಹಿಡಿದರು. ಈ ವೇಳೆ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಅವರು, ಸಂತೋಷದಿಂದ ದಸರಾ ಮಹೋತ್ಸವವನ್ನು ಆಚರಿಸಿದ್ದೀರಿ. ಹೋಗುವ ವೇಳೆ ಬೇಸರ ಮಾಡಿಕೊಳ್ಳಬೇಡಿ. ನಿಮ್ಮೊಂದಿಗೆ ನಾವಿರುತ್ತೇವೆ ಎಂದು ಭರವಸೆ ನೀಡಿದರೂ ಮಾವುತರು ಸಮಾಧಾನಗೊಳ್ಳಲಿಲ್ಲ. ಬಳಿಕ ಡಿಸಿಎಫ್ ನಿಮಗೆ ಹಣ ತಲುಪಿಸುವ ಜವಾಬ್ದಾರಿ ನನ್ನದು ಎಂದು ಹೇಳಿದರು. ಇದಕ್ಕೆ ಮಾವುತರು ನಿಮ್ಮ ಮಾತಿನ ಮೇಲೆ ಭರವಸೆ ಇಟ್ಟು, ಹೋಗುತ್ತಿದ್ದೇವೆ. ಸಾಧ್ಯವಾದಷ್ಟು ಬೇಗ ಹಣ ಎಲ್ಲಾ ಮಾವುತರು, ಕಾವಾಡಿಗಳು ಹಾಗೂ ಕೆಲಸ ಮಾಡಿರುವ ಸಿಬ್ಬಂದಿಗೆ ನೀಡಬೇಕು ಎಂದು ಲಾರಿಗಳತ್ತ ತೆರಳಿದರು.

ಮಾವುತರು, ಕಾವಾಡಿಗಳ ಖಾತೆಗೆ ಜಮಾ ಮಾಡುತ್ತೇವೆ: ಪ್ರತಿವರ್ಷವೂ ದಸರಾ ಮಹೋತ್ಸವ ಮುಗಿದ ಮೇಲೆ ಮಾವುತರು, ಕಾವಾಡಿಗಳಿಗೆ ಅರಮನೆ ಮಂಡಳಿ ವತಿಯಿಂದ ಗೌರವ ಧನ ನೀಡಲಾಗುತ್ತಿತ್ತು. ಆದರೆ, ಈ ಬಾರಿ ಮಾವುತರು, ಕಾವಾಡಿಗಳ ಪಟ್ಟಿ ತಡವಾಗಿ ನೀಡಲಾಗಿದೆ. ಇಂದು ವಾರದ ರಜೆ ದಿನವಾಗಿರುವುದರಿಂದ ಬ್ಯಾಂಕ್‌ನಿಂದ ಹಣ ಡ್ರಾ ಮಾಡಲು ಸಾಧ್ಯವಾಗಿಲ್ಲ. ಅರಣ್ಯ ಇಲಾಖೆಯಿಂದ ಮಾವುತರು ಮತ್ತು ಕಾವಾಡಿಗಳ ಪಟ್ಟಿ ತರಿಸಿಕೊಂಡು ಅವರ ಬ್ಯಾಂಕ್ ಖಾತೆಗೆ ಪಾರದರ್ಶಕವಾಗಿ ಹಣ ಜಮೆ ಮಾಡುವುದಾಗಿ ಅರಮನೆ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗದಾಗೇ ನೀಡಿ, ಬ್ಯಾಂಕ್ ಖಾತೆಗೆ ಬೇಡ: ಗೌರವ ಧನವನ್ನು ನಗದು ರೂಪದಲ್ಲಿಯೆ ನೀಡಬೇಕು. ಬ್ಯಾಂಕ್ ಖಾತೆಗೆ ಜಮೆ ಮಾಡುತ್ತೇನೆ ಎಂದರೆ ನಾವು ಒಪ್ಪುವುದಿಲ್ಲ. ನಮ್ಮಲ್ಲಿ ಕೆಲವರಿಗೆ ಮಾತ್ರ ಬ್ಯಾಂಕ್ ಖಾತೆ ಇದೆ. ಅನೇಕರಿಗೆ ಬ್ಯಾಂಕ್ ಖಾತೆಯೇ ಇಲ್ಲ. ಇದರಿಂದ ಹಣ ನಮ್ಮ ಕೈ ಸೇರುವುದಿಲ್ಲ. ಆ ಕಾರಣದಿಂದ ನಗದು ರೂಪದಲ್ಲಿಯೇ ಗೌರವ ಧನ ನೀಡಬೇಕು. ಎರಡು ತಿಂಗಳಿಂದ ಮನೆ ಬಿಟ್ಟು ಮೈಸೂರಲ್ಲಿದ್ದೇವೆ. ದಸರಾ ಮುಗಿಸಿ ವಾಪಸ್ಸಾದ ನಂತರ ಸಂಬಂಧಿಕರೊಂದಿಗೆ ಭೋಜನ ಕೂಟ ಮಾಡುವುದಕ್ಕೆ ಹಣ ಬೇಕಾಗಿತ್ತು. ಪ್ರತಿ ವರ್ಷದಂತೆ ಮರಳಿ ಸ್ವಸ್ಥಾನಕ್ಕೆ ಹೋಗುವಾಗ ಗೌರವ ಧನ ನೀಡಿದ್ದರೆ ಸಂತೋಷದಿಂದ ಹೋಗುತ್ತಿದ್ದೆವು ಎಂದು ದಸರಾ ಗಜಪಡೆಯ ಮಾವುತರು, ಕಾವಾಡಿಗಳು ತಿಳಿಸಿದ್ದಾರೆ.

ಈ ಹಿಂದೆಯೆ ಪಟ್ಟಿ ನೀಡಲಾಗಿದೆ: ದಸರಾ ಗಜಪಡೆ ಮಾವುತರು, ಕಾವಾಡಿಗಳು, ಸಹಾಯಕರು, ವಿಶೇಷ ಮಾವುತರು ಹಾಗೂ ಗಜಪಡೆಯೊಂದಿಗೆ ಸೇವೆ ಸಲ್ಲಿಸಿದ ಸಿಬ್ಬಂದಿ ಸೇರಿದಂತೆ 75 ಮಂದಿಯ ಪಟ್ಟಿಯನ್ನು ಈ ಹಿಂದೆಯೇ ಅರಮನೆ ಮಂಡಳಿಗೆ ಸಲ್ಲಿಸಲಾಗಿದೆ ಆ ಪಟ್ಟಿ ಅನುಸಾರ ಅರಮನೆ ಮಂಡಳಿ ವತಿಯಿಂದ ಕಿಟ್ ನೀಡಲಾಗಿತ್ತು ಇದೀಗ ಎರಡನೇ ಬಾರಿಗೆ ಶನಿವಾರವೇ ಪಟ್ಟಿ ನೀಡಲಾಗಿದೆ ಎಂದು ಅರಣ್ಯಾಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

ಸ್ವತಂತ್ರ ಧರ್ಮದ ಕೂಗು

ತಾವು ಕೊಟ್ಟಿದ್ದ ವರದಿಯಾಧರಿಸಿ ಸಿಎಂ ಸಿದ್ದರಾಮಯ್ಯ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆ ಕೋರಿ ಕೇಂದ್ರಕ್ಕೆ ಶಿಫಾರಸು ಕಳಿಸಿದ್ದರು. ಕೇಂದ್ರ ಸರ್ಕಾರ ಯಾವುದೇ ಸಕಾರಣ ನೀಡದೆ ಪ್ರಸ್ತಾವನೆಯನ್ನು ವಾಪಸ್ ಕಳುಹಿಸಿದೆ. ರಾಜ್ಯ ಸರ್ಕಾರ ಮತ್ತೊಮ್ಮೆ ವಿವರಣೆ ಹಾಗೂ ಸ್ಪಷ್ಟನೆಗಳೊಂದಿಗೆ ಕೇಂದ್ರಕ್ಕೆ ಲಿಂಗಾಯತ ಸ್ವತಂತ್ರ ಧರ್ಮ ಹಾಗೂ ಅಲ್ಪಸಂಖ್ಯಾತ ಸ್ಥಾನಮಾನ ಕೋರಿ ಶಿಫಾರಸು ಕಳಿಸಬೇಕು ಅಂದು ಆಗ್ರಹಿಸಿದರು. ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, ನಮ್ಮ ಮೆಟ್ರೋಗೆ 'ಬಸವ ಮೆಟ್ರೋ' ಎಂದು ಹೆಸರಿಡಬೇಕು. ಕಲ ಬುರಗಿ ವಿವಿಗೆ ಬಸವಣ್ಣನ ಹೆಸರಿಡಬೇಕು ಎಂದು ಆಗ್ರಹಿಸಿದರು. ಇನ್ನೂ ಡಾ.ಬಸವ ಲಿಂಗ ಪಟ್ಟದೇವರು ಮಾತನಾಡಿ, ವಚನ ವಿಶ್ವವಿದ್ಯಾಲಯ ಸ್ಥಾಪಿಸುವಂತೆ ಒತ್ತಾಯಿಸಿದರು.

ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ತಾವು ಭೌಗೋಳಿಕವಾಗಿ ಹಿಂದೂಗಳಾದರೆ, ಧರ್ಮದಲ್ಲಿ ಲಿಂಗಾಯತ ಧರ್ಮ ಅಂದರು. ಇದೇ ವೇಳೆ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗೆ ಹೋರಾಟ ಮುಂದುವರೆಸುವುದು, ಲಿಂಗಾಯತ ಧರ್ಮಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ, ಸವಲತ್ತು ಪಡೆಯುವುದು, ಲಿಂಗಾಯತ ಕನ್ನಡ ಧರ್ಮ, ಲಿಂಗಾಯತ ಉಪಪಂಗಡ, ಉಪಜಾತಿಗಳ ನಡುವೆ ವೈವಾಹಿಕ ಸಂಬಂಧ ಬೆಳೆಸುವುದು, ಶರಣ ಸಂಸ್ಕೃತಿ ಪಾಲನೆ ಹೀಗೆ ಐದು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಇದೇ ವೇಳೆ ಸಿಎಂಗೆ ಶರಣರು ಹಣೆಗೆ ವಿಭೂತಿ ಹಚ್ಚಿ ಸನ್ಮಾನ ಮಾಡಿದರು. ಈ ವೇಳೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ತಾವು ಬಸವಣ್ಣನ ಅಭಿಮಾನಿ, ಬಸವ ಅನುಯಾಯಿ. ಬಸವಣ್ಣನ ಹಾದಿಯಲ್ಲೇ ಸರ್ಕಾರ ನಡೆಯುತ್ತಿದೆ, ಸಮಾನತೆ ತರಲು ಅನೇಕ ಭಾಗ್ಯಗಳನ್ನು ಸರ್ಕಾರ ಕೊಟ್ಟಿದೆ ಅಂದರಲ್ಲದೆ, ಜಾಸ್ತಿ ಮಾತನಾಡಿದರೆ ವಿವಾದ ಆಗುತ್ತದೆ. ನಮ್ಮ ಸಮಾಜ ಜಡತ್ವದಿಂದ, ಜಾತಿ ವ್ಯವಸ್ಥೆಗಳಿಂದ ಕೂಡಿದೆ ಅಂತನೇ ಬಸವಣ್ಣ ಹೊಸ ಧರ್ಮ ಸ್ಥಾಪಿಸಿದರು. ಮುಂದಿನ ವರ್ಷದೊಳಗೆ ಅನುಭವ ಮಂಟಪ ನಿರ್ಮಾಣ ಪೂರ್ತಿಗೊಳಿಸುವ ಹಾಗೂ ವಚನ ವಿವಿ ಸ್ಥಾಪಿಸುವ ಭರವಸೆ ನೀಡಿದರು.

2013ರಿಂದ 18ರ ನಡುವೆ ಸಿದ್ದರಾಮಯ್ಯ ಸಿಎಂ ಆಗಿದ್ದ ಅವಧಿಯಲ್ಲಿ ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟ ನಡೆದಿತ್ತು. ಆದರೆ, ಅದೇ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆಯಲ್ಲಿ ಮುಳುವಾಗಿತ್ತು. ಸಿದ್ದರಾಮಯ್ಯ ಸರ್ಕಾರ ಹಲವು ಭಾಗ್ಯ ಸರಣಿಯ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಅದು ಪ್ರಯೋಜನವಾಗದೇ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮುಗ್ಗರಿಸಿತ್ತು. ಇದಕ್ಕೆ ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟವೇ ಕಾರಣ ಎಂದು ಡಿ.ಕೆ.ಶಿವಕುಮಾರ್ ಸೇರಿದಂತೆ ಅನೇಕರು ಆಕ್ಷೇಪ ವ್ಯಕ್ತಪಡಿಸಿದರು.

ಸುಮಾರು 7 ವರ್ಷಗಳ ಕಾಲ ತಣ್ಣಗಿದ್ದ ಈ ವಿವಾದ ಈಗ ಮತ್ತೆ ಮುನ್ನೆಲೆಗೆ ಬಂದಿದೆ. ಅಧ್ಯಯನ ಸಮಿತಿಯ ಮುಖ್ಯಸ್ಥರಾಗಿದ್ದ ನ್ಯಾ. ನಾಗಮೋಹನ್ ದಾಸ್ ಅವರೇ ಈ ಬಗ್ಗೆ ಹೇಳಿಕೆ ನೀಡಿರುವುದು ಹೊಸ ಚರ್ಚೆಗಳನ್ನು ಹುಟ್ಟು ಹಾಕಿದೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಚಾ.ನಗರ ಲಿಂಗಾಯತರು ಗರಂ

ಬೆಂಗಳೂರು, ಅ.5– 'ಬಸವ ಸಂಸ್ಕೃತಿ ಅಭಿಯಾನ'ದ ಮೂಲಕ ಜಾತಿ ವಿಂಗಡಿಸುವ ಪ್ರಯತ್ನ ನಡೆಸಿದ್ದಾರೆ ಎಂದು ಸಮಾರಂಭದಲ್ಲಿ ಪಾಲ್ಗೊಂಡಿದ್ದ ಚಾಮರಾಜನಗರ ಜಿಲ್ಲೆಯ ಲಿಂಗಾಯತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿಜಿಟಲ್ ಮಾಧ್ಯಮದೊಂದಿಗೆ ಮಾತನಾಡಿರುವ ಹಲವರು, ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಯುತ್ತಿದ್ದು, ಕೆಲ ಮಠಾಧಿಪತಿಗಳು ಧರ್ಮದ ಕಾಲಂನಲ್ಲಿ 'ಹಿಂದು' ಎಂದು ಬರೆಸುವಂತೆ ಹೇಳಿದರೆ, ಕೆಲವರು ಇತರೆ ಕಾಲಂನಲ್ಲಿ 'ಲಿಂಗಾಯತ್' ಎಂದು ಬರೆಸುವಂತೆ ತಿಳಿಸಿದ್ದಾರೆ. ರಾಜಕೀಯ ಮುಖಂಡರ ಹೇಳಿಕೆಯಲ್ಲೂ ಇದೇ ರೀತಿಯ ಭಿನ್ನತೆ ಇದೆ. ಇದರಿಂದ ಗೊಂದಲಕ್ಕೀಡಾಗಿದ್ದೇವೆ. ಇಂದಿನ ಕಾರ್ಯಕ್ರಮದಲ್ಲಿ ಗೊಂದಲ ಪರಿಹಾರವಾಗಬಹುದು ಎಂಬ ಆಶಯದಿಂದ ಬಂದೆವು. ಆದರೆ, ಜಾತಿಯಲ್ಲಿ ಒಡಕು ಮೂಡಿಸಿ, ಸಮೀಕ್ಷೆ ಮೂಲಕ ಅದನ್ನು ಸಾಧಿಸಲು ಹೊರಟಿರುವ ಸಿದ್ದರಾಮಯ್ಯನವರನ್ನೇ ಸಮಾರಂಭಕ್ಕೆ ಕರೆದು, ಅವರ ಬಗ್ಗೆಯೇ ಹೊಗಳಿಕೆ ಮಾತುಗಳನ್ನಾಡುತ್ತಿದ್ದಾರೆ. ಇದು ಖಂಡಿತವಾಗಿ ಸಮುದಾಯವನ್ನು ಒಗ್ಗೂಡಿಸುವ ಕೆಲಸವಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವೀರಶೈವ ಹಾಗೂ ಲಿಂಗಾಯರು ಬೇರೆ ಅಲ್ಲ. ಎಲ್ಲರೂ ಒಟ್ಟಾಗಿ ಮುನ್ನಡೆಯಬೇಕೆಂಬ ಭಾವನೆ ಹೊಂದಿರುವ ಸಮುದಾಯದ ಜನರನ್ನು ಕೆಲ ಮಠಾಧೀಶರುಗಳೇ ಗೊಂದಲಕ್ಕೆ ತಳ್ಳುತ್ತಿದ್ದಾರೆ. ಲಿಂಗಾಯತರ ಸಮಾರಂಭಕ್ಕೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಸಮುದಾಯದ ಯುವ ಮುಖಂಡ ವಿಜಯೇಂದ್ರ ಅವರನ್ನೇಕೆ ಆಹ್ವಾನಿಸಿಲ್ಲ? ಎಂದು ಸಿಟ್ಟಾದರು.

ಸೇನೆಯಿಂದ ತವರಿಗೆ ಹಿಂತಿರುಗಿದ ನಿವೃತ್ತ ಯೋಧನಿಗೆ ಅದ್ಧೂರಿ ಸ್ವಾಗತ



ತವರಿಗೆ ಆಗಮಿಸಿದ ನಿವೃತ್ತ ಯೋಧನಿಗೆ ಅದ್ಧೂರಿ ಸ್ವಾಗತ.

ಮಡಿಕೇರಿ,ಅ.5– ಭಾರತೀಯ ಸೇನೆಯ ಮರಾಠ ಲೈಟ್ ಇನ್‌ಫೆಂಟ್ರಿ ವಿಭಾಗದಲ್ಲಿ ಯೋಧನಾಗಿ 17 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿ ತವರಿಗೆ ಮರಳಿದ ಗ್ರಾಮದ ಮಗನನ್ನು ಕುಶಾಲನಗರ ತಾಲೂಕು ಕೂಡಿಗೆ ಸಮೀಪದ ಚಿಕ್ಕತ್ತೂರು ಗ್ರಾಮಸ್ಥರು ಆತ್ಮೀಯವಾಗಿ ಬರ ಮಾಡಿಕೊಂಡರು.

ಕೂಡುಮಂಗಳೂರು ಗ್ರಾಪಂ ವ್ಯಾಪ್ತಿಯ ಚಿಕ್ಕತ್ತೂರು ಗ್ರಾಮದ ಕೆರೆಕೊಪ್ಪಲು ಚಂದ್ರ ಶೆಟ್ಟಿ ಅವರ ಪುತ್ರ ಕುಮಾರ್ ಶೆಟ್ಟಿ ಅವರನ್ನು ಗ್ರಾಮಸ್ಥರು ಹಾಗೂ ಸ್ನೇಹಿತರು ಆತ್ಮೀಯವಾಗಿ ಕೂಡಿಗೆಯಲ್ಲಿ ಬರಮಾಡಿಕೊಂಡರು. ಇದೇ ಸಂದರ್ಭ ಕೂಡಿಗೆ ಡೇರಿ ವೃತ್ತದಲ್ಲಿ ಪಟಾಕಿ ಸಿಡಿಸಿ ಜಯ ಘೋಷಗಳೊಂದಿಗೆ ಸಿಹಿ ಹಂಚಿ ನಿವೃತ್ತ ಯೋಧ ಕುಮಾರ್ ಶೆಟ್ಟಿ ಅವರಿಗೆ ಅದ್ಧೂರಿ ಸ್ವಾಗತ ಕೋರಲಾಯಿತು.

ಈ ಸಂದರ್ಭ ಗ್ರಾಮಸ್ಥರಾದ ಮಂಜು, ನಾರಾಯಣ, ಹರ್ಷ, ವಿಜಯ್, ಕಿರಣ, ಗಜೇಂದ್ರ ಸತೀಶ, ನಾಗೇಶ, ಪ್ರಶಾಂತ್, ಸೆಲ್ವ, ಅರುಣ್ ಮಾದಪ್ಪ ಅಭಿಷೇಕ್ ಇತರರಿದ್ದರು.

ಸಂಬಂಧಿಕರ ಅಂತ್ಯಕ್ರಿಯೆಗೆ ತೆರಳಿದ್ದ ಯುವಕ ಜಲ ಸಮಾದಿ

ಅಂತ್ಯಕ್ರಿಯೆ ಮುಗಿಸಿ, ಸ್ನಾನಕ್ಕೆಂದು ನೀರಿಗೆ ಇಳಿದಾಗ ದುರಂತ



ಜಲ ಸಮಾದಿಯಾದ ಯುವಕನ ಮೃತದೇಹಕ್ಕೆ ಹುಡುಕಾಟ

ಮಡಿಕೇರಿ,ಅ.5– ಸಂಬಂಧಿಕರ ಅಂತ್ಯಕ್ರಿಯೆಗೆ ತೆರಳಿ ಸ್ನಾನಕ್ಕೆಂದು ನಾಲೆಗೆ ಇಳಿದ ಯುವಕನೋರ್ವ ನೀರಿನ ರಭಸಕ್ಕೆ ಕೊಚ್ಚಿ ಹೋಗಿ ಸಾವನ್ನಪ್ಪಿರುವ ಘಟನೆ ಕುಶಾಲನಗರ ತಾಲೂಕಿನ ಹುದುಗೂರು ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನಡೆದಿದೆ.

ಕುಶಾಲನಗರ ತಾಲೂಕಿನ ಕೂಡಿಗೆ ಗ್ರಾಮದ ನಿವಾಸಿ ಸಂತೋಷ್(28) ಮೃತ ದುರ್ದೈವಿ. ಸಂತೋಷ್ ಕೂಡಿಗೆ ಡೈರಿಯಲ್ಲಿ ವಾಹನ ಚಾಲಕ ವೃತ್ತಿ ಮಾಡಿಕೊಂಡಿದ್ದು ಅಂಗಡಿ, ಮಳಿಗೆ ಹಾಗೂ ಹೊಟೇಲ್‌ಗಳಿಗೆ ಹಾಲು, ಮೊಸರು ಸರಬರಾಜು ಮಾಡುತ್ತಿದ್ದ ಎಂದು ತಿಳಿದು ಬಂದಿದೆ.

ಘಟನೆ ಹಿನ್ನೆಲೆ: ಹುದುಗೂರು ಗ್ರಾಮದಲ್ಲಿ ತಮ್ಮ ಸಂಬಂಧಿಕರೊಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ ಸಂತೋಷ್ ತೆರಳಿ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದಾನೆ. ಬಳಿಕ ಕಾರ್ಯ ಮುಗಿಸಿ ಇದೇ ಮಾರ್ಗವಾಗಿ ಮನೆಗೆ ಆಗಮಿಸುವ ಸಂದರ್ಭ ಹಾರಂಗಿ ನಾಲೆಯಲ್ಲೇ ಸ್ನಾನ ಮಾಡಿಕೊಂಡು ಹೋಗುವ ಎಂದು ಮೂವರು ಸ್ನೇಹಿತರೊಂದಿಗೆ ಹಾರಂಗಿ ಮುಖ್ಯ ನಾಲೆಯಲ್ಲಿ ಈಜಲು ತೆರಳಿದ್ದಾನೆ. ಆದರೆ ಹಾರಂಗಿ ನಾಲೆಯ ನೀರಿನ ರಭಸ ಹೆಚ್ಚಿದ್ದ ಹಿನ್ನೆಲೆಯಲ್ಲಿ ನಾಲೆಯ ನೀರಿನಲ್ಲೇ ಕೊಚ್ಚಿಕೊಂಡು ಹೋಗಿ ಮುಳುಗಿ ಮೃತಪಟ್ಟಿದ್ದಾನೆ. ಘಟನೆಗೆ ಸಂಬಂಧಿಸಿದಂತೆ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಹಾರಂಗಿ ಮುಖ್ಯ ನಾಲೆಯಲ್ಲಿ ಕೊಚ್ಚಿ ಹೋಗಿ ಮೃತಪಟ್ಟ ಸಂತೋಷ್ ಮೃತದೇಹಕ್ಕಾಗಿ ಶೋಧ ಕಾರ್ಯಾಚರಣೆ ನಡೆಸಿದರು.

ಹಾರಂಗಿ ಜಲಾಶಯದಿಂದ ಮುಖ್ಯ ನಾಲೆಗೆ ನೀರು ಹರಿಸುತ್ತಿರುವ ಕಾರಣ ಹಾರಂಗಿ ಅಣೆಕಟ್ಟು ಇಂಜಿನಿಯರ್‌ಗಳನ್ನು ಸಂಪರ್ಕಿಸಿದ ಪೊಲೀಸರು, ನಾಲೆಗೆ ನೀರಿನ ಸರಬರಾಜು ಮಾಡುವುದನ್ನು ಸ್ಥಗಿತಗೊಳಿಸಿ ಮೃತದೇಹದ ಶೋಧ ಕಾರ್ಯಕ್ಕೆ ಸಹಕಾರ ನೀಡುವಂತೆ ಮನವಿ ಮಾಡಿದರು. ಬಳಿಕ ಹಾರಂಗಿ ಜಲಾಶಯದ ಅಧಿಕಾರಿಗಳು ನೀರನ್ನು ಸ್ಥಗಿತಗೊಳಿಸಿ ಶೋಧ ಕಾರ್ಯಕ್ಕೆ ಸಹಕರಿಸಿದರು. ನಾಲೆಯಲ್ಲಿ ಹರಿಯುತ್ತಿದ್ದ ನೀರಿನ ಪ್ರಮಾಣ ಕ್ಷೀಣಿಸಿದ ಕೆಲವು ಗಂಟೆಗಳ ಬಳಿಕ ಘಟನಾ ಸ್ಥಳದಿಂದ 1 ಕಿ.ಮೀ ದೂರದಲ್ಲಿ ಸಂತೋಷ್ ಮೃತದೇಹ ಪತ್ತೆಯಾಗಿದೆ.

ಘಟನೆಗೆ ಸಂಬಂಧಿಸಿದಂತೆ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪ್ರಥಮ



ಮಡಿಕೇರಿ ದಸರಾ ಕ್ರೀಡಾಕೂಟದ ಮಹಿಳೆಯರ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದು ಬಹುಮಾನವನ್ನು ಸ್ವೀಕರಿಸಿತು. ಈ ಸಂದರ್ಭ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಡ್ಲೆರ ತುಳಸಿ ಮೋಹನ್, ಪದಾಧಿಕಾರಿಗಳು ಹಾಗೂ ಸದಸ್ಯರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ಅ.9 ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆ

ಮಡಿಕೇರಿ,ಅ.5– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಿರಿಯ ನಾಗರಿಕರ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಹಿರಿಯ ನಾಗರಿಕರು: ನಮ್ಮ ಆಶೋತ್ತರಗಳು. ನಮ್ಮ ಯೋಗಕ್ಷೇಮ ಮತ್ತು ನಮ್ಮ ಹಕ್ಕುಗಳನ್ನು ಸ್ಥಳೀಯ ಮತ್ತು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಬಲ್ಲ ಸಶಕ್ತರು' ಎಂಬ ಘೋಷವಾಕ್ಯದೊಂದಿಗೆ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯು ಅ.9 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಶಿಶು ಕಲ್ಯಾಣ ಸಂಸ್ಥೆಯಲ್ಲಿ (ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹತ್ತಿರ) ನಡೆಯಲಿದೆ.

ನಾಪೋಕ್ಲು ಬಿಲ್ಲವ ಸಮಾಜ ವತಿಯಿಂದ ಸಮಾಜದ ಗಣ್ಯರಿಗೆ ಸನ್ಮಾನ



ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ವಿಜೇತ ಮುಖ್ಯ ಶಿಕ್ಷಕಿ ವನಜ.ಎಂ ಹಾಗೂ ಎನ್‌ಸಿಸಿ ನಿವೃತ್ತ ಅಧಿಕಾರಿ ಡಾ. ಗಣೇಶ್ ಅವರನ್ನು ಸನ್ಮಾನಿಸಲಾಯಿತು.

ನಾಪೋಕ್ಲು: ಬಿಲ್ಲವ ಸಮಾಜ ನಾಪೋಕ್ಲು ವತಿಯಿಂದ ಶಿಕ್ಷಕಿ ವನಜ.ಎಂ ಹಾಗೂ ಎನ್‌ಸಿಸಿ ನಿವೃತ್ತ ಅಧಿಕಾರಿ ಡಾ. ಗಣೇಶ್ ಅವರನ್ನು ಸನ್ಮಾನಿಸಲಾಯಿತು.

ಇಲ್ಲಿಯ ಭಗವತಿ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಬಿಲ್ಲವ ಸಮಾಜದ ಅಧ್ಯಕ್ಷ ಪ್ರತೀಪ ಬಿ.ಎಂ. ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಶ್ರೀ ಬ್ರಹ್ಮರ್ಷಿ ನಾರಾಯಣ ಗುರು ಜಯಂತಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ವಿಜೇತ ಹಾಕತ್ತೂರು ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ವನಜ.ಎಂ ಹಾಗೂ ಎನ್‌ಸಿಸಿ ನಿವೃತ್ತ ಅಧಿಕಾರಿ ಡಾ. ಗಣೇಶ್ ಗೋಣಿಕೊಪ್ಪ ಅವರುಗಳನ್ನು ನಾಪೋಕ್ಲು ಬಿಲ್ಲವ ಸಮಾಜದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕೊಡಗು ಜಿಲ್ಲಾ ಬಿಲ್ಲವ ಸಮಾಜದ ಉಪ ಅಧ್ಯಕ್ಷ ವಿಠಲ ಪೂಜಾರಿ, ನಾಪೋಕ್ಲು ಬಿಲ್ಲವ ಸಮಾಜದ ಉಪಧ್ಯಕ್ಷ ವಸಂತ ಬಿ.ಆರ್, ಜಗ್ಗನಾಥ್ ಪಾಲೂರು ಹಾಗೂ ತಾಲೂಕು ಬಿಲ್ಲವ ಸಮಾಜದ ಮಾಜಿ ಅಧ್ಯಕ್ಷ ಎಲ್ಯಣ್ಣ ಪೂಜಾರಿ ಬೆಟ್ಟಗೇರಿ, ತಾಪಂ ಮಾಜಿ ಅಧ್ಯಕ್ಷ ರೀನಾ ಜಗನ್ನಾಥ್, ಬಿಲ್ಲವ ಸಮಾಜದ ಕಾರ್ಯದರ್ಶಿ ಲೋಹಿತ್ ಕೆ.ಎಸ್, ಖಜಾಂಚಿ ದೀಪಕ್ ಬಿ.ಡಿ, ಸಂಘಟನಾ ಕಾರ್ಯದರ್ಶಿ ಪ್ರಕಾಶ್, ನಿರ್ದೇಶಕರು, ಸದಸ್ಯರು ಉಪಸ್ಥಿತರಿದ್ದರು.

ವಿ.ಪೇಟೆಯಲ್ಲಿ ಖಾಸಗಿ ಬಸ್ ಕಾರ್ಮಿಕರಿಂದ ಅದ್ದೂರಿ ಆಯುಧ ಪೂಜೆ



ಆಯುಧ ಪೂಜೆ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಶಾಸಕ ಪೊನ್ನಣ್ಣ.

ವಿರಾಜಪೇಟೆ: ಬಸ್ ಕಾರ್ಮಿಕರ ಬದುಕು ಸಂಕಷ್ಟದ ಸ್ಥಿತಿಯನ್ನು ತಲುಪಿದ್ದರೂ ಸಮಾಜ ಮತ್ತು ಸಾರ್ವಜನಿಕ ವಲಯಕ್ಕೆ ಬೆನ್ನೆಲುಬಾಗಿ ಸೇವೆ ಒದಗಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದು ಬಸ್ ಕಾರ್ಮಿಕರ ಏಳಿಗೆಗೆ ಸರ್ಕಾರ ಬದ್ಧವಾಗಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಹೇಳಿದರು.

ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ ವತಿಯಿಂದ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ 18ನೇ ವರ್ಷದ ಆಯುಧ ಪೂಜಾ ಕಾರ್ಯಕ್ರಮದಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಹಲವು ಸಂಸ್ಕೃತಿ ವಿಭಿನ್ನತೆಯ ಹಿನ್ನೆಲೆಯಲ್ಲಿ ಆಯುಧ ಪೂಜೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲಾಗಿದೆ. ಬಸ್ ಕಾರ್ಮಿಕರ ಬದುಕು ಹಸನಾಗಲಿ ಎಂದು ಶುಭ ಹಾರೈಸಿದರು.

ಅತಿಥಿಗಳಾಗಿ ಆಗಮಿಸಿದ್ದ ಅರಮೇರಿ ಕಳಂಚೇರಿ ಮಠದ ಪೀಠಾಧಿಪತಿ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಶಾಫಿ ಜುಮ್ಮಾ ಮಸೀದಿ ಖತೀಬರಾದ ಮಹು ಹ್ಯಾರೀಶ್ ಬಾಖವಿ, ಸಂತ ಅನ್ನಮ್ಮ ಕಾಲೇಜು ಪ್ರಾಂಶುಪಾಲರಾದ ರೆ.ಫಾ, ಮದುಲೈ ಮತ್ತು, ಅವರುಗಳು ಆಶೀರ್ವಚನ ನೀಡಿದರು.

ಮೊದಲಿಗೆ ಬೆಳಿಗ್ಗೆ ಖಾಸಗಿ ಬಸ್ಸುಗಳಿಗೆ ಸಾಮೂಹಿಕ ಆಯೂಧ ಪೂಜೆ ನಡೆಯಿತು, ಬಳಿಕ ಸ್ಥಳಿಯ ವಿದ್ಯಾರ್ಥಿಗಳಿಂದ ಹಾಗೂ ಸಾರ್ವಜನಿಕರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಕೊಡಗು ಖಾಸಗಿ ಬಸ್ ಕಾರ್ಮಿಕ ಸಂಘದ ಗೌರವ ಅಧ್ಯಕ್ಷ ಅಲ್ಲಂಡ ಚೆಂಗಪ್ಪ ಸಭೆಯ ಅಧ್ಯಕ್ಷತೆ ವಹಿಸಿದ್ದರು, ನಂತರ ಕೊಡಗು ಜಿಲ್ಲೆಯ ನುರಿತ ಬೈಕ್ ಸವಾರರಿಂದ ರೋಮಾಂಚನಗೊಳಿಸುವ ಬೈಕ್ ಶೋ, ಸಾಹಸ ಪ್ರದರ್ಶನ ನಡೆಯಿತು.

ಸಮಾರೋಪ ಸಮಾರಂಭದಲ್ಲಿ ಅತಿಥಿಯಾಗಿ ಬಿಜೆಪಿ ಸಾಮಾಜಿಕ ಜಾಲತಾಣದ ತೇಲಪಂಡ ಶಿವಕುಮಾರ್ ಮಾತನಾಡಿ ಖಾಸಗಿ ಬಸ್ ಕಾರ್ಮಿಕರು ಸಂಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದು ಕಾರ್ಮಿಕರ ಸಮಸ್ಯೆ ಸಂಕಷ್ಟಗಳನ್ನು ಸರಕಾರ ಪರಿಹರಿಸುವಂತಾಗಬೇಕು ಎಂದರು.

ವೇದಿಕೆಯಲ್ಲಿ ಹಿರಿಯ ಬಸ್ ಕಾರ್ಮಿಕ ಇಬ್ರಾಹಿಂ, ಹಾಕಿ ವೀಕ್ಷಕ ವಿವರಣೆಕಾರ ಮಳೇಟಿರ ಶ್ರೀನಿವಾಸ್, ಪೌರ ಕಾರ್ಮಿಕ ಹೆಚ್.ಸುಂದರ, ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಪಡೆದ ಕೆ.ಜೆ.ಆಶಾ, ಅಲೀರ್ ಅಹಮದ್, ಹಾಕಿ ಆಟಗಾರ ಸುಹನ್ ಅವರುಗಳಿಗೆ ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ ಅಧ್ಯಕ್ಷ ಕುಂಬೇ ಯಂಡ ಸುರೇಶ್ ದೇವಯ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು, ಕೊಡಗು ಮಾರಾಟ ಮಹಾ ಮಂಡಳ ಅಧ್ಯಕ್ಷ ವಾಟೇರಿರ ಬೋಪಣ್ಣ ಬೆಂಗಳೂರಿನ ಅಲ್ವೀಸ್ ಡಿಸೋಜ, ಕಾಫಿ ಬೆಳೆಗಾರ ಕುಂಡ್ರಂಡ ಅನಿಲ್ ಮಾತನಾಡಿದರು, ವೇದಿಕೆಯಲ್ಲಿ ದೇಯಂಡ ಲೋಕೇಶ್ ಅಯ್ಯಪ್ಪ ವಿ.ಜೀವನ್, ಕೋಡಿರ ವಿವೇಕ್ ಮತ್ತತರರು ಉಪಸ್ಥಿತರಿದ್ದರು. ರಾತ್ರಿ ಕೇರಳದ ಕ್ಯಾಲಿಕಟ್‌ನ ಬಿಗ್ ಬ್ಯಾಂಡ್ ಅವರಿಂದ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಿತು.

ಕೆ.ಉಮೇಶಗೆ ಪಿಎಚ್.ಡಿ



ಮೈಸೂರು: ಡಾ.ಎಂ. ಮಾದೇಶ ಅವರ ಮಾರ್ಗದರ್ಶನದಲ್ಲಿ ಕೆ. ಉಮೇಶ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ರಮೇಶ್ ಅಪ್ಪಚ್ಚು ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬಲ್ಲಮಾವಟ್ಟಿ ಗ್ರಾಪಂ ನೆಲಜಿ ಗ್ರಾಮದ ನಿವಾಸಿ ಚಿಯಕ ಪೂವಂಡ ರಮೇಶ್ ಅಪ್ಪಚ್ಚು (66) ಅವರು ಭಾನುವಾರ ನಿಧನರಾದರು.

ಮೃತರ ಅಂತ್ಯಕ್ರಿಯೆಯು ಭಾನುವಾರ ನೆಲಜಿ ಗ್ರಾಮದ ಕುಟುಂಬಸ್ಥರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ ಕವಿತಾ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

ಮಾದಿಗ ಜನಸಂಖ್ಯೆ ಕಡಿಮೆಗೊಳಿಸುವ ಹುನ್ನಾರ

ಉಪ ಜಾತಿ ಕಾಲಂನಲ್ಲಿ ಮಾದಿಗ ಎಂದು ನಮೂದಿಸಲು ಮನವಿ



ಮಾದಿಗ ಸಮುದಾಯದ ಜಿಲ್ಲಾ ಮುಖಂಡರ ಸಭೆಯಲ್ಲಿ ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಶಿವಮೂರ್ತಿ ಮಾತನಾಡಿದರು.

ಚಾಮರಾಜನಗರ: ಜಾತಿಗಣತಿ ಸಮೀಕ್ಷೆಯಲ್ಲಿ ಅಧಿಕಾರಿಗಳು ಕೆಲವು ಕಡೆಗಳಲ್ಲಿ ಜಾತಿ ಕಾಲಂನಲ್ಲಿ ಆದಿಕರ್ನಾಟಕ ಎಂದು ನಮೂದಿಸುವ ಮೂಲಕ ಮಾದಿಗ ಜನಸಂಖ್ಯೆ ಕಡಿಮೆಗೊಳಿಸುವ ಹುನ್ನಾರ ನಡೆಸುತ್ತಿದ್ದಾರೆ ಎಂದು ಡಾ. ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ಶಿವಮೂರ್ತಿ ಆರೋಪಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಮಾದಿಗ ಸಮುದಾಯದ ಮುಖಂಡರ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಜಾತಿಗಣತಿ ಸಮೀಕ್ಷೆ ಆರಂಭವಾಗಿದ್ದು, ಹಿಂದೆಯೇ ಕೂಡ ನಾಗಮೋಹನ್ ಆಯೋಗ ಸಮೀಕ್ಷೆ ನಡೆಸಿ ಅದು ಕೂಡ ಪೂರ್ಣ ಆಗಿದೆ ಮತ್ತೊಂದು. ಜಾತಿಗಣತಿ ಸಮೀಕ್ಷೆ ನಡೆಯುತ್ತಿದ್ದು, ಕಳೆದ ಸಮೀಕ್ಷೆಯಲ್ಲಿ 38.869 ಜನರನ್ನು ಜಿಲ್ಲೆಯಲ್ಲಿ ತೋರಿಸಿದ್ದಾರೆ. ಇದು ಬಹಳ ಲೋಪ ಆಗಿದೆ ಒಂದೇ ಕಡೆ ನಾಲ್ಕು ಕುಟುಂಬಗಳಿದ್ದರೂ ಕೂಡ ಒಂದು ಸ್ಟಿಕ್ಕರ್ ಅಂಟಿಸಿ ಒಂದು ಚೀಟಿ ಇರುವವನ್ನು ಮಾತ್ರ ಸಮೀಕ್ಷೆ ಮಾಡಿ ಉಳಿದವರನ್ನು ಕೈ ಬಿಡುತ್ತಿದ್ದಾರೆ. ಸಣ್ಣ ಮಕ್ಕಳು ಇದ್ದಾರೆ. ಜನನ ಪ್ರಮಾಣದ ಪ್ರಕಾರ ಸಮೀಕ್ಷೆಗೆ ಸೇರಿಸಿಕೊಳ್ಳಬೇಕು. ಮಗುವಿಗೆ ಆಧಾರ್ ಕಾರ್ಡ್ ಇಲ್ಲ. ರೇಷನ್ ಕಾರ್ಡ್ ಇಲ್ಲ ಎಂದು ಹೇಳಿ ಜನತೆಯನ್ನು ದಿಕ್ಕುತಪ್ಪಿಸುತ್ತಿದ್ದಾರೆ ಇದು ಸಮುದಾಯ ಜನಸಂಖ್ಯೆ ಹಿನ್ನಡೆಗೆ ಕಾರಣವಾಗಿದೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಮಾದಿಗ ಸಮುದಾಯದ ಅಂಕಿಅಂಶಗಳು ಒಂದು ಲಕ್ಷ ಇರಬೇಕಿತ್ತು ಆದರೆ 40 ಸಾವಿರಕ್ಕೆ ನಿಲ್ಲಿಸಿದ್ದಾರೆ. ಇದು ಒಂದು ಹುನ್ನಾರ. ಬೂದುಬಾಳು ಗ್ರಾಮದಲ್ಲಿ 20 ಕುಟುಂಬವನ್ನು ಆದಿಕರ್ನಾಟಕ ಎಂದು ಉಪಜಾತಿ ಕಾಲಂನಲ್ಲಿ ಬರೆದಿದ್ದಾರೆ. ಇದು ಸರಿಯಲ್ಲ. ಸಮುದಾಯದವರು ಧರ್ಮ. ಕಾಲಂನಲ್ಲಿ ಹಿಂದೂ ಜಾತಿ ಕಾಲಂನಲ್ಲಿ ಪರಿಶಿಷ್ಟ ಜಾತಿ ಉಪಜಾತಿ ಕಾಲಂನಲ್ಲಿ ಮಾದಿಗ ಎಂದು ನಮೂದಿಸುವಂತೆ ಸಮುದಾಯದವರಲ್ಲಿ ಶಿವಮೂರ್ತಿ ಮನವಿ ಮಾಡಿದರು.

ಸಭೆಯಲ್ಲಿ ಹನೂರು ತಾಲೂಕು ಗ್ಯಾರಂಟಿ ಯೋಜನೆ ಪ್ರಾಧಿಕಾರ ಸಮಿತಿ ಅಧ್ಯಕ್ಷ ರಾಚಪ್ಪಪಾಳ್ಯ, ಬೂದೂಬಾಳು ಮಹದೇವು, ಗುಂಡ್ಲುಪೇಟೆ ತಾಲೂಕು ಬಾಬುಜಗಜೀವನರಾಂ ಸಂಘದ ಅಧ್ಯಕ್ಷ ನಿಟ್ರೆಮಹದೇವು, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಬಾಲರಾಜು, ನಿವೃತ್ತ ಮುಖ್ಯಶಿಕ್ಷಕ ಚಿಕ್ಕಮಾದಯ್ಯ ರೇವಣ್ಣ ಅರಕಲವಾಡಿ ಮಹದೇವಯ್ಯ, ಹನೂರು ಪಪಂ ಸದಸ್ಯ ಸುದೇಶ್, ಮೂಳ್ಳೂರು ಮಂಜು, ರವಿ, ಬಿಸಲವಾಡಿ ಸಿದ್ಧರಾಜು, ಕರಿಯ್ಯನಪುರ ರಾಚಯ್ಯ, ಲಿಂಗರಾಜು, ಮೂಡಹಳ್ಳಿ ಚನ್ನಬಸಪ್ಪ, ಪುಟ್ಟಲಿಂಗಯ್ಯ, ರಾಚಯ್ಯ ಇತರರು ಭಾಗವಹಿಸಿದ್ದರು.

ಹುಲಿ ಬರ್ಬರ ಹತ್ಯೆ : ನಾಲ್ವರ ಬಂಧನ

ಜಾನುವಾರುಗಳ ಮೇಲೆ ದಾಳಿ ಮಾಡುತ್ತಿದ್ದರಿಂದ ವಿಷವಿಕ್ಕಿ ಹುಲಿ ಹತ್ಯೆ ಮಾಡಿದ್ದ ದುರುಳರು



ಹನೂರು: ಮಲೆ ಮಹದೇಶ್ವರ ವನ್ಯಜೀವಿಧಾಮ ಪಚ್ಚೆದೊಡ್ಡಿ ಸಮೀಪ ಗಂಡು ಹುಲಿಯೊಂದನ್ನು ಬರ್ಬರವಾಗಿ ಹತ್ಯೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ಪಚ್ಚೆದೊಡ್ಡಿ ಗ್ರಾಮದ ಪಚ್ಚಮಲ್ಲ, ಗಣೇಶ್, ಗೋವಿಂದೇಗೌಡ, ಸಂಪ್ರ ಎಂಬುವವರನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದು, ಭಾನುವಾರ ಮಧ್ಯಾಹ್ನ ಆರೋಪಿಗಳನ್ನು ಕೊಳ್ಳೇಗಾಲ ಉಪ–ವಿಭಾಗ ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ಮಾಡಿಸಿದ್ದಾರೆ.

ಪ್ರತೀಕಾರದಿಂದ ಹತ್ಯೆ: ಜಾನುವಾರುಗಳ ಮೇಲೆ ಹುಲಿ ದಾಳಿ ಮಾಡುತ್ತಿದ್ದರಿಂದ ರೊಚ್ಚಿಗೆದ್ದ ದನಗಾಹಿಗಳು ಬೇಟೆಯಾಡಿದ್ದ ಹಸುವಿಗೆ ವಿಷ ಪ್ರಾಷನ ಮಾಡಿಸುವ ಮೂಲಕ ಮತ್ತು ಅದೇ ಹಸುವನ್ನು ತಿಂದು ಹುಲಿ ಸಾಯುವಂತೆ ಮಾಡಿದ್ದರು. ಬಳಿಕ ಅದರ ಕಳೇಬರವನ್ನು ಮೂರು ಭಾಗಗಳಾಗಿ ಕತ್ತರಿಸಿ ಬಿಸಾಡಿದ್ದರು ಎಂಬುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಅರಣ್ಯಾಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹಸುವಿನ ಕಳೇಬರಕ್ಕಾಗಿ ಹುಡುಕಾಟ: ಹುಲಿ ಬೇಟೆಯಾಡಿದ್ದ ಹಸುವಿನ ಕಳೇಬರಕ್ಕಾಗಿ ಅರಣ್ಯ ಇಲಾಖೆ ತೀವ್ರ ಶೋಧ ನಡೆಸುತ್ತಿದೆ. ಸುತ್ತಮುತ್ತಲ ಗ್ರಾಮಗಳ ದನಗಾಹಿಗಳ ವಿಚಾರಣೆ ಮಾಡಲಾಗುತ್ತಿದ್ದು, ಸದ್ಯ, ನಾಲ್ವರು ಆರೋಪಿಗಳಿಗೂ ಮೆಡಿಕಲ್ ಟೆಸ್ಟ್ ಮಾಡಿಸಿ ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಎನ್‌ಟಿಸಿಎ ನಿಯಮಾನುಸಾರ ಬಂಡೀಪುರದ ಪಶು ವೈದ್ಯ ಡಾ. ವಾಸಿಂ ಮಿರ್ಜಾ, ಹನೂರಿನ ಪಶು ವೈದ್ಯಾಧಿಕಾರಿ ಸಿದ್ದರಾಜು, ಎನ್ ಜಿಒ ಸದಸ್ಯರ ಸಮಕ್ಷಮ ಮರಣೋತ್ತರ ಪರೀಕ್ಷೆ ನಡೆಸಿ ಹುಲಿಯ ಅಂಗಾಂಗಗಳನ್ನು ವಿಧಿ–ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕ ಹುಲಿ ಹತ್ಯೆ ಸತ್ಯಾಂಶ ತಿಳಿಯಲಿದ್ದು, ಈ ಬಗ್ಗೆ ಅಗತ್ಯ ಕ್ರಮವಹಿಸಲಾಗುವುದು ಎಂದು ಮಲೆ ಮಹದೇಶ್ವರ ವನ್ಯಜೀವಿಧಾಮ ಡಿಸಿಎಫ್ ಭಾಸ್ಕರ್ ಮಾಹಿತಿ ನೀಡಿದ್ದರು.

ಕಾರು ಡಿಕ್ಕಿ, ಬೈಕ್ ಸವಾರನಿಗೆ ತೀವ್ರ ಗಾಯ

ಕೊಳ್ಳೇಗಾಲ, ಅ.5– ತಾಲೂಕಿನ ಧನಗೆರೆ–ಸತ್ತೇಗಾಲ ಗ್ರಾಮದ ಮಧ್ಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್‌ಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಾಯಗೊಂಡಿರುವ ಘಟನೆ ಜರುಗಿದೆ.


ಧನಗೆರೆ ಗ್ರಾಮದ ಮಹದೇವ(32) ಎಂಬಾತ ಗಾಯಗೊಂಡು ವ್ಯಕ್ತಿ. ಈತ ಸತ್ತೇಗಾಲ ಗ್ರಾಮದಿಂದ ತನ್ನ ಬೈಕ್ ನಲ್ಲಿ ಧನಗೆರೆ ಗ್ರಾಮಕ್ಕೆ ಬರುವಾಗ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ರಸ್ತೆಯ ಮೇಲೆ ಬಿದ್ದು ತಲೆ,. ಕೈಕಾಲು ಸೇರಿದಂತೆ ಹಲವೆಡೆ ಗಾಯಗೊಂಡಿದ್ದು ಕೊಳ್ಳೇಗಾಲ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದ್ದು ಈಸಂಬಂಧ ಗ್ರಾಮಾಂತರ ಪೊಲೀಸರು ಬೈಕ್ ಮತ್ತು ಕಾರನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪತ್ನಿ ಎದುರೇ ನದಿಗೆ ಹಾರಿದ್ದ ಪತಿ ಮಂಜುನಾಥ್ ಶವ ಪತ್ತೆ

ಕೊಳ್ಳೇಗಾಲ, ಅ.5– ಪತ್ನಿ ಎದುರೇ ಸೇತುವೆಯಿಂದ ಕಾವೇರಿ ನದಿಗೆ ಹಾರಿದ್ದ ವ್ಯಕ್ತಿಯ ಶವ ಭಾನುವಾರ ಪತ್ತೆಯಾಗಿದೆ. ತಲಕಾಡು ಪೊಲೀಸ್ ಠಾಣಾ ವ್ಯಾಪ್ತಿಗೆ ಬರುವ ಮೇದನಿ ಗ್ರಾಮದ ಕಾವೇರಿ ನದಿ ದಡದಲ್ಲಿ ಮಂಜುನಾಥ್‌ನ ಶವ ಪತ್ತೆಯಾಗಿದ್ದು, ತಲಕಾಡು ಪೊಲೀಸರು ಶವವನ್ನು ಮೇಲಕ್ಕೆತ್ತಿಸಿ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ವಾರಸುದಾರರಿಗೆ ಒಪ್ಪಿಸಿದ್ದಾರೆ.

ಕಳೆದ 2 ದಿನಗಳ ಹಿಂದೆ ಪತ್ನಿ ರಾಜೇಶ್ವರಿ ಜೊತೆ ಬೈಕ್‌ನಲ್ಲಿ ಬರುತ್ತಿದ್ದ ವೇಳೆ ಕ್ಷುಲ್ಲಕ ವಿಚಾರಕ್ಕೆ ಜಗಳ ತೆಗೆದು ನಾನು ಸತ್ತೇಹೋಗುವೆ ಎಂದು ದಾಸನಪುರ ಸಮೀಪದ ಕಾವೇರಿ ನದಿ ಸೇತುವೆ ಮೇಲೆ ಬೈಕ್ ನಿಲ್ಲಿಸಿ ನದಿಗೆ ಹಾರಿದ್ದು ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆ ಪಟ್ಟಣ ಪೊಲೀಸರು ಸಹಾ ಶವಕ್ಕಾಗಿ ಹುಡುಕಾಟ ನಡೆಸಿದ್ದು, ಭಾನುವಾರ ಮೇದನಿ ಸಮೀಪದ ನದಿಯಲ್ಲಿ ಶವ ಪತ್ತೆ ಹಿನ್ನೆಲೆ ಮುಂದಿನ ಕ್ರಮಕೈಗೊಂಡಿದ್ದಾರೆ.

ಹೊಲಯ ಸಮುದಾಯವನ್ನು ಎ1 ಕಾಲಂಗೆ ಸೇರಿಸುವಂತೆ ಒತ್ತಾಯಿಸಿ ಇಂದು ಪ್ರತಿಭಟನೆ



ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಸಂಚಾಲಕ ಶಿವಣ್ಣ ಮಾತನಾಡಿದರು.

ಚಾಮರಾಜನಗರ, ಅ.5– ಹೊಲಯ ಸಮುದಾಯವನ್ನು ಬಿ ಕಾಲಂದಿಂದ ಕೈ ಬಿಟ್ಟು ಎ1 ಕಾಲಂಗೆ ಸೇರಿಸುವಂತೆ ಒತ್ತಾಯಿಸಿ ಅ.6 ರಂದು ನಗರದಲ್ಲಿ ಸಮುದಾಯದ ಸಂಘಟನೆಗಳ ವತಿಯಿಂದ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಸಂಚಾಲಕ ಸಿ.ಎಂ.ಶಿವಣ್ಣ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತ್ಥಳಿ ಮುಂಭಾಗದಲ್ಲಿ ಸಾಂಕೇತಿಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನೆಗೆ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡಬೇಕು ಎಂದು ಮನವಿ ಮಾಡಿದರು.

ರಾಜ್ಯ ಸರ್ಕಾರ ಒಳಮೀಸಲಾತಿಯಲ್ಲಿ ಹೊಲಯ ಸಮುದಾಯಕ್ಕೆ ಶೇ.6ರಷ್ಟು ಮೀಸಲಾತಿ ನೀಡಿ, ಬಿ.ದರ್ಜೆಗೆ ಸೇರಿಸುವ ಮೂಲಕ ಸಮುದಾಯಕ್ಕೆ ಅನ್ಯಾಯ ಮಾಡಿದೆ. ಇದು ಸಮುದಾಯಕ್ಕೆ ಬರೆದ ಮರಣ ಶಾಸನವಾಗಿದೆ. ಸಮುದಾಯ ಇದರ ಬಗ್ಗೆ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಸಮುದಾಯ ಹಾಗೂ ಮಕ್ಕಳ ಭವಿಷ್ಯಕ್ಕೆ ತೊಂದರೆ ಆಗಲಿದೆ. ಸರ್ಕಾರ ಕೂಡಲೇ ಬಿ.ಕಾಲಂನಿಂದ ಹೊಲಯ ಸಮುದಾಯವನ್ನು ಕೈ ಬಿಟ್ಟು ಎ1 ಕಾಲಂಗೆ ಸೇರಿಸಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಸೋಮುಸುಂದರ್, ಶಿವಶಂಕರ್, ಮಹದೇವಯ್ಯ, ರವಿಕುಮಾರ್, ಆಟೋ ಉಮೇಶ್, ಮಂಜೇಶ್, ಸಿದ್ದಪ್ಪ ಮಹದೇವಸ್ವಾಮಿ ಇತರರು ಭಾಗವಹಿಸಿದ್ದರು.

ದೊಡ್ಡರಾಯಪೇಟೆಯಲ್ಲಿ ಮಾತೆ ಮಾರಿಯಮ್ಮ ಗವಿ ನಿರ್ಮಾಣಕ್ಕೆ ಶಾಸಕರಿಂದ ಗುದ್ದಲಿ ಪೂಜೆ



ದೊಡ್ಡರಾಯಪೇಟೆ ಗ್ರಾಮದ ಸಂತ ತೆರೇಸ ದೇವಾಲಯದ ಆವರಣದಲ್ಲಿ ಮಾತೆ ಮಾರಿಯಮ್ಮ ಗವಿ ನಿರ್ಮಾಣಕ್ಕೆ ಶಾಸಕ ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಚಾಮರಾಜನಗರ, ಅ.5– ತಾಲೂಕಿನ ದೊಡ್ಡರಾಯಪೇಟೆ ಗ್ರಾಮದ ಸಂತ ತೆರೇಸ ದೇವಾಲಯದ ಆವರಣದಲ್ಲಿ ಮಾತೆ ಮಾರಿಯಮ್ಮ ಗವಿ ನಿರ್ಮಾಣಕ್ಕೆ ಕ್ರೈಸ್ತ ಧರ್ಮ ಗುರುಗಳ ಸಮ್ಮುಖದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಇದೇ ವೇಳೆ ಅವರು ಮಾತನಾಡಿ, ಕ್ಷೇತ್ರದ ಮತದಾರರು ನನಗೆ ಮತಕೊಟ್ಟು ಆಶೀರ್ವಾದ ಮಾಡಿದ ಪರಿಣಾಮ ನಾಲ್ಕನೇ ಬಾರಿಗೂ ಗೆಲ್ಲುವಂತಾಯಿತು. ದೊಡ್ಡರಾಯಪೇಟೆ ಪ್ರಾಥಮಿಕ ಪತ್ತಿನ ಸಂಘದ ನಿರ್ದೇಶಕರಾಗಿರುವಾಗಲೇ ಎಂಸಿಡಿಸಿಸಿ ಚುನಾವಣೆಯಲ್ಲಿ ನಿರ್ದೇಶಕನಾಗಿ ಆಯ್ಕೆಯಾದೆ ಎಂದ ಅವರು, ಗ್ರಾಮದಲ್ಲಿನ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಗ್ರಾಮಸ್ಥರು ಸಹಕಾರ ನೀಡುತ್ತಿದ್ದು, ಯಾವುದೇ ಸಂದರ್ಭದಲ್ಲಿ ಅವರನ್ನು ಮರೆಯುವುದಿಲ್ಲ ಎಂದರು.

75 ಲಕ್ಷ ರೂ.ವೆಚ್ಚದಲ್ಲಿ ಗ್ರಾಮದಲ್ಲಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಮೊದಲಹಂತದಲ್ಲಿ 50 ಸಾವಿರ ರೂ.ಮಂಜೂರಾಗಿದೆ. ಲಿಂಗಾಯತರ ಬೀದಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಹಾಗೂ ಚರಂಡಿ ನಿರ್ಮಿಸಲಾಗುವುದು ಎಂದರು.

ಸಂತ ತೆರೇಸ ದೇವಾಲಯದ ಧರ್ಮ ಗುರು ಆಂತೋಣಿರಾಜ್ ಮಾತನಾಡಿ, ಶಾಸಕ ಪುಟ್ಟರಂಗಶೆಟ್ಟಿ ನಾವು ಸಲ್ಲಿಸುವ ಅನೇಕ ಬೇಡಿಕೆಗಳಿಗೆ ಸದಾ ಸ್ಪಂದಿಸುತ್ತ ಬಂದಿದ್ದಾರೆ ಎಂದರು.

ಇದೇ ವೇಳೆ ಶಾಸಕರು ಮಾತೆ ಮಾರಿಯಮ್ಮ ಗವಿನಿರ್ಮಾಣ ಸಂಬಂಧ ವೈಯಕ್ತಿಕ ಧನಸಹಾಯ ಮಾಡಿದರು.

ಧರ್ಮ ಗುರು ಆಂತೋಣಿರಾಜ್, ಗ್ರಾಮ ಪಂಚಾಯಿತಿ ಸದಸ್ಯ ಸಿದ್ದರಾಜು, ಮುಖಂಡರಾದ ಮಹದೇವಸ್ವಾಮಿ, ಜೋಷಪ್, ಅಲೆಕ್ಸಾಂಡರ್, ಪುಷ್ಪರಾಜ್ ರವಿಗೌಡ, ವಿನ್ಸೆಂಟ್, ಡಾ.ಅಂಬೇಡ್ಕರ್ ಸಂಘದ ಅಧ್ಯಕ್ಷ ಪ್ರದೀಪ್, ಪವನ್ ಮೂರ್ತಿ, ಗ್ರಾಮದ ಮುಖಂಡರು ಗ್ರಾಮಾಸ್ಥರು, ಹಾಜರಿದ್ದರು.

ಉಚ್ಚಾಟಿತ 10 ಮಂದಿ ಬಿಜೆಪಿ ಸದಸ್ಯರಿಗೆ ಒಳ್ಳೇದೆ ಆಗಿದೆ

ಕೊಳ್ಳೇಗಾಲ,ಅ.5– ಬಿಜೆಪಿ 10 ಮಂದಿ ನಗರಸಭಾ ಸದಸ್ಯರುಗಳನ್ನು ಉಚ್ಚಾಟಿಸಿ ಅವರು ವಿರುದ್ಧ ಕ್ರಮ ಕೈಗೊಂಡಿರುವುದರಿಂದ ಅವರೆಲ್ಲರಿಗೂ ಒಳ್ಳೇದೆ ಆಗಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು 10ಮಂದಿ ಸದಸ್ಯರು ಬಿಜೆಪಿಯ ನಡೆ ಖಂಡಿಸಿ ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು.

ಈ ಹಿನ್ನೆಲೆ ಪಕ್ಷ ಅವರಿಗೆ ಬಾಹ್ಯ ಬೆಂಬಲ ನೀಡಿತ್ತು. ಈಗ ಅವರನ್ನು ಉಚ್ಚಾಟಿಸಿರುವುದರಿಂದ ಅವರೆಲ್ಲರಿಗೂ ಒಳ್ಳೇದೆ ಆಗಿದೆ. ಈಸಂಬಂಧ ಕುಳಿತು ಚರ್ಚಿಸಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವ ಸಂಬಂಧ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು, ಕ್ಷೇತ್ರದ ಅಭಿವೃದ್ಧಿ ನನ್ನ ಧ್ಯೇಯವಾಗಿದ್ದು ನನ್ನ ಕೈಲಾದ ಮಟ್ಟಿಗೆ ಅಭಿವೃದ್ಧಿಗಾಗಿ ಪ್ರಮಾಣಿಕವಾಗಿ ಸ್ಪಂದಿಸುತ್ತಿರುವೆ ಎಂದರು.

ಆರ್ಚಿ ಡಿ'ಸಿಲ್ವ ನಿಧನ



ಮೈಸೂರು,ಅ.5– ಆರ್ಚಿ ಡಿ'ಸಿಲ್ವ(58) ಭಾನುವಾರ ಮೈಸೂರಿನಲ್ಲಿ ನಿಧನರಾದರು. ಅವರು ಕೆಲ ಕಾಲದಿಂದ ಅಸ್ವಸ್ಥರಾಗಿದ್ದರು. ಅವರಿಗೆ ಪತ್ನಿ ಮತ್ತು ಒಂದು ಹೆಣ್ಣು ಮತ್ತು ಒಬ್ಬ ಗಂಡು ಮಕ್ಕಳು ಇದ್ದಾರೆ. ಇವರು ಬಸವಾಪುರ ಮತ್ತು ಕೊಳ್ಳೆಗಾಲದಲ್ಲಿ ವ್ಯವಸಾಯ ಮಾಡುತ್ತಿದ್ದರು. ಇವರ ಅಂತ್ಯ ಸಂಸ್ಕಾರ ಮೈಸೂರಿನ ಬೆಳವಾಡಿ ಕ್ರಿಶ್ಚಿಯನ್ ಸಮಾಧಿ ಸ್ಥಳದಲ್ಲಿ ಮಂಗಳವಾರ ಸಂಜೆ 4 ಗಂಟೆಗೆ ನಡೆಯುತ್ತದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಜಿಎಸ್‌ಟಿ ಸುಧಾರಣೆಯಿಂದ ಎಲ್ಲಾ ವರ್ಗದವರಿಗೆ ಅನುಕೂಲ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ




ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಕಾಟ ಕುಸ್ತಿ ಪಂದ್ಯಾವಳಿಗೆ ಬಿ.ವೈ.ವಿಜಯೇಂದ್ರ ಚಾಲನೆ ನೀಡಿದರು.

ನಂಜನಗೂಡು, ಅ.5– ಪ್ರಧಾನಿ ಮೋದಿ ಅವರು ಜಿಎಸ್‌ಟಿ ಸುಧಾರಣೆ ಮಾಡಿದ್ದರಿಂದಾಗಿ ದೇಶದ ಬಡವರಿಗೆ, ಮಧ್ಯಮ ವರ್ಗದವರಿಗೆ, ರೈತರಿಗೆ ಅನುಕೂಲವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಕಾರ್ಯಕರ್ತರು ಮತ್ತು ನರೇಂದ್ರ ಮೋದಿ ಅಭಿಮಾನಿ ಬಳಗದಿಂದ ಆಯೋಜಿಸಿದ್ದ 45 ಜೊತೆ ಕಾಟ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ಮೋದಿ ಅವರು ಕಳೆದ 11 ವರ್ಷಗಳಿಂದ ಒಂದು ದಿನವೂ ವಿಶ್ರಾಂತಿ ಪಡೆಯದೆ ಭಾರತವನ್ನು ಸರ್ವಾಂಗೀಣವಾಗಿ ಅಭಿವೃದ್ಧಿಗೊಳಿಸಿ 2047ಕ್ಕೆ ವಿಕಸಿತ ಭಾರತವನ್ನಾಗಿ ರೂಪಿಸಿ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರ ಮತ್ತು ವಿಶ್ವಗುರುವನ್ನಾಗಿ ರೂಪಿಸಲು ಶ್ರಮಿಸುತ್ತಿದ್ದಾರೆ. ಇಂತಹ ದೂರದೃಷ್ಟಿಯುಳ್ಳ ಜನಸೇವಕರಾದ ನರೇಂದ್ರ ಮೋದಿ ಅವರು ದೇಶದ ಪ್ರಧಾನಿಯಾಗಿರುವುದು ನಮ್ಮೆಲ್ಲರ ಅದೃಷ್ಟ ಪ್ರಧಾನಿ ಮೋದಿ ಅವರು ನಾನು ಪ್ರಧಾನಿ ಅಲ್ಲ ದೇಶದ ಜನಸೇವಕ ಎಂದು ಹೇಳಿರುವುದು ಅವರ ದೂರದೃಷ್ಟಿತ್ವ ಚಿಂತನೆಗೆ ಸಾಕ್ಷಿಯಾಗಿದೆ ಎಂದರು.

ಪ್ರಧಾನಿ ಮೋದಿ ಅವರ ಹುಟ್ಟುಹಬ್ಬದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅಭಿಮಾನಿ ಬಳಗ ಮತ್ತು ಬಿಜೆಪಿ ಕಾರ್ಯಕರ್ತರು ಕಾಟ ಕುಸ್ತಿ ಪಂದ್ಯಾವಳಿ ಆಯೋಜಿಸಿರುವುದು ಸಂತಸ ತಂದಿದೆ. ದೇಶದಲ್ಲಿ ಕುಸ್ತಿ ಪಂದ್ಯಾವಳಿಗೆ ತನ್ನದೇ ಆದ ಇತಿಹಾಸವಿದ್ದು, ಜನಪ್ರಿಯ ಕ್ರೀಡೆ ಎನಿಸಿದೆ. ಇಂತಹ ಕುಸ್ತಿ ಕಲೆಯನ್ನು ಉಳಿಸಿ ಬೆಳೆಸಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಕುಸ್ತಿ ಪಂದ್ಯಾವಳಿ ಆಯೋಜಿಸಿ ಸ್ಥಳೀಯ ಕುಸ್ತಿಪಟುಗಳಿಗೆ ಅವಕಾಶ ಕಲ್ಪಿಸಿರುವುದು ಉತ್ತಮ ಬೆಳವಣಿಗೆ ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ನಂಜನಗೂಡು ಕುಸ್ತಿ ಕಲೆಗೆ ಬಹಳ ಹೆಸರುವಾಸಿಯಾಗಿದೆ. ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಮಹದೇವ ಪ್ರಸಾದ್ ಮತ್ತು ಸ್ನೇಹಿತರು ಕುಸ್ತಿ ಪಂದ್ಯಾವಳಿ ಆಯೋಜಿಸಿ ಕುಸ್ತಿಪಟುಗಳಿಗೆ ಅವಕಾಶ ಕಲ್ಪಿಸುವ ಮೂಲಕ ಕುಸ್ತಿ ಕಲೆಯನ್ನು ಉತ್ತೇಜಿಸಿದ್ದಾರೆ ಎಂದರಲ್ಲದೆ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಬಿ.ವೈ.ವಿಜಯೇಂದ್ರ ಅವರು ಪಕ್ಷ ಸಂಘಟಿಸುವ ಹೊಣೆ ಹೊತ್ತು ರಾಜ್ಯಾದ್ಯಂತ ಅತ್ಯಂತ ಯಶಸ್ವಿಯಾಗಿ ಪಕ್ಷ ಸಂಘಟನೆ ಮಾಡಿದ್ದಾರೆ. ಮುಂದಿನ ಬಾರಿಯೂ ಕೂಡ ಅವರು ರಾಜ್ಯಾಧ್ಯಕ್ಷರಾಗಿ ಮುಂದುವರೆಯಲಿ ಹಾಗೂ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿಯಾಗಿ ಜನಸೇವೆ ಮಾಡುವುದು ನಿಶ್ಚಿತವಾಗಿದೆ ಎಂದು ಭವಿಷ್ಯ ನುಡಿದರು.

ಈ ವೇಳೆ 45 ಜೊತೆ ಟಾಟಾ ಕುಸ್ತಿ ನಡೆಸಲಾಯಿತು. ಕುಸ್ತಿ ಪಟುಗಳು ಮಟ್ಟಿ ಮಣ್ಣಿನಲ್ಲಿ ಕಾದಾಟ ನಡೆಸಿ ಪ್ರೇಕ್ಷಕರ ಶಿಳ್ಳೆ, ಚಪ್ಪಾಳೆ, ಮೆಚ್ಚುಗೆಗೆ ಪಾತ್ರರಾದರು.

ಸಮಾರಂಭದಲ್ಲಿ ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಶಾಸಕ ಶ್ರೀವತ್ಸ ಮಾಜಿ ಶಾಸಕ ನಾಗೇಂದ್ರ ಮುಖಂಡರಾದ ರಘು ಕೌಟಿಲ್ಯ, ಸದಾನಂದ, ಎಲ್.ಆರ್.ಮಹಾದೇವಸ್ವಾಮಿ, ರಾಜೇಂದ್ರ ಚಿತ್ರನಟ ಹೇಮಂತ್ ಕುಮಾರ್, ಬಿಜೆಪಿ ತಾಲೂಕು ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಮಹದೇವ ಪ್ರಸಾದ್, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ವೀರಶೈವ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ, ಮುಖಂಡರಾದ ಬಾಲಚಂದ್ರ, ಹೆಮ್ಮರಗಾಲ ಸೋಮಣ್ಣ, ಶಿವಣ್ಣ, ವಳಗೆರೆ ಪುಟ್ಟಸ್ವಾಮಿ, ಮಹೇಶ್ ಬಾಬು, ಅನಂತ್, ಸಿದ್ದರಾಜು, ಅರುಣ ನಗರ ಸಭಾ ಸದಸ್ಯರಾದ ಮಹೇಶ್ ಅತ್ತಿಖಾನೆ ಸೇರಿದಂತೆ ಹಲವರಿದ್ದರು.

ಕಾಡಾನೆ ದಾಳಿಗೆ ಬಾಳೆ ಫಸಲು ನಾಶ



ಸರಗೂರು, ಅ.5– ಕಾಡಾನೆ ದಾಳಿಗೆ ಬಾಳೆ ಫಸಲು ನಾಶವಾಗಿರುವ ಘಟನೆ ಶನಿವಾರ ರಾತ್ರಿ ತಾಲೂಕಿನ ಮೊಳೆಯೂರು ಅರಣ್ಯ ಪ್ರದೇಶ ವ್ಯಾಪ್ತಿಯ ದೇವಲಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿಗಳಾದ ದೇವಿರಮ್ಮ ಅವರಿಗೆ ಸೇರಿದ 3 ಎಕರೆ ಹಾಗೂ ನಂಜುಂಡಯ್ಯ ಅವರ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಫಸಲನ್ನು ನಾಶಗೊಳಿಸಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ರೈತ ಪ್ರಭಾಕರ ಮಾತನಾಡಿ, ಕಾಡಂಚಿನ ಪ್ರದೇಶದಲ್ಲಿ ಮಾನವ ಹಾಗೂ ಕಾಡು ಪ್ರಾಣಿಗಳ ಸಂಘರ್ಷಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಶಾಶ್ವತ ಪರಿಹಾರ ಕಂಡುಕೊಂಡಿಲ್ಲ. ಇದರಿಂದಾಗಿ ಕಾಡು ಪ್ರಾಣಿಗಳು ರೈತರ ಜಮೀನಿನ ಮೇಲೆ ದಾಳಿ ನಡೆಸಿ ಲಕ್ಷಾಂತರ ರೂ. ಸಾಲ ಮಾಡಿ ಕಷ್ಟಪಟ್ಟು ಬೆಳೆದ ಬೆಳೆಗಳನ್ನು ನಾಶಗೊಳಿಸುತ್ತಿವೆ. ಈ ಸಂಬಂಧ ಮೊಳೆಯೂರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ದೂರು ನೀಡಿದರೆ, ಪ್ರತಿ ಬಾರಿ ಸಬೂಬು ಹೇಳುವ ಮೂಲಕ ಕಾಲಹರಣ ಮಾಡುತ್ತಿದ್ದಾರೆ. ಕಾಡಾನೆ ಹಾವಳಿ ಮಿತಿ ಮೀರಿದ್ದು ಇಂತಹ ಘಟನೆ ಮರುಕಳಿಸುತ್ತಿದ್ದರೂ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಮೇಲಧಿಕಾರಿಗಳು ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ದೇವಲಾಪುರ ಸುತ್ತಮುತ್ತಲ ಗ್ರಾಮಗಳಲ್ಲಿ ಇಲ್ಲಿವರೆಗೂ 20ಕ್ಕೂ ಹೆಚ್ಚು ಬಾರಿ ರೈತರ ಜಮೀನಿನ ಮೇಲೆ ಕಾಡಾನೆಗಳು ದಾಳಿ ನಡೆಸಿ ಬೆಳೆ ನಾಶಗೊಳಿಸಿವೆ. ಈ ವೇಳೆ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸುವ ಅಧಿಕಾರಿಗಳು ಸೂಕ್ತ ಪರಿಹಾರ ಕೊಡಿಸಲು ಮುಂದಾಗುತ್ತಿಲ್ಲ. ಹೀಗಾಗಿ ಇನ್ನಾದರೂ ಅರಣ್ಯ ಇಲಾಖೆ ಅಧಿಕಾರಿಗಳು ರೈತರಿಗೆ ಸೂಕ್ತ ಪರಿಹಾರ ಕೊಡಿಸಬೇಕು. ಇಲ್ಲದಿದ್ದರೇ ರೈತರ ವಿವಿಧ ಸಂಘಟನೆಗಳೊಂದಿಗೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹುರ ಪಿಎಸಿಎಸ್ ಬಿಜೆಪಿ ಬೆಂಬಲಿತರ ತೆಕ್ಕೆಗೆ



ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಮಲ್ಲುಂಡಿ, ಅ.5– ಇಲ್ಲಿಗೆ ಸಮೀಪದ ಹುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸುವ ಮೂಲಕ ಅಧಿಕಾರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ.

ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಒಟ್ಟು 12 ನಿರ್ದೇಶರ ಪೈಕಿ ಇಬ್ಬರು ಅವಿರೋಧವಾಗಿ ಆಯ್ಕೆಯಾದರು. ನಂತರ 10 ಸ್ಥಾನಗಳಿಗೆ ಒಟ್ಟು 19 ಮಂದಿ ಸ್ಪರ್ಧಿಸಿದ್ದರು.

ನಂತರ ನಡೆದ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದಿಂದ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಹುರಚಂದ್ರು, ಎಂ.ಜಿ.ಮಹದೇವ ಸ್ವಾಮಿ, ಮಾದಪ್ಪ, ಚಂದ್ರಮ್ಮ, ಎಂ.ವಿ.ಶಿವಕುಮಾರ್, ಎಂ.ಶಿವರಾಜು, ಎಂ.ಜಗ್ಗದೀಶ್, ಪಿಣ್ಣಪ್ಪ ಜಯಗಳಿಸಿದರೆ, ಉಳಿದ 4 ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾದ ಎಂ.ಪುಟ್ಟಸ್ವಾಮಿ, ರತ್ನಮ್ಮ, ಜವರನಾಯ್ಕ, ರವಿ ಮೂರ್ತಿ ಜಯ ಗಳಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು ಮಾತನಾಡಿ, ಹುರ ಜಿಪಂ ಕ್ಷೇತ್ರದಲ್ಲಿ ಕಾಂಗ್ರೆಸ್ ಧೂಳೀಪಟವಾಗಿದೆ. ಇಲ್ಲಿನ ಪಿಎಸಿಎಸ್‌ನಲ್ಲಿ ಬಿಜೆಪಿ ಬೆಂಬಲಿತರು 12 ಕ್ಷೇತ್ರಗಳ ಪೈಕಿ 8 ರಲ್ಲಿ ಗೆಲುವು ಸಾಧಿಸಿದ್ದು, ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ದಿಕ್ಸೂಚಿಯಾಗಿದೆ. ಬಿಜೆಪಿಯ ಕಾರ್ಯಕರ್ತರ ಪರಿಶ್ರಮದಿಂದ ಗೆಲುವು ಸಾಧಿಸಿದ್ದೇವೆ. ಮುಂದಿನ ದಿನಗಳಲ್ಲಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ. ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಜನ ಬೇಸತ್ತಿದ್ದು, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.

ಇದೇ ವೇಳೆ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು. ಈ ವೇಳೆ ಮುಖಂಡರಾದ ಎಂ.ವಿ.ಬಸವರಾಜಪ್ಪ, ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್, ಹಾಡ್ಯ ಶಂಕರ್, ರವಿ, ಗುರುಮಲ್ಲಪ್ಪ, ವೀರೇಶ್, ಸಣ್ಣಮಾದಪ್ಪ, ಶಿವಲಿಂಗಪ್ಪ, ಶಿವರಾಜಪ್ಪ ಇದ್ದರು.

ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್ ಅವರಿಗೆ ಬೀಳ್ಕೊಡುಗೆ



ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್ ದಂಪತಿಯನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಅ.5– ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳನ್ನು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುವಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್ ಯಶಸ್ವಿಯಾಗಿದ್ದರು ಎಂದು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ಸಂಗೊಳ್ಳಿ ರಾಯಣ್ಣ ಸಮುದಾಯ ಭವನದಲ್ಲಿ ತಾಲೂಕು ಸರ್ಕಾರಿ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್ ಅವರ ಬಿಳ್ಕೋಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ತಾಲೂಕಿನ ಎಲ್ಲಾ ಇಲಾಖೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಆರೋಗ್ಯ ಇಲಾಖೆ ಕಾರ್ಯಕ್ರಮಗಳನ್ನು ಜಾರಿಗೆ ತಂದು ಜನರಿಗೆ ತಲುಪುವ ರೀತಿ ನೋಡಿಕೊಳ್ಳುತ್ತಿದ್ದರು. ಇವರ ವರ್ಗಾವಣೆ ನನಗೆ ಬೇಸರ ತರಿಸಿದೆ ಎಂದರು.

ಯಾವುದೇ ಕಾರ್ಯಕ್ರಮಗಳು ಜನರಿಗೆ ತಲುಪಬೇಕಾದರೆ ಆ ಇಲಾಖೆ ಮುಖ್ಯಸ್ಥರು ಸಂಪೂರ್ಣ ಜವಾಬ್ದಾರಿ ಹೊರಬೇಕಾಗಿರುತ್ತದೆ. ಅಂತಹದರಲ್ಲಿ ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್ ಅವರು ಜಾತ್ಯಾತೀತ ಹಾಗೂ ಪಕ್ಷಾತೀತವಾಗಿ ಎಲ್ಲಾ ಮುಖಂಡರ ಜೊತೆ ಒಡನಾಟ ಇಟ್ಟುಕೊಂಡು ಆರೋಗ್ಯ ಇಲಾಖೆಯ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಯಾಗಿದ್ದಾರೆ ಎಂದರು.

ಆರೋಗ್ಯ ಇಲಾಖೆಯ ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ತಾಲೂಕಿನ ವೈದ್ಯರು, ಆರೋಗ್ಯ ಸಹಾಯಕಿರು, ಆಶಾ ಕಾರ್ಯಕರ್ತೆಯರ ಜೊತೆ ಪ್ರೀತಿ ವಿಶ್ವಾಸದಿಂದ ಮನೆ ಮನೆಗೆ ಯೋಜನೆಗಳು ತಲುಪುವಂತೆ ಮಾಡಿದ್ದಾರೆ. ಆದ್ದರಿಂದ ಡಾ.ಡಿ.ನಟರಾಜ್ ಅವರ ಕಾರ್ಯವೈಖರಿ ನನಗೆ ಮೆಚ್ಚುಗೆಯಾಗಿದೆ ಎಂದರಲ್ಲದೆ ಮುಂದಿನ ದಿನಗಳಲ್ಲಿ ಮೈಸೂರು ಜಿಲ್ಲೆಗೆ ಜಿಲ್ಲಾ ಮಟ್ಟದ ಅಧಿಕಾರಿಯಾಗಿ ಬಂದು ನಿಮ್ಮಗಳ ಸೇವೆಗೆ ಮುಂದಾಗಲಿ ಎಂದು ಶುಭ ಕೋರಿದರು.

ಇದೇ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜ್ ಪತ್ನಿ ಡಾ. ಪ್ರತಿಮಾ ದಂಪತಿಗಳನ್ನು ವಿವಿಧ ಇಲಾಖೆ ಅಧಿಕಾರಿ ವರ್ಗದವರು ಹಾಗೂ ಸಿಬ್ಬಂದಿ ಶಾಲು ಹೊದಿಸಿ ಹಾರಹಾಕಿ ಅಭಿನಂದಿಸಿ ಬೀಳ್ಕೊಟ್ಟರು.

ತಹಸೀಲ್ದಾರ್ ಜೆ.ಸುರೇಂದ್ರ ಮೂರ್ತಿ, ತಾಪಂ ಇಓಗಳಾದ ಕುಲದೀಪ್, ಎ.ರವಿ, ಬಿಇಓ ಆರ್.ಕೃಷ್ಣಪ್ಪ, ಸಮಾಜ ಕಲ್ಯಾಣಾಧಿಕಾರಿ ಶಂಕರ್ ಮೂರ್ತಿ, ತಾಲೂಕು ಆರೋಗ್ಯಾಧಿಕಾರಿ ಸಿ.ನಟರಾಜು, ತಾಲೂಕು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ನವೀನ್, ತಾಲೂಕು ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರಾದ ಕೆ.ವಿ.ರಮೇಶ್, ಉಮೇಶ್, ನಿರ್ದೇಶಕರಾದ ಶಶಿಕಾಂತ್, ತಾಪಂ ವ್ಯವಸ್ಥಾಪಕ ಸತೀಶ್, ಗಂಗಾಧರ್, ಜಯಲಕ್ಷ್ಮಿ, ಲೋಕೇಶ್, ಹಿರಿಯ ಔಷಧಿ ನಿಯಂತ್ರಣಾಧಿಕಾರಿ ಆನಂದ್, ಹಿರಿಯ ಆರೋಗ್ಯ ಸುರಕ್ಷಾ ಅಧಿಕಾರಿ ಪಾರ್ವತಿ, ಹಿರಿಯ ಆರೋಗ್ಯ ಶಿಕ್ಷಣಾಧಿಕಾರಿ ಸಿ.ಎಂ.ರೇಖಾ, ಬಿಪಿಎಂ ರೇಖಾ, ಶೋಭಾ ಸೇರಿದಂತೆ ಅನೇಕ ಸರಕಾರಿ ನೌಕರರು ಹಾಜರಿದ್ದರು.

ಶ್ರೀಅರವಿಂದ ನಾಯಕಿ ಅಮ್ಮನವರ ಪವಿತ್ರೋತ್ಸವ



ಶ್ರೀಅರವಿಂದ ನಾಯಕಿ ಅಮ್ಮನವರ ಪವಿತ್ರೋತ್ಸವ ವಿಜೃಂಭಣೆಯಿಂದ ಜರುಗಿತು.

ನಂಜನಗೂಡು, ಅ.5– ತಾಲೂಕಿನ ಕಳಲೆ ಗ್ರಾಮದ ಶ್ರೀಲಕ್ಷ್ಮಿಕಾಂತಸ್ವಾಮಿ ದೇವಾಲಯದಲ್ಲಿ ನವರಾತ್ರಿ ಮಹೋತ್ಸವದ ಅಂಗವಾಗಿ ಶನಿವಾರ ರಾತ್ರಿ ಶ್ರೀ ಅರವಿಂದ ನಾಯಕಿ ಅಮ್ಮನವರ ಪವಿತ್ರೋತ್ಸವ ವಿಜೃಂಭಣೆಯಿಂದ ಜರುಗಿತು.

ನವರಾತ್ರಿ ಅಂಗವಾಗಿ ಸೆ.29ರಂದು ಅರವಿಂದನಾಯಕಿ ಅಮ್ಮನವರ ರಥೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗಿತ್ತು. ಅಲ್ಲದೇ ಪ್ರತಿದಿನ ಅರವಿಂದ ನಾಯಕಿ ಅಮ್ಮನವರ ಉತ್ಸವ, ಲಕ್ಷ್ಮಿಕಾಂತಸ್ವಾಮಿ ಅವರ ಮಂಟಪೋತ್ಸವ, ವೇದ ಪಾರಾಯಣ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಗಿತ್ತು. ಅ.4ರ ಶನಿವಾರ ರಾತ್ರಿ ಅರವಿಂದ ನಾಯಕಿ ಅಮ್ಮನವರ ಪವಿತ್ರೋತ್ಸವ ಕಾರ್ಯಕ್ರಮದ ಅಂಗವಾಗಿ ಗ್ರಾಮದ ವಿವಿಧ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು.

ದೇವಾಲಯದ ಪಾರುಪತ್ತೇದಾರ ಜಯರಾಂ ಮಾತನಾಡಿ, ಕಳಲೆ ಗ್ರಾಮದ ಪುರಾಣ ಪ್ರಸಿದ್ಧ ಐತಿಹಾಸಿಕ ದೇವಾಲಯಗಳಲ್ಲಿ ಶ್ರೀಲಕ್ಷ್ಮಿಕಾಂತಸ್ವಾಮಿ ದೇವಾಲಯವೂ ಒಂದಾಗಿದ್ದು, ಪ್ರತಿ ವರ್ಷ ನವರಾತ್ರಿ ಅಂಗವಾಗಿ ಶ್ರೀಅರವಿಂದ ನಾಯಕಿ ಅಮ್ಮನವರಿಗೆ ರಥೋತ್ಸವ ಮತ್ತು ಪವಿತ್ರೋತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಸಲಾಗುತ್ತದೆ. ಅ.5ರಂದು ಪವಿತ್ರ ವಿಸರ್ಜನೆ ಮತ್ತು ಪೂರ್ಣಾಹುತಿ ಮೂಲಕ ನವರಾತ್ರಿ ವೈಭವಕ್ಕೆ ತೆರೆ ಬೀಳಲಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ಕಳಲೆ ಗ್ರಾಮದ ಗ್ರಾಮಸ್ಥರು ಹಾಗೂ ದೇವಾಲಯದ ಅರ್ಚಕರು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಜಿಲ್ಲಾ ಸಹಕಾರ ಒಕ್ಕೂಟದ ನಿರ್ದೇಶಕರಿಗೆ ಸನ್ಮಾನ



ಜಿಲ್ಲಾ ಸಹಕಾರ ಒಕ್ಕೂಟದ ನೂತನ ನಿರ್ದೇಶಕ ಕೆ.ಎಸ್.ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಹುಣಸೂರು, ಅ.5– ಜಿಲ್ಲಾ ಸಹಕಾರ ಒಕ್ಕೂಟದ ನೂತನ ನಿರ್ದೇಶಕ ರಾಜ್ಯ ಹಾಲು ಒಕ್ಕೂಟ ಮಹಾಮಂಡಲದ ನಿರ್ದೇಶಕ ಕೆ.ಎಸ್.ಕುಮಾರ್ ಅವರನ್ನು ತಾಲೂಕಿನ ಬಿಳಿಕೆರೆ ಗ್ರಾಮದ ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಟಿಎಪಿಸಿಎಂಎಸ್ ನಿರ್ದೇಶಕರಾದ ಕೆಂಪೇಗೌಡ, ನಾಗರಾಜು, ವಿಎಸ್‌ಎಸ್‌ಎನ್ ನಿರ್ದೇಶಕ ಗೋವಿಂದೇಗೌಡ, ಟೌನ್ ಬಳಕೆದಾರರ ಸಹಕಾರ ಸಂಘದ ನಿರ್ದೇಶಕ ಕೆ.ಕೃಷ್ಣ, ರಾಕೇಶ್ ಸೇರಿದಂತೆ ಇತರರಿದ್ದರು.

ಮಹಿಳೆ ನಾಪತ್ತೆ



ಹೆಚ್.ಡಿ.ಕೋಟೆ, ಅ.5– ಮಹಿಳೆ ನಾಪತ್ತೆ ಯಾಗಿರುವ ಸಂಬಂಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಾಲೂಕಿನ ಸೋಗಹಳ್ಳಿ ಗ್ರಾಮದ ವೆಂಕಟನಾಯಕ ಎಂಬುವರ ಪತ್ನಿ ಮಂಜುಳ(34) ನಾಪತ್ತೆಯಾದವರು. ಈಕೆ ಅ.1ರಂದು ಮನೆಯಿಂದ ಹೊರ ಹೋಗಿದ್ದಾರೆ ಎಂದು ಪತಿ ವೆಂಕುನಾಯಕ ಅಂತರಸಂತೆ ಠಾಣೆಗೆ ದೂರು ನೀಡಿದ್ದಾರೆ. ಈಕೆ ಸುಳಿವು ಸಿಕ್ಕಲ್ಲಿ ಅಂತರಸಂತೆ ಠಾಣೆ 08228–268333, ಕಂಟ್ರೋಲ್ ರೂಂ ದೂ:0821–2444800 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪಿಹೆಚ್.ಡಿ ಪದವಿ



ಮೈಸೂರು, ಅ.5– ಡಾ. ಪ್ರಕಾಶ್ ಬಿ. ನಾಯಕ್ ಅವರ ಮಾರ್ಗದರ್ಶನದಲ್ಲಿ ಎಂ. ದೀಪು ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಲ್ಯಾಕ್ ನೂತನ ಅಧ್ಯಕ್ಷರಿಗೆ ಸನ್ಮಾನ



ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್(ಮೈಲ್ಯಾಕ್) ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕಾಂಗ್ರೆಸ್ ಮುಖಂಡ ಹೆಚ್.ಡಿ.ಗಣೇಶ್ ಅವರನ್ನು ನಂಜನಗೂಡು ತಾಲೂಕಿನ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಬಿ.ಶಂಕರ್ ಸನ್ಮಾನಿಸಿದರು. ಈ ವೇಳೆ ರಾಜ್ಯ ಆಹಾರ ನಿಗಮದ ಮಾಜಿ ನಿರ್ದೇಶಕ ಕೆ.ತಮ್ಮಣ್ಣೇಗೌಡ, ಕೆಎಸ್‌ಆರ್‌ಟಿಸಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜವರೇಗೌಡ, ಎಂ.ಎನ್.ಡೆವಲಪರ್ಸ್ ಮಾಲೀಕ ಮಂಜು ಇದ್ದರು.

ಜಾತಿಗಣತಿ ವೇಳೆ ಧರ್ಮದ ಕಲಂನಲ್ಲಿ 'ಬೌದ್ಧ' ಎಂದೇ ಬರೆಸಿ

ದಸಂಸ ಜಿಲ್ಲಾ ಸಂಚಾಲಕ ರಾಜು ಮನವಿ



ಸುದ್ದಿಗೋಷ್ಠಿಯಲ್ಲಿ ದಸಂಸ ವತಿಯಿಂದ ಕರಪತ್ರ ಬಿಡುಗಡೆ ಮಾಡಲಾಯಿತು.


ತಿ.ನರಸೀಪುರ, ಅ.5– ಪ.ಜಾತಿಗೆ ಸೇರಿದ ಸಮಾಜದವರು ಜಾತಿಗಣತಿ ವೇಳೆ ಧರ್ಮದ ಕಲಂನಲ್ಲಿ 'ಬೌದ್ಧ' ಎಂದು ಬರೆ ಸಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮವಾದ ಸಂಘಟನೆ ಜಿಲ್ಲಾ ಸಂಘಟನಾ ಸಂಚಾಲಕ ಕೆಂಪಯ್ಯನಹುಂಡಿ ರಾಜು ಮನವಿ ಮಾಡಿದರು.

ಧರ್ಮದ ಕಲಂನಲ್ಲಿ ಪ.ಜಾತಿಯವರು ಬೌದ್ಧ ಧರ್ಮ ಎಂದು ಬರೆಸುವ ಸಂಬಂಧ ಜಾಗೃತಿ ಮೂಡಿಸಲು ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರು ಹಿಂದೂ ಧರ್ಮದಲ್ಲಿದ್ದ ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ ಹಾಗೂ ಚಾತುರ್ವರ್ಣ ಪದ್ಧತಿಗಳು ಜನರನ್ನು ಗುಲಾಮರಾಗಿ ಮಾಡಿದ್ದ ಕಾರಣ ಅವರು ಮೊದಲೇ ಹಿಂದೂವಾಗಿ ಹುಟ್ಟಿದ್ದೇನೆ. ಆದರೆ ಹಿಂದೂವಾಗಿ ಸಾಯಲಾರೆ ಎಂದು ಬೃಹತ್ ಸಮಾವೇಶದಲ್ಲಿ ಹೇಳಿದ್ದರು. ನಂತರ ಅವರು ಲಕ್ಷಾಂತರ ಜನರ ಜೊತೆಗೂಡಿ ತಮ್ಮ ಎರಡನೇ ಪತ್ನಿ ಸವಿತಾ ಅಂಬೇಡ್ಕರ್ ಅವರೊಂದಿಗೆ ಬೌದ್ಧ ಧರ್ಮದ ದೀಕ್ಷೆ ಪಡೆದುಕೊಂಡಿದ್ದರು. ಭಾರತ ದೇಶ ಪ್ರಬುದ್ಧ ರಾಷ್ಟ್ರವಾಗಿ ಹೊರ ಹೊಮ್ಮಬೇಕೆಂಬ ಉದ್ದೇಶದಿಂದ ಬಾಬಾ ಸಾಹೇಬರು ಈ ನಿರ್ಧಾರ ತೆಗೆದುಕೊಂಡಿದ್ದರು. ಹಾಗಾಗಿ ರಾಜ್ಯದಲ್ಲಿ ನಡೆಯುತ್ತಿರುವ ಜಾತಿ ಗಣತಿ ವೇಳೆ ಪ.ಜಾತಿಯವರು ಧರ್ಮದ ಕಲಂ 8ರ ಕ್ರಮ ಸಂಖ್ಯೆ 6ರಲ್ಲಿ 'ಬೌದ್ಧ ದಮ್ಮ' ಎಂದು ಕಲಂ ನಂ 9ರ ಜಾತಿ ಕಲಂನಲ್ಲಿ ಪರಿಶಿಷ್ಟ ಜಾತಿ ಎಂದು ಬರೆಸುವ ಮೂಲಕ ಸಂವಿಧಾನ ದತ್ತವಾದ ಮೀಸಲಾತಿ ಹಕ್ಕಿನೊಡನೆ ತಮ್ಮ ಮೂಲ ಧರ್ಮವಾದ ಬೌದ್ಧ ಧರ್ಮಕ್ಕೆ ಮರಳುವ ಮೂಲಕ ಡಾ.ಅಂಬೇಡ್ಕರ್ ಅವರು ನಮ್ಮ ಮೇಲೆ ಇಟ್ಟ ನಂಬಿಕೆಯನ್ನು ಉಳಿಸುವುದರ ಜೊತೆಗೆ ಅವರಿಗೆ ಗೌರವ ಸಲ್ಲಿಸುವ ಕೆಲಸ ಮಾಡಬೇಕಿದೆ ಎಂದರು.

ನಾವು ಬೌದ್ಧ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಸಂವಿಧಾನ ದತ್ತವಾದ ಧಾರ್ಮಿಕ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಪಡೆದುಕೊಂಡು ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿ ಹಕ್ಕನ್ನು ಈಗಿರುವಂತೆಯೇ ಉಳಿಸಿಕೊಳ್ಳಬಹುದಾಗಿದೆ. ನಮ್ಮ ಮುಂದಿನ ಪೀಳಿಗೆಯು ಜಾತಿ ಮತ್ತು ಅಸ್ಪೃಶ್ಯತೆಯ ಕರಾಳತೆಯಿಂದ ಮುಕ್ತವಾಗಿ ಗೌರವಯುತ ಬದುಕನ್ನು ಕಟ್ಟಿಕೊಳ್ಳಲು ಕಾರಣರಾಗುತ್ತೇವೆ. ಹಾಗಾಗಿ ಪ.ಜಾತಿಗೆ ಸೇರಿದ ಎಲ್ಲರೂ ಧರ್ಮದ ಕಲಂನಲ್ಲಿ ಬೌದ್ಧ ಎಂದು ಬರೆಸುವ ಮೂಲಕ ನಮ್ಮ ಮುಂದಿನ ಪೀಳಿಗೆಯ ಗೌರವದ ಬದುಕಿನ ಇತಿಹಾಸಕ್ಕೆ ನಾಂದಿ ಬರೆಯುವಂತೆ ಅವರು ಮನವಿ ಮಾಡಿದರು.

ಸಂಘಟನೆಯ ಜಿಲ್ಲಾ ಸದಸ್ಯ ಕನ್ನಾಯ ಕನಹಳ್ಳಿ ಮರಿಸ್ವಾಮಿ, ಕೊಳತ್ತೂರು ಪ್ರಭಾಕರ್, ತಾಲೂಕು ಸಂಚಾಲಕ ಮನೋಜ್ ಕುಮಾರ್, ಸಂಘಟನಾ ಸಂಚಾಲಕ ಗೋವಿಂದ ರಾಜು, ರಾಚಪ್ಪ, ಕುಮಾರ, ಕಾರ್ಯಕಾರಿ ಸಮಿತಿ ಸದಸ್ಯ ಪ್ರಸನ್ನ, ಟೌನ್ ಸಂಚಾಲಕ ಅರ್ಜುನ್ ಈ ವೇಳೆ ಹಾಜರಿದ್ದರು.

ಕಾಳಮ್ಮ ನಿಧನ



ಭೇರ್ಯ, ಅ.5– ಇಲ್ಲಿಗೆ ಸಮೀಪದ ಚಿಕ್ಕಭೇರ್ಯ ಗ್ರಾಮದ ನಿವಾಸಿ ಲೇ. ಚೌಡನಾಯಕ ಅವರ ಪತ್ನಿ ಕಾಳಮ್ಮ(80) ಭಾನುವಾರ ನಿಧನ ರಾದರು. ಮೃತರು ತಾಲೂಕು ಕಾಂಗ್ರೆಸ್ ಪ.ಪಂಗಡ ಅಧ್ಯಕ್ಷ ಮಹದೇವನಾಯಕ, ರಾಮನಾಯಕ ಸೇರಿದಂತೆ ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವನಂಜಪ್ಪ



ಹುಣಸೂರು, ಅ.5– ಪುರಸಭೆ ನಿವೃತ್ತ ನೌಕರ ಶಿವನಂಜಪ್ಪ (81) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ನಗರಸಭೆ ಸದಸ್ಯ ನಿರಂಜನ್ ಸೇರಿದಂತೆ ಇಬ್ಬರು ಪುತ್ರರು ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ದೇಶಾದ್ಯಂತ ಆತಂಕ ಸೃಷ್ಟಿಸಿದ ಕಿಲ್ಲರ್ ಕಾಫ್ ಸಿರಪ್

ರಾಜ್ಯದಲ್ಲಿ ಪ್ರತ್ಯೇಕ ಮಾರ್ಗಸೂಚಿ ಬಿಡುಗಡೆಗೆ ನಿರ್ಧಾರ

ಬೆಂಗಳೂರು, ಅ.5– ದೇಶದಲ್ಲಿ ಕಾಫ್ ಸಿರಪ್ ಭೀತಿ ಹೆಚ್ಚಾಗಿದೆ. ಮಧ್ಯಪ್ರದೇಶದ ಛಿಂದ್ವಾರಾದಲ್ಲಿ ಮಕ್ಕಳಿಗೆ ಮಾರಕ ಕೋಲ್ಡ್ರಿಫ್ ಸಿರಪ್ ಶಿಫಾರಸು ಮಾಡಿದ ವೈದ್ಯಪ್ರವೀಣ್‌ನನ್ನು ಬಂಧಿಸಲಾಗಿದೆ ಅಲ್ಲದೇ ಈ ಸಿರಪ್ ತಯಾರಿಸಿದ ತಮಿಳುನಾಡು ಮೂಲದ ಶ್ರೀಸನ್ ಫಾರ್ಮಾಸ್ಯುಟಿಕಲ್ಸ್, ಮಕ್ಕಳ ವೈದ್ಯ ಪ್ರವೀಣ್ ಸೋನಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಹೇಳಿದ್ದಾರೆ.

ಈ ಎಲ್ಲಾ ಬೆಳವಣಿಗೆ ಮಧ್ಯೆ ಮಧ್ಯ ಪ್ರದೇಶ, ತಮಿಳುನಾಡು, ಕೇರಳ, ರಾಜಸ್ಥಾನ, ತೆಲಂಗಾಣದಲ್ಲಿ ಕೋಲ್ಡ್ರಿಫ್ ಸಿರಪ್ ಮಾರಾಟ ನಿಷೇಧ ಮಾಡಲಾಗಿದೆ.

ಆರು ರಾಜ್ಯಗಳಲ್ಲಿ ಕೆಮ್ಮು ಸಿರಪ್ ಸೇರಿದಂತೆ 19 ಔಷಧಿ ಉತ್ಪನ್ನಗಳ ಉತ್ಪಾದನಾ ಘಟಕಗಳಲ್ಲಿ ಕೇಂದ್ರ ಔಷಧ ಗುಣಮಟ್ಟ ಸಂಸ್ಥೆ (ಸಿಡಿಎಸ್‌ಸಿಓ) ಸ್ಯಾಂಪಲ್ಸ್ ಸಂಗ್ರಹಿಸಿ ತಪಾಸಣೆ ನಡೆಸಿದೆ. ಈ ಮಧ್ಯೆ ಮಕ್ಕಳಿಗೆ ಅನವಶ್ಯಕವಾಗಿ ಕೋಲ್ಡ್ ಸಿರಪ್ ಕೊಡದಂತೆ ಮಕ್ಕಳ ತಜ್ಞರು ಸಲಹೆ ನೀಡಿದ್ದಾರೆ. ಇದರೊಂದಿಗೆ ಸೋಮವಾರ ರಾಜ್ಯ ಆರೋಗ್ಯ ಇಲಾಖೆಯಿಂದ ಪ್ರತ್ಯೇಕ ಮಾರ್ಗ ಸೂಚಿ ರಿಲೀಸ್ ಮಾಡಲಾಗುವುದು ಎಂದು ಪ್ರಧಾನ ಕಾರ್ಯದರ್ಶಿ ಹರ್ಷಾಗುಪ್ತ ಅವರು ಮಾಧ್ಯಮಕ್ಕೆ ತಿಳಿಸಿದ್ದಾರೆ. ನಾಳೆ ಹರ್ಷಾಗುಪ್ತ ನೇತೃತ್ವದಲ್ಲಿ ಮಹತ್ವದ ಸಭೆ ನಡೆಯಲಿದ್ದು, ಬಳಿಕ ಮಕ್ಕಳಿಗೆ ಸಿರಾಪ್ ವಿತರಣೆಗೆ ಸಂಬಂಧಿಸಿದಂತೆ ಗೈಡ್‌ಲೈನ್ಸ್ ರಿಲೀಸ್ ಮಾಡಲಾಗುತ್ತದೆ. ಪೋಷಕರಿಗಷ್ಟೇ ಅಲ್ಲದೇ ಖಾಸಗಿ ಆಸ್ಪತ್ರೆ ಮತ್ತು ವೈದ್ಯರಿಗೂ ಕೂಡ ಮಾರ್ಗಸೂಚಿ ಬಿಡುಗಡೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.



ಹರ್ಷಾಗುಪ್ತ

ಮಕ್ಕಳ ಸಿರಪ್ ವಿತರಣೆಗೆ ಮಾರ್ಗಸೂಚಿ: ಕಫಾ ಸಪರೇಟ್ ಮಾಡುವ ಸಿರಪ್ ಕೊಡಬಾರದು. ಕಫಾ ಹೊರಗಡೆ ತರುವುದಕ್ಕೆ ರೇರ್ ಕೇಸ್ ಇದ್ದರೆ ಜಾಗ್ರತೆಯಿಂದ ಸಿರಪ್ ಕೊಡಬಹುದು. ಓರಲ್ ಮೆಡಿಸನ್ ಮಕ್ಕಳಿಗೆ ಕೊಡಬಾರದು, ಡಾಕ್ಟರ್ ಕೂಡ ಪ್ರಿಸ್ಕ್ರಿಪ್ಷನ್ (ಚೀಟಿ) ಬರೆಯಬಾರದು. ಎರಡರಿಂದ ಎರಡೂವರೆ ವರ್ಷದ ಮಕ್ಕಳಿಗೆ ಸಿರಪ್ ಕೊಡಬಾರದು. ವೀಸಿಂಗ್ ಆದರೆ ಓರಲ್ ಮೆಡಿಸನ್ ಕೊಡಬಾರದು. ವೀಸಿಂಗ್‌ಗೆ ಮಾತ್ರೆ ಮತ್ತು ಇನ್ ಹೇಲರ್ ಕೊಡಬೇಕು, ಓರಲ್ ಕೊಡಬಾರದು. ವೀಸಿಂಗ್ ಅಂದ್ರೆ ಮೂಗು ಕಟ್ಟಿಕೊಂಡಂತಾದಾಗ ಉಸಿರಾಟದ ವೇಳೆ ಉಂಟಾಗುವ ಜೋರು ಶಬ್ದ.

ಖಾಸಗಿ ಆಸ್ಪತ್ರೆ, ಸಣ್ಣ ಖಾಸಗಿ ಕ್ಲಿನಿಕ್‌ಗಳಿಗೆ ಮಾರ್ಗಸೂಚಿ: ಡೆತ್ ಮುಂಚಿತವಾಗಿ ಕಾಂಪ್ಲಿಕೇಷನ್ ಆಗಿರುತ್ತೆ ಅಂತಹ ಕೇಸ್ ರಿಪೋರ್ಟ್ ಆಗಬೇಕು. ಖಾಸಗಿ ಕ್ಲಿನಿಕ್‌ಗಳು ಸಿರಪ್ ಬರೆಯಬಾರದು. ಖಾಸಗಿ ಆಸ್ಪತ್ರೆಯವರು ಗಂಭೀರ ಪ್ರಕರಣಗಳನ್ನ ವರದಿ ಮಾಡಬೇಕು. ಫಾರ್ಮಸಿ ಸಾಫ್ಟ್‌ವೇರ್ ಸೆಂಟ್ರಲ್ ಮಾಡಬೇಕು. ಮಾನಿಟರಿಂಗ್ ಸ್ಟ್ರಾಂಗ್ ಆಗಬೇಕು.

ಮಕ್ಕಳಿಗೆ ಸಿರಪ್ ಕೊಡುವ ಮುನ್ನ ಪೋಷಕರು ಏನು ಮಾಡಬೇಕು: ಸಿರಪ್ ಓಪನ್ ಮಾಡಿದ ತಕ್ಷಣ ಒಂದು ತಿಂಗಳ ಒಳಗಡೆ ಬಳಸಬೇಕು. ಡಾಕ್ಟರ್ ಬರೆದು ಕೊಟ್ಟಿದ್ದರೆ ಅಂತಹ ಡಾಕ್ಟರ್ ಅನ್ನು ಕಾಂಟ್ಯಾಕ್ಟ್ ಮಾಡದೇ ಅದೇ ಸಿರಪ್ ಮತ್ತೇ ಕೊಂಡುಕೊಂಡು ಬಳಸಬಾರದು. ಕಳೆದ ಬಾರಿ ಡಾಕ್ಟರ್ ಸೂಚಿಸಿದ್ದ ಸಿರಪ್ ಅನ್ನು ಪದೇ ಪದೇ ಬಳಸಬಾರದು.

ಜಾತಿ ಗಣತಿಗೆ ತೆರಳಿದ್ದ ಶಿಕ್ಷಕಿ ಮೇಲೆ ಬೀದಿ ನಾಯಿಗಳ ದಾಳಿ

ರಕ್ಷಣೆಗೆ ಬಂದವರಿಗೂ ಕಚ್ಚಿದ ಶ್ವಾನಗಳು

ಹಾಸನ, ಅ.5– ಕರ್ನಾಟಕ ಸರ್ಕಾರ ನಡೆಸುತ್ತಿರುವ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಜಾತಿ ಗಣತಿ ಮುಂದುವರೆದಿದ್ದು, ಅತ್ತ ಹಾಸನದಲ್ಲಿ ಸರ್ವೇ ಕಾರ್ಯಕ್ಕಾಗಿ ಬಂದಿದ್ದ ಶಿಕ್ಷಕಿ ಮೇಲೆ ಹತ್ತಕ್ಕೂ ಹೆಚ್ಚು ಬೀದಿ ನಾಯಿಗಳು ದಾಳಿ ಮಾಡಿ ಗಂಭೀರವಾಗಿ ಗಾಯಗೊಳಿಸಿರುವ ಘಟನೆ ವರದಿಯಾಗಿದೆ.

ಹಾಸನ ಜಿಲ್ಲೆಯ ಬೇಲೂರಿನ ನೆಹರುನಗರದಲ್ಲಿ ಈ ಘಟನೆ ನಡೆದಿದ್ದು, ಜಾತಿ ಗಣತಿಗೆ ತೆರಳಿದ್ದ ಶಿಕ್ಷಕಿ ಮೇಲೆ ಹತ್ತಕ್ಕೂ ಹೆಚ್ಚು ಬೀದಿ ನಾಯಿಗಳು ದಾಳಿ ಮಾಡಿವೆ. ಶಿಕ್ಷಕಿಯ ರಕ್ಷಣೆಗೆ ಬಂದ ಅವರ ಪತಿ ಸೇರಿ ಏಳು ಸಾರ್ವಜನಿಕರ ಮೇಲೂ ನಾಯಿಗಳು ಅಟ್ಯಾಕ್ ಮಾಡಿವೆ. ಪರಿಣಾಮ ಶಿಕ್ಷಕಿ ಅಲ್ಲದೆ ಇತರೆ 7 ಮಂದಿ ಕೂಡ ಗಾಯಗೊಂಡಿದ್ದಾರೆ.

ಬೇಲೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಚಿಕ್ಕಮ್ಮನವರ ಮುಖ, ಕೈ ಕಾಲಿಗೆ ಬೀದಿ ನಾಯಿಗಳು ಕಚ್ಚಿದ್ದು, ಶಿಕ್ಷಕಿ ರಕ್ಷಿಸಲು ಮುಂದಾಗಿದ್ದ ಅವರ ಪತಿ ಶಿವಕುಮಾರ್ ಸೇರಿದಂತೆ ಇನ್ನು 7 ಜನರ ಮೇಲೆ ನಾಯಿಗಳು ದಾಳಿ ಮಾಡಿವೆ. ಸದ್ಯ ತಾಲೂಕು



ಆಸ್ಪತ್ರೆಯಲ್ಲಿ ಶಿಕ್ಷಕಿ ಸೇರಿದಂತೆ ಎಲ್ಲಾ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಮೂಲಗಳ ಪ್ರಕಾರ ಶಿಕ್ಷಕಿ ಚಿಕ್ಕಮ್ಮಗೆ ನೀಡಿದ್ದ ಸಮೀಕ್ಷೆ ಅವಧಿ ಇಂದು ಕೊನೆಯಾಗಿತ್ತು. ಅವರಿಗೆ ನೀಡಿದ್ದ ಮನೆಗಳ ಪೈಕಿ 3 ಮನೆಗಳ ಸಮೀಕ್ಷೆ ಬಾಕಿ ಇತ್ತು. ನವೀನ್ ಎಂಬುವರ ಮನೆ ಸಮೀಕ್ಷೆಗೆ ಚಿಕ್ಕಮ್ಮ ತೆರಳಿದ್ದು, ಈ ವೇಳೆ 10ಕ್ಕೂ ಹೆಚ್ಚು ನಾಯಿಗಳು ದಾಳಿ ಮಾಡಿವೆ.

ಅಷ್ಟೇ ಅಲ್ಲದೆ ಅಲ್ಲೇ ಆಟವಾಡುತ್ತಿದ್ದ 5 ವರ್ಷದ ಬಾಲಕ ಕಿಶನ್‌ಗೂ ನಾಯಿಗಳು ಕಚ್ಚಿವೆ. ಸದ್ಯ ತಾಲೂಕು ಆಸ್ಪತ್ರೆಯಲ್ಲಿ ಎಲ್ಲಾ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗಿದೆ. ಇದೇ ವೇಳೆ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದ ಬೇಲೂರು ಶಾಸಕ ಹೆಚ್.ಕೆ.ಸುರೇಶ್, ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ.

ಸಿದ್ದರಾಮಯ್ಯ ಜಾತಿ ಅಂತಾ ಬರೆದುಕೊಳ್ಳಿ... ಉತ್ತರ ಕೊಡಲಾಗದ ಪ್ರಶ್ನೆಗಳನ್ನು ನೀವು ಕೇಳುತ್ತಿದ್ದೀರಿ...

ಗಣತಿದಾರರ ಮುಂದೆ ಕೇಂದ್ರ ಸಚಿವ ಸೋಮಣ್ಣ ಗರಂ



ಬೆಂಗಳೂರು. ಅ.5– ರಾಜ್ಯ ಸರ್ಕಾರ ಕೈಗೊಂಡಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಹಿನ್ನೆಲೆ ಮನೆಗೆ ಗಣತಿಗೆ ಬಂದವರಿಗೆ ಕೇಂದ್ರ ಸಚಿವ ವಿ.ಸೋಮಣ್ಣ ತರಾಟೆಗೆ ತೆಗೆದುಕೊಂಡ ಪ್ರಸಂಗ ಇಂದು ನಡೆಯಿತು.

ಮನೆಗೆ ಬಂದವರನ್ನು ನೋಡಿ ಇಷ್ಟು ಜನ ಯಾಕೆ ಬಂದಿದ್ದೀರಾ ಎಂದು ಕೇಳಿದ ಕೇಂದ್ರ ಸಚಿವರು, ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರವೇ ಜಾತಿಗಣತಿ ಮಾಡಿಸುತ್ತದೆ. ಹೀಗಿರುವಾಗ ಇಷ್ಟು ಪ್ರಶ್ನೆಗಳು ಬೇಕಾ, ಇದೆಲ್ಲಾ ನೀವು ಸರ್ಕಾರಕ್ಕೆ ತಿಳಿಸಬೇಕಿರುವಾಗ ಸರ್ಕಾರಿ ನೌಕರರು ಸರ್ಕಾರದ ಏಜೆಂಟ್ ಆಗಿ ಕೆಲಸ ಮಾಡಬಾರದು ಎಂದು ಹೇಳಿದ್ದಾರೆ.

ಇಂದು ಗಣತಿಯಲ್ಲಿ ಏನಾಯಿತು: ಬೆಂಗಳೂರಿನ ವಿಜಯನಗರದಲ್ಲಿರುವ ಕೇಂದ್ರ ಸಚಿವ ಸೋಮಣ್ಣ ಮನೆಗೆ ಇಂದು ಬೆಳಗ್ಗೆ 9 ಜನ ಸಿಬ್ಬಂದಿ ತೆರಳಿದ್ದರು. ಉಪ ಜಾತಿ ಯಾವುದು ಎಂದು ಗಣತಿದಾರರು ಕೇಳಿದಾಗ ಅದೆಲ್ಲಾ ಯಾಕೆ ಬೇಕು, ಸಿದ್ದರಾಮಯ್ಯ ಜಾತಿ ಅಂತಾ ಬರೆದುಕೊಳ್ಳಿ ಎಂದು ಸೋಮಣ್ಣ ತಿಳಿಸಿದ್ದಾರೆ. ಮದುವೆ ಆದಾಗ ನಿಮಗೆ ಎಷ್ಟು ವರ್ಷ ಎಂದು ಸಿಬ್ಬಂದಿ ಕೇಳಿದ್ದು, ಇದನ್ನ ನಮ್ಮ ಅಪ್ಪ–ಅಮ್ಮನ ಕೇಳಬೇಕು. 26 ಅಂತಾ ಬರೆದುಕೊಳ್ಳಿ ಎಂದಿದ್ದಾರೆ.

ಇದು ವೋಟ್‌ಗಾಗಿ ಸಿದ್ದರಾಮಯ್ಯ ಮಾಡಿಸುತ್ತಿರುವ ಸಮೀಕ್ಷೆ ಎಂದಿರುವ ಕೇಂದ್ರ ಸಚಿವರು, ಅನೇಕ ಪ್ರಶ್ನೆಗಳಿಗೆ ಸಿದ್ದರಾಮಯ್ಯ ಮತ್ತು ಡಿಕೆಶಿ ಹೆಸರನ್ನೇ ಹಾಕೊಳ್ಳಿ ಎಂದಿದ್ದಾರೆ. ಉತ್ತರ ಕೊಡಲಾಗದ ಪ್ರಶ್ನೆಗಳನ್ನೆಲ್ಲಾ ನೀವು ಕೇಳುತ್ತಿದ್ದೀರಿ. ಸಿದ್ದರಾಮಯ್ಯ, ಡಿಕೆಶಿಯವರನ್ನು ಯಾವ ಗ್ರೂಪ್ ಹಾಕ್ತೀರಿ ಎಂದು ಗಣತಿದಾರ ಸಿಬ್ಬಂದಿಗೆ ಸೋಮಣ್ಣ ಮರು ಪ್ರಶ್ನಿಸಿದ ಪ್ರಸಂಗವೂ ನಡೆದಿದೆ.

ಎಸ್.ಎಲ್.ಭೈರಪ್ಪ ಅವರಿಗೆ ನುಡಿನಮನ



ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರಿಗೆ ಮಹಾಸಂಗಮ ಸಮಾನ ಮನಸ್ಕ ಗೆಳೆಯರ ಬಳಗಗಳ ಒಕ್ಕೂಟದ ಪದಾಧಿಕಾರಿಗಳು ನುಡಿನಮನ ಸಲ್ಲಿಸಿದರು.

ಮೈಸೂರು, ಅ.5(ಎಸ್‌ಪಿಎನ್)– ಮಹಾಸಂಗಮ ಸಮಾನ ಮನಸ್ಕ ಗೆಳೆಯರ ಬಳಗಗಳ ಒಕ್ಕೂಟದ ಪದಾಧಿಕಾರಿಗಳು ಇತ್ತೀಚೆಗೆ ನಿಧನರಾದ ಹಿರಿಯ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರಿಗೆ ನುಡಿನಮನ ಸಲ್ಲಿಸಿದರು.

ಮೈಸೂರು ಅಗ್ರಹಾರ ಸಿದ್ದಾರ್ಥ ನಗರದ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಡಾ.ಬೆಳಲೆ ಕುಮಾರ್ ನುಡಿನಮನ ಸಲ್ಲಿಸುತ್ತಾ, ಕನ್ನಡ ಸಾಹಿತ್ಯದ ಅಪ್ರತಿಮ ಬರಹಗಾರರಾಗಿದ್ದ ಭೈರಪ್ಪನವರು ಕಾಲ್ಪನಿಕ ಕಥೆಗಳ ಆಧಾರದ ಮೇಲೆ ಕಾದಂಬರಿಗಳನ್ನು ಬರೆಯದೇ ಪ್ರಯೋಗಶೀಲತೆಗೆ ತಮ್ಮನ್ನು ಒಳಪಡಿಸಿಕೊಂಡು ವಸ್ತು ನಿಷ್ಠವಾಗಿ ಕಾದಂಬರಿ ರಚಿಸಿದರು ಎಂದರು.

ಕನ್ನಡ ಸಾಹಿತ್ಯ ಲೋಕಕ್ಕೆ 25 ಕಾದಂಬರಿಗಳನ್ನು ನೀಡಿದ ಕೀರ್ತಿ ಭೈರಪ್ಪನವರಿಗೆ ಸಲ್ಲುತ್ತದೆ. ಅದರಂತೆ ಎಲ್ಲಾ ಕಾದಂಬರಿಗಳು ಬೇರೆ ಬೇರೆ ಭಾಷೆಗಳಿಗೆ ತರ್ಜುಮೆಯಾಗಿದೆ. ಇದು ಸಮಸ್ತ ಕನ್ನಡಿಗರಿಗೆ ಗೌರವ ಸಲ್ಲುತ್ತದೆ. ಈ ಮೂಲಕ ಭೈರಪ್ಪನವರ ಪುಸ್ತಕಗಳಿಗೆ ದೇಶ್ಯಾದ್ಯಂತ ಕಸಾಪ ಓದುಗರು ಇದ್ದಾರೆ. ಭೈರಪ್ಪನವರು ತಮ್ಮ ನೇರ ದಿಟ್ಟ ನುಡಿಗಳಿಂದ ಓದುಗರಲ್ಲಿ ವಿಶೇಷ ಸ್ಥಾನ ಪಡೆದಿದ್ದಾರೆ ಎಂದರು.

ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಅಖಿಲಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ನಿರ್ದೇಶಕ ವಿ.ಪಿ.ವಿರೂಪಾಕ್ಷ, ಭಾಗ್ಯ, ಬೀರಿಹುಂಡಿ ಮಲ್ಲೇಶ್, ಪುಟ್ಟ ಸುಬ್ರಹ್ಮಣ್ಯ, ಮರಿಮಲ್ಲಪ್ಪ ಪ್ರೌಢಶಾಲೆಯ ಹಿರಿಯ ಶಿಕ್ಷಕ ಬಿ.ಆರ್.ಶಿವಕುಮಾರ್, ಶಿವಕುಮಾರ್ ಸಂಗಮ ಗೆಳೆಯರ ಬಳಗದ ಕಾರ್ಯದರ್ಶಿ ಚೇತನ್. ಸಿದ್ದರಾಮೇಶ್, ಶಿಕ್ಷಕ ಬಾಗಲಿ ಮಹೇಶ್, ಉಪನ್ಯಾಸಕ ಮಹದೇವಸ್ವಾಮಿ, ಕುಮಾರಿ ಚೂಡಾಮಣಿ, ಸಮೀನಾ ಮಂಜುನಾಥ್, ಪೂರ್ವ ವಲಯ ಬಸವ ಬಳಗದ ಕಾರ್ಯದರ್ಶಿ ಲೋಹಿತ್, ಉಪಾಧ್ಯಕ್ಷ ಮಹದೇವಸ್ವಾಮಿ, ವೀರಶೈವ ಲಿಂಗಾಯತ ಮುಖಂಡ ಕಾನ್ಯ ಶಿವಮೂರ್ತಿ ಸೇರಿದಂತೆ ಇತರರಿದ್ದರು.

ಶೇಷಾದ್ರಿಪುರಂ ಕಾಲೇಜಲ್ಲಿ ವಿದ್ಯಾರ್ಥಿಗಳಿಗೆ ಕಾರ್ಯಾಗಾರ



ಮೈಸೂರು, ಅ. 5– ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಾಗಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಬಿಯಾಂಡ್‌ಹುಡ್ ಫೌಂಡೇಶನ್ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಅಂಡ್ ಪ್ರೊಫೆಷನಲ್ ಸ್ಟಡೀಸ್ ಜಂಟಿಯಾಗಿ ಆಯೋಜಿಸಿದ್ದವು.

ಕಾರ್ಯಾಗಾರವು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯ್ದೆ, 2013 (ಪೋಶ್ ಕಾಯ್ದೆ) ಮತ್ತು ರ್‍ಯಾಗಿಂಗ್ ವಿರೋಧಿ ಕಾನೂನುಗಳ ಮೇಲೆ ಕೇಂದ್ರೀಕರಿಸಿದೆ. ಇದನ್ನು ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಸೌಮ್ಯ ಈರಪ್ಪ ಮತ್ತು ಬಿಯಾಂಡ್‌ಹುಡ್ ಫೌಂಡೇಶನ್‌ನ ಕಾರ್ಯದರ್ಶಿ ಕುಮಾರಿ. ಸುಷ್ಮಿತಾ ಸುಖಿಭವ ಪ್ರಾರಂಭಿಸಿದರು. ಶೇಷಾದ್ರಿಪುರಂ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಲೆಫ್ಟಿನೆಂಟ್ ಕುಮಾರ್ ಮತ್ತು ಶ್ರೀಮತಿ ಸೌಮ್ಯ ಎಂ ಕಾರ್ಯಾಗಾರವನ್ನು ಸಂಯೋಜಿಸಿದರು.

ಬೆಂಗಳೂರಿನಲ್ಲಿ ಅಭ್ಯಾಸ ಮಾಡುವ ವಕೀಲೆ ಮತ್ತು ಭಾರತೀಯ ಕೈಗಾರಿಕಾ ಮತ್ತು ವೃತ್ತಿಪರ ಅಧ್ಯಯನ ಸಂಸ್ಥೆಯ ಸಂಸ್ಥಾಪಕಿ ಕೃತಿಕಾ ಅಧಿವೇಶನವನ್ನು ನಿರ್ವಹಿಸಿದರು. ಅವರು ಪಿಒಎಸ್‌ಎಚ್ ಕಾಯ್ದೆಯ ಕುರಿತು ಅಧಿವೇಶನವನ್ನು ನಡೆಸಿದರು.

ವಕೀಲೆ ಕೃತಿಕಾ ಮತ್ತು ವಕೀಲೆ ಶಿಲ್ಪಾ ಎನ್ ಪೋಶ್ ಬಗೆಗೆ ಮಾಹಿತಿ ನೀಡಿದರು. ನಿವೃತ್ತ ಸಬ್–ಇನ್ಸ್‌ಪೆಕ್ಟರ್ ಡಿ.ಆರ್. ಜಯಸ್ವಾಮಿ ಆರಾಧ್ಯ ಮತ್ತು ಮೈಸೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಎಸ್.ಪ್ರಜ್ವಲ್ ಅಧಿವೇಶನಗಳ ನೇತೃತ್ವ ವಹಿಸಿದ್ದರು.

ರಾಜ್ಯಪಾಲರ ವಿರುದ್ಧ ಸುಪ್ರೀಂಕೋರ್ಟ್ ಮೆಟ್ಟಿಲೇರಿದ ತಮಿಳುನಾಡು ಸರ್ಕಾರ

ನವದೆಹಲಿ: ಕಲೈನಾರ್ ವಿಶ್ವವಿದ್ಯಾಲಯ ಮಸೂದೆ–2025ಕ್ಕೆ ಅನುಮೋದನೆ ನೀಡದೆ ವಿಳಂಬ ಮಾಡುತ್ತಿರುವ ರಾಜ್ಯಪಾಲರ ವಿರುದ್ಧ ತಮಿಳುನಾಡು ಸರ್ಕಾರ ಇದೀಗ ಸುಪ್ರೀಂ ಕೋರ್ಟಿನ ಮೆಟ್ಟಿಲೇರಿದೆ.

ಮಸೂದೆ ಕುರಿತ ನಿರ್ಧಾರವನ್ನು ಪ್ರಕಟಿಸಲು ನಿರ್ದೇಶನ ನೀಡುವಂತೆ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿದೆ. ಜೊತೆಗೆ ಸಚಿವ ಸಂಪುಟದ ಸಲಹೆಯ ಅನುಸಾರ ಮತ್ತು ಸಂವಿಧಾನದ 200ನೇ ವಿಧಿಯ ಪ್ರಕಾರ ನಡೆದುಕೊಳ್ಳುವಂತೆ ರಾಜ್ಯಪಾಲರಿಗೆ ಸೂಚಿಸುವಂತೆಯೂ ತಿಳಿಸಿದೆ. ರಾಜ್ಯ ವಿಧಾನಸಭೆಯು ಅಂಗೀಕರಿಸಿರುವ ಮಸೂದೆಯನ್ನು ರಾಷ್ಟ್ರಪತಿಗಳ ಪರಿಶೀಲನೆಗಾಗಿ ರಾಜ್ಯಪಾಲ ಆರ್.ಎನ್.ರವಿ ಅವರು ಕಾಯ್ದಿರಿಸಿದ್ದಾರೆ.



ಆರ್.ಎನ್.ರವಿ

ಲಿಂಗಾಯತ ಮಠಗಳು ಬಸವಣ್ಣನವರ ಮೂಲ ತತ್ವವನ್ನೇ ಮರೆತಿವೆ

ಮೈಸೂರು, ಅ.5(ಎಸ್‌ಪಿಎನ್)–ಬಸವಣ್ಣನವರ ಅರಿವಿನಲ್ಲಿ, ಹೆಸರಿನಲ್ಲಿ ಸ್ಥಾಪಿತವಾಗಿರುವ ಲಿಂಗಾಯತ ಮಠಗಳು ಅಣ್ಣ ಬಸವಣ್ಣನವರ ಮೂಲ ತತ್ವವನ್ನೇ ಮರೆತು ಜೀವಿಸುತ್ತಿವೆ ಎಂದು ಹಿರಿಯ ಬರಹಗಾರ ಡಾ.ಭೂಮಿಗೌಡ ವಿಷಾಧ ವ್ಯಕ್ತಪಡಿಸಿದರು.

ಮೈಸೂರು ರಾಮಕೃಷ್ಣನಗರ ನೃಪತುಂಗಾ ವಿದ್ಯಾ ಸಂಸ್ಥೆ ಆವರಣದಲ್ಲಿ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರಿನ ಜನಮನ ಸಾಂಸ್ಕೃತಿಕ ಸಂಘಟನೆ ವತಿಯಿಂದ ಏರ್ಪಡಿಸಿದ್ದ ನಾಟಕಕಾರ ಪಿ.ಲಂಕೇಶ್ ಕಥೆ ಆಧರಿತ ನಾಟಕ 'ಕಲ್ಲು ಕರಗುವ ಸಮಯ' ನಾಟಕ ಪ್ರದರ್ಶನಕ್ಕೆ ವಚನ ಸಾಲುಗಳು ಹಾಡಿನ ರೇಕಾರ್ಡ್ ಪ್ಲೇ ಮಾಡುವ ಮೂಲಕ ಉದ್ಘಾಟಿಸಿದರು.

'ಕಲ್ಲು ಕರಗುವ ಸಮಯ' ನಾಟಕದಲ್ಲಿ ಪಿ.ಲಂಕೇಶ್ ಅವರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಲಿಂಗಾಯತ ಮಠಗಳು ಬಸವಣ್ಣ ಅವರ ಹೆಸರಿನಲ್ಲಿ, ಅವರು ಹಾಕಿಕೊಂಡು ಮಾರ್ಗದರ್ಶನದಲ್ಲಿ ಸ್ಥಾಪಿತವಾಗಿದ್ದರೂ ಅವರ ಭಾವಚಿತ್ರಗಳನ್ನು ಹಾಕಿಕೊಂಡಿಲ್ಲ. ಅವರ ಹೆಸರಿನೂ ಹೇಳಲು ಇಷ್ಟಪಡುತ್ತಿಲ್ಲ. ಇದು ನಾವೆಲ್ಲಾ ನಾಚಿಕೆಪಡುವ ವಿಷಯ ಎಂದರು.

ಕಳೆದ 40 ವರ್ಷಗಳ ಹಿಂದೆ ನನ್ನ ಪ್ರಗತಿಪರ ಸ್ನೇಹಿತರು ನಾನು ಮತ್ತು ಡಾ.ಸಬಿಹಾ ಅವರಿಗೆ ಎರಡು ಹೂಗುಚ್ಛಗಳನ್ನು ಅದಲು–ಬದಲು ಮಾಡಿಸಿದ್ದರು. ಅದು ಬಿಟ್ಟರೆ, ಮತ್ತೆ ಈ ವೇದಿಕೆಯಲ್ಲಿ ಆ ಕೆಲಸವನ್ನು ಜನ್ನಿ ದಂಪತಿ ಪುನರಾವರ್ತಿ ಮಾಡಿರುವುದು ಸಂತೋಷವಾಗುತ್ತಿದೆ ಎಂದರಲ್ಲದೆ, ನಾವಷ್ಟೇ ಅಲ್ಲ, ಜನ್ನಿ ದಂಪತಿ ಕೂಡ ಮಾದರಿ ಬದುಕು ನಡೆಸುತ್ತಿದ್ದಾರೆ ಎಂದರು.



ಪಿ.ಲಂಕೇಶ್ ಕಥೆ ಆಧಾರಿತ 'ಕಲ್ಲು ಕರಗುವ ಸಮಯ' ನಾಟಕದ ಕರಪತ್ರ ಬಿಡುಗಡೆಗೊಳಿಸಲಾಯಿತು.

ನಾನು ಕುಗ್ರಾಮದಲ್ಲಿ ಬಡ ರೈತ ಕುಟುಂಬದಲ್ಲಿ ಹುಟ್ಟಿ, ಸ್ನಾತಕೋತ್ತರ ಶಿಕ್ಷಣ ಪಡೆದು, ಸಬಿಹಾ ಕೂಡ ಶಿಕ್ಷಣ ಹಿನ್ನಲೆಯಲ್ಲಿ ಕುಟುಂಬದಲ್ಲಿ ಹುಟ್ಟಿ, ಸ್ನಾತಕೋತಕರ ಪದವಿ ಪಡೆದರು. ಹೀಗೆ ಎರಡು ಮನಸ್ಸುಗಳು ಒಂದಾಗಿ 40 ವರ್ಷಗಳ ಹಿಂದೆ ಪ್ರಗತಿಪರ ಸ್ನೇಹಿತ ಸಮ್ಮುಖದಲ್ಲಿ ಹೂವುಗಳು ಅದಲು–ಬದಲಾದವು. ಇಂದು ಅದೇ ಪರಿಸರಕ್ಕೆ ಕರೆ ತಂದಿರುವುದು ಸಂತೋಷ ಎಂದರು.

ಬಳಿಕ ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಮಾತನಾಡಿ, 'ಕಲ್ಲು ಕರಗುವ ಸಮಯ' ಉತ್ತಮವಾಗಿದೆ. ಈ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಪಿ.ಲಂಕೇಶ್ ಪ್ರಮುಖರು. ಕಂಡಿದ್ದು, ಕಂಡಾಗೆ ಚಿತ್ರಿಸಿದ್ದಾರೆಂಬ ಗಾಢ ಅನುಭವ ಕೊಡುವಂತಿರುತ್ತದೆ ಎಂದರು.

ಹಿರಿಯ ರಂಗಕರ್ಮಿ ಎಚ್.ಜನಾರ್ಧನ್ ಮಾತನಾಡಿ, ನಿಜವಾದ ಜಾತ್ಯಾತೀತ ಮನಸ್ಸುಗಳು ಈ ವೇದಿಕೆಯಲ್ಲಿದ್ದಾರೆ. ಎಲ್ಲೂ ಹುಟ್ಟಿ ಎಲ್ಲೂ ಬೆಳೆದು, ಜೀವನದಲ್ಲಿ ಪರಸ್ಪರ ಒಂದಾಗಿ ಜೀವನ ಸಾಗುತ್ತಿದ್ದಾರೆ. ಅದು ಮಾದರಿ ಜೀವನ ನಡೆಸುತ್ತಿದ್ದಾರೆ ಎಂದು ಹೇಳಲಿಕ್ಕೆ ಮಾದರಿಯಂತೆ ಜೀವನ ನಡೆಸುತ್ತಿದ್ದಾರೆ. ಸಭೆಯಲ್ಲಿ ಬಂಡಾಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ಅಹಿಂದ ಜವರಪ್ಪ, ಹಿರಿಯ ರಂಗಕರ್ಮಿ ಕೆ.ಆರ್.ಸುಮತಿ ಉಪಸ್ಥಿತರಿದ್ದರು.

ವಿವಿಧ ಪ್ರಕರಣಗಳಲ್ಲಿ ಸೈಬರ್ ವಂಚಕರಿಂದ 32 ಲಕ್ಷ ರೂ ವಂಚನೆ

ಮೈಸೂರು, ಅ.5– ಸೈಬರ್ ವಂಚಕರು ವಿವಿಧ ರೀತಿಯಲ್ಲಿ ಸಾರ್ವಜನಿಕರ ಹಣ ಲೂಟಿ ಮಾಡುತ್ತಿದ್ದು, ಮೈಸೂರಿನಲ್ಲಿ ಇತ್ತೀಚೆಗೆ ಮೂರು ಭಿನ್ನ ಪ್ರಕರಣಗಳು ವರದಿಯಾಗಿವೆ. ನಿವೃತ್ತರೊಬ್ಬರನ್ನು ಇಡಿ ಅಧಿಕಾರಿಗಳ ಸೋಗಿನಲ್ಲಿ ವಂಚಿಸಿದರೆ, ಮತ್ತಿಬ್ಬರ ಖಾತೆಗೆ ಅವರಿಗೆ ಅರಿವಿಲ್ಲದಂತೆಯೇ ಕನ್ನಾ ಹಾಕಿದ್ದಾರೆ.

ಇಡಿ ಸೋಗಿನಲ್ಲಿ ವಂಚನೆ: ಖದೀಮರು ಇಡಿ ಅಧಿಕಾರಿಗಳ ಸೋಗಿನಲ್ಲೂ ದುಷ್ಕೃತ್ಯ ನಡೆಸುತ್ತಿದ್ದಾರೆ. ಹೆಬ್ಬಾಳು ಬಡಾವಣೆಯಲ್ಲಿ ವಾಸವಿರುವ 75 ವರ್ಷದ ನಿವೃತ್ತರೊಬ್ಬರಿಗೆ ಕರೆ ಮಾಡಿದ ಅನಾಮಿಕ, ತನ್ನನ್ನು ಇಡಿ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದಾನೆ. ನಿಮ್ಮ ಆಧಾರ್ ಸಂಖ್ಯೆ ಬಳಸಿಕೊಂಡು ಬ್ಯಾಂಕ್ ಖಾತೆ ತೆರೆಯಲಾಗಿದೆ. ಅದರ ಮೂಲಕ ಮನಿ ಲಾಂಡ್ರಿಂಗ್ ನಡೆಸಲಾಗುತ್ತಿದೆ. ಆದ್ದರಿಂದ ನಿಮ್ಮನ್ನು ಬಂಧಿಸುವುದಾಗಿ ಬೆದರಿಸಿ, ಪರಿಶೀಲನೆ ನೆಪದಲ್ಲಿ 21.50 ಲಕ್ಷ ರೂ. ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ನಂತರ ಆತ ಸಂಪರ್ಕಕ್ಕೆ ಸಿಗದಿದ್ದಾಗ ಮೋಸ ಹೋಗಿರುವುದು ತಿಳಿದು ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಡೌನ್ಲೋಡ್ ಎಡವಟ್ಟು: ಶ್ರೀರಾಂಪುರದ ಸರ್ಕಾರಿ ನೌಕರರೊಬ್ಬರು ತಮ್ಮ ಮೊಬೈಲ್‌ಗೆ ಬಂದ ಎಪಿಕೆ ಪಿಡಿಎಫ್ ಫೈಲ್ ಅನ್ನು ಡೌನ್ಲೋಡ್ ಮಾಡಿದ್ದಾರೆ. ತಕ್ಷಣಕ್ಕೆ ಯಾವುದೇ ಸಮಸ್ಯೆ ಆಗಿಲ್ಲ. ಆದರೆ ಅ.2ರಂದು ಅರಿವಿಲ್ಲದಂತೆ ಇವರ ಬ್ಯಾಂಕ್ ಖಾತೆಯಿಂದ ಒಮ್ಮೆ 5 ಲಕ್ಷ, ಮತ್ತೊಮ್ಮೆ 29 ಸಾವಿರ ರೂ. ಅಪರಿಚಿತ ಖಾತೆಗೆ ವರ್ಗಾವಣೆಯಾಗಿದೆ. ಈ ಬಗ್ಗೆ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಓಟಿಪಿಯೂ ಬಂದಿಲ್ಲ: ನಂದಿನಿ ಲೇಔಟ್‌ನಲ್ಲಿ ವಾಸವಿರುವ ಗುತ್ತಿಗೆದಾರರೊಬ್ಬರ ಕ್ರೆಡಿಟ್ ಕಾರ್ಡ್ ಮೂಲಕ ಸುಮಾರು ಒಂದೂವರೆ ಲಕ್ಷ ರೂ. ಲಪಟಾಯಿಸಲಾಗಿದೆ. ಅಮೇಜಾನ್ ಆಫ್‌ನಲ್ಲಿ ಇವರ ಕ್ರೆಡಿಟ್ ಕಾಡ್ ಮೂಲಕ ಮೂರು ಬಾರಿ ಒಟ್ಟು 1.42 ಲಕ್ಷ ರೂ. ಹಣ ಬಳಕೆಯಾಗಿದೆ. ಇವರಿಗೆ ಯಾವುದೇ ಓಟಿಪಿ ಬಂದಿಲ್ಲ. ಆದರೆ ಕ್ರೆಡಿಟ್ ಕಾರ್ಡ್‌ನಲ್ಲಿ ಹಣ ಬಳಸಿರುವ ಬಗ್ಗೆ ಮೆಸೇಜ್ ಬಂದಾಗ ವಂಚನೆಯಾಗಿರುವುದು ಗೊತ್ತಾಗಿದೆ. ಈ ಬಗ್ಗೆ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಲದ ಹಣ ಖೋತಾ: ಗೌರಿಶಂಕರ ನಗರದ ವ್ಯಕ್ತಿಯೊಬ್ಬರು ಭೋಗ್ಯಕ್ಕೆ ಮನೆ ಮಾಡಿಕೊಳ್ಳಲು ಸಾಲ ಮಾಡಿ ಬ್ಯಾಂಕ್‌ನಲ್ಲಿಟ್ಟಿದ್ದ ಹಣವನ್ನೂ ವಂಚಕರು ಲಪಟಾಯಿಸಿದ್ದಾರೆ. ವಾಕ್ ಮತ್ತು ಶ್ರವಣ ಸಮಸ್ಯೆಯಿರುವ ವ್ಯಕ್ತಿ, ಸಣ್ಣ ಕೈಗಾರಿಕೆಯಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಭೋಗ್ಯಕ್ಕೆ ಮನೆ ಮಾಡಿಕೊಳ್ಳುವ ಆಸೆಯಿಂದ ಸಾಲ ಮಾಡಿ ಸುಮಾರು 4 ಲಕ್ಷ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ನ ತಮ್ಮ ಖಾತೆಯಲ್ಲಿಟ್ಟಿದ್ದರು. ಅವರಿಗೆ ಅರಿವಿಲ್ಲದಂತೆ ನಿರಂತರವಾಗಿ ನಾಲ್ಕು ದಿನಗಳಲ್ಲಿ ಒಟ್ಟು 3.72 ಲಕ್ಷ ರೂ. ಹಣವನ್ನು ವರ್ಗಾವಣೆ ಮಾಡಿಕೊಂಡಿರುವುದಾಗಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಸಂಬಂಧ ಕೆ.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇಶ - ವಿದೇಶ

ಪುಷ್ಪಾ ಸಿನಿಮಾ ಸ್ಟೈಲ್‌ನಲ್ಲಿ ಅಕ್ರಮ ದನಗಳ ಕಳ್ಳಸಾಗಣೆ ಪತ್ತೆ

ಕೇಂದ್ರಪಾರ: ಕೇಂದ್ರಪಾರ ಜಿಲ್ಲೆಯ ಔಲ್ ಪೊಲೀಸರು ಮಧ್ಯರಾತ್ರಿ ನಡೆಸಿದ ಕಾರ್ಯಾಚರಣೆಯಲ್ಲಿ ಪ್ರಸಿದ್ಧ ಚಲನಚಿತ್ರ ಪುಷ್ಪಾ ಶೈಲಿಯಲ್ಲಿ ನಡೆಯುತ್ತಿದ್ದ ಅಕ್ರಮ ದನ ಕಳ್ಳಸಾಗಣೆ ಜಾಲವನ್ನು ಭೇದಿಸಿದ್ದಾರೆ. ವಿಶ್ವಾಸಾರ್ಹ ಮೂಲದಿಂದ ಬಂದ ಸುಳಿವು ಮೇರೆಗೆ, ಖರಸ್ರೋಟ ನದಿ ಸೇತುವೆ ಬಳಿ ಕಟಕ್–ಚಂದಬಾಲಿ ರಸ್ತೆಯಲ್ಲಿ ದನಗಳನ್ನು ತುಂಬಿದ್ದ ನಕಲಿ ಪೆಟ್ರೋಲ್ ಟ್ಯಾಂಕರ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ, ಶನಿವಾರ ಬೆಳಗಿನ ಜಾವ ರಾಜ್‌ಕಣಿಕಾ ಕಡೆಗೆ ಹೋಗುತ್ತಿದ್ದಾಗ ಟ್ಯಾಂಕರ್ ಅನ್ನು ತಡೆಹಿಡಿಯಲಾಯಿತು. ಪೊಲೀಸರನ್ನು ಕಂಡ ಚಾಲಕ ವಾಹನವನ್ನು ಅದೇ ಸ್ಥಳದಲ್ಲಿ ಬಿಟ್ಟು ಪರಾರಿಯಾಗಿದ್ದಾನೆ. ಪರಿಶೀಲಿಸಿದಾಗ, ನಕಲಿ ಪೆಟ್ರೋಲ್ ಟ್ಯಾಂಕರ್ ಒಳಗೆ 10 ಹಸುಗಳು ಅಡಗಿರುವುದು ಕಂಡುಬಂದಿದೆ ವಾಹನವನ್ನು ವಶಪಡಿಸಿಕೊಂಡು ಔಲ್ ಪೊಲೀಸ್ ಠಾಣೆಯಲ್ಲಿ ವಶಕ್ಕೆ ಪಡೆಯಲಾಗಿದೆ ಮತ್ತು ಸೆಕ್ಷನ್ 313/25ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.



ಗಾಜಾದ ಹೊಸ ನಕ್ಷೆ ತೋರಿಸಿದ ಟ್ರಂಪ್, ಒಪ್ಪಿಕೊಂಡ ಇಸ್ರೇಲ್


ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಾಜಾದಿಂದ ಇಸ್ರೇಲ್ ಸೇನೆಯ ಹಿಂತೆಗೆತಕ್ಕಾಗಿ ಹೊಸ ಯೋಜನೆಯನ್ನು ಬಿಡುಗಡೆ ಮಾಡಿದ್ದಾರೆ. ಇದನ್ನು ಇಸ್ರೇಲ್ ಸ್ವೀಕರಿಸಲು ಸಿದ್ಧವಾಗಿದೆ ಮತ್ತು ಈಗ ಹಮಾಸ್ ಒಪ್ಪಿಕೊಳ್ಳಬೇಕಾಗಿದೆ. ಟ್ರಂಪ್ ಶಾಂತಿ ಮಾತುಕತೆಗೆ ಸಂಬಂಧಿಸಿದ ನಕ್ಷೆಯನ್ನು ಡೊನಾಲ್ಡ್ ಟ್ರಂಪ್ ಹಂಚಿಕೊಂಡಿದ್ದಾರೆ.



ನಕ್ಷೆಯ ಪ್ರಕಾರ ಇಸ್ರೇಲಿ ಪಡೆಗಳು ದಕ್ಷಿಣ ಗಾಜಾದಲ್ಲಿ 6.5 ಕಿಲೋಮೀಟರ್, ಮಧ್ಯ ಗಾಜಾದಲ್ಲಿ 2 ಕಿಲೋ ಮೀಟರ್ ಮತ್ತು ಉತ್ತರ ಗಾಜಾದಲ್ಲಿ 3.5 ಕಿಲೋ ಮೀಟರ್ ನಿಯೋಜಿಸಲಿವೆ. ಇದು ಹಮಾಸ್ ಈ ಹಿಂದೆ ತಿರಸ್ಕರಿಸಿದ್ದ ಹಿಂದಿನ ನಿಯಮಗಳಿಗಿಂತ ಆಳವಾದ ಹಿಂತೆಗೆದುಕೊಳ್ಳುವಿಕೆಯನ್ನು ಪ್ರತಿನಿಧಿಸುತ್ತದೆ. ಮಾತುಕತೆಗಳ ನಂತರ ಇಸ್ರೇಲ್ ವಾಪಸಾತಿಗೆ ಆರಂಭಿಕ ಮಾರ್ಗಕ್ಕೆ ಒಪ್ಪಿಕೊಂಡಿದೆ, ಅದನ್ನು ನಾವು ಹಮಾಸ್‌ನೊಂದಿಗೆ ತೋರಿಸಿದ್ದೇವೆ ಮತ್ತು ಹಂಚಿಕೊಂಡಿದ್ದೇವೆ ಎಂದು ಟ್ರಂಪ್ ಟ್ರುತ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

ವಿಷಕಾರಿ ಕೆಮ್ಮಿನ ಸಿರಪ್ ಕೊಟ್ಟು 14 ಮಕ್ಕಳ ಸಾವಿಗೆ ಕಾರಣವಾದ ವೈದ್ಯ ಬಂಧನ

ಮಧ್ಯಪ್ರದೇಶ: ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಕೆಮ್ಮಿನ ಸಿರಪ್ ಸೇವಿಸಿ ಸುಮಾರು 14 ಜನ ಮಕ್ಕಳು ಸಾನಪ್ಪಿದ್ದಾರೆ, ಇನ್ನೂ ಅನೇಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯ ಡಾ.ಪ್ರವೀಣ್ ಸೋನಿ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.



ಮಧ್ಯಪ್ರದೇಶದ ಛಿಂದ್ವಾರಾ ಜಿಲ್ಲೆಯಲ್ಲಿ ವಿಷಕಾರಿ ಕೆಮ್ಮಿನ ಸಿರಪ್‌ನಿಂದಾಗಿ 11 ಮಕ್ಕಳು ಮತ್ತು ರಾಜಸ್ಥಾನ ಸೇರಿ ಒಟ್ಟು ಸುಮಾರು 14 ಮಕ್ಕಳು ಸಾವನಪ್ಪಿದ್ದು, ಈ ದುರಂತಕ್ಕೆ ಸಂಬಂಧಿಸಿದಂತೆ ಮಕ್ಕಳ ತಜ್ಞ ಡಾ. ಪ್ರವೀಣ್ ಸೋನಿ ಎಂಬಾತನನ್ನು ಪೊಲೀಸರು ಬಂಧಿಸಿ ದ್ದಾರೆ. ಶನಿವಾರ ತಡರಾತ್ರಿ ಎಸ್‌ಪಿ ನೇತೃತ್ವದ ವಿಶೇಷ ತಂಡವು ದಾಳಿ ನಡೆಸಿದೆ. ಪರಾಸಿಯಾ ಸಿವಿಲ್ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಸೋನಿಯನ್ನು ರಾಜ್ ಪಾಲ್ ಚೌಕ್‌ನ ಕೊತ್ವಾಲಿ ಪೊಲೀಸ್ ಠಾಣೆ ಪ್ರದೇಶದಿಂದ ಬಂಧಿಸಲಾಗಿದೆ. ಔಷಧ ಕಂಪನಿ ಮತ್ತು ಡಾ.ಪ್ರವೀಣ್ ಸೋನಿ ವಿರುದ್ಧ ದಾಖಲಾದ ಎರಡು ಪ್ರತ್ಯೇಕ ಪ್ರಕರಣ ಗಳಿಗೆ ಸಂಬಂಧಿಸಿದಂತೆ ಈ ಕ್ರಮ ಕೈಗೊಳ್ಳಲಾಗಿದೆ.

ಉಕ್ರೇನ್ ರೈಲು ನಿಲ್ದಾಣದಲ್ಲಿ ರಷ್ಯಾ ಡ್ರೋನ್ ದಾಳಿ; ಓರ್ವ ಸಾವು, 30 ಮಂದಿಗೆ ಗಾಯ

ಕೈವ್: ಉಕ್ರೇನ್‌ನ ಸುಮಿ ಪ್ರಾಂತ್ಯದಲ್ಲಿರುವ ರೈಲ್ವೆ ನಿಲ್ದಾಣದಲ್ಲಿ ರೈಲನ್ನು ಗುರಿಯಾಗಿಸಿಕೊಂಡು ರಷ್ಯಾ ಶನಿವಾರ ನಡೆಸಿದ ಡ್ರೋನ್ ದಾಳಿಯಲ್ಲಿ ಒಬ್ಬರು ಮೃತಪಟ್ಟಿದ್ದು, ಇತರ 30 ಮಂದಿ ಗಾಯಗೊಂಡಿದ್ದಾರೆ. ರಷ್ಯಾ ಉದ್ದೇಶಪೂರ್ವಕವಾಗಿ ಪ್ರಯಾಣಿಕ ರೈಲನ್ನು ಗುರಿಯಾಗಿಸಿಕೊಂಡಿದೆ ಎಂದು ಉಕ್ರೇನ್ ವಿದೇಶಾಂಗ ಸಚಿವರು ಹೇಳಿದ್ದಾರೆ. ಸುಮಿ ಪ್ರದೇಶದ ಶೋಸ್ಟ್ಕಾದಲ್ಲಿರುವ ರೈಲು ನಿಲ್ದಾಣದ ಮೇಲೆ ರಷ್ಯಾದ ಕ್ರೂರ ಡ್ರೋನ್ ದಾಳಿ ಎಂದು ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಟೆಲಿಗ್ರಾಮ್‌ನಲ್ಲಿ ಬರೆದುಕೊಂಡಿದ್ದಾರೆ. ದಾಳಿಯಿಂದ ಬೆಂಕಿಯಿಂದ ಹೊತ್ತಿ ಉರಿಯುತ್ತಿರು ಪ್ರಯಾಣಿಕರ ರೈಲಿನ ವಿಡಿಯೋವನ್ನು ಅವರು ಪೋಸ್ಟ್ ಮಾಡಿದ್ದಾರೆ. ರಷ್ಯಾ ವಿರುದ್ಧ ಬಲವಾದ ಕ್ರಮ ಕೈಗೊಳ್ಳಬೇಕು ಎಂದು ಝೆಲೆನ್ಸ್ಕಿ ಒತ್ತಾಯಿಸಿದ್ದಾರೆ. ಪ್ರತಿದಿನ ರಷ್ಯಾ ಮುಗ್ದ ಜನರ ಜೀವಗಳನ್ನು ತೆಗೆದುಕೊಳ್ಳುತ್ತಿದೆ. ಇದನ್ನು ಜಗತ್ತು ನಿರ್ಲಕ್ಷಿಸಬಾರದು. ಇದೊಂದು ಭಯೋತ್ಪಾದನಾ ಕೃತ್ಯ ಎಂದು ಕರೆದಿದ್ದಾರೆ.



ಡಾರ್ಜಿಲಿಂಗ್‌ನಲ್ಲಿ ಭಾರಿ ಮಳೆ: ಭೂಕುಸಿತ ಸಂಭವಿಸಿ 9 ಸಾವು

ಡಾರ್ಜಿಲಿಂಗ್: ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಬೆಟ್ಟಗಳಲ್ಲಿ ನಿರಂತರ ಮಳೆಯಿಂದಾಗಿ ಹಲವೆಡೆ ಭೂಕುಸಿತಗಳು ಸಂಭವಿಸಿ, ಮನೆಗಳು ಕೊಚ್ಚಿ ಹೋಗಿವೆ. ರಸ್ತೆಗಳಿಗೆ ಹಾನಿಯಾಗಿದೆ. ದೂರದ ಹಲವು ಹಳ್ಳಿಗಳ ಸಂಪರ್ಕ ಕಡಿತಗೊಂಡಿವೆ. ಸ್ಥಳೀಯ ಆಡಳಿತ, ಪೊಲೀಸರು ಮತ್ತು ವಿಪತ್ತು ಸ್ಪಂದನಾ ತಂಡಗಳಿಂದ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಡಾರ್ಜಿ ಲಿಂಗ್ ಉಪವಿಭಾಗೀಯ ಅಧಿಕಾರಿ ರಿಚರ್ಡ್ ಲೆಪ್ಚಾ ತಿಳಿಸಿದ್ದಾರೆ. ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯು ಹಾನಿಗೊಳಗಾದ ವಲಯಗಳಲ್ಲಿ ಒಂದಾದ ಮಿರಿಕ್ ಸರೋವರ ಪ್ರದೇಶದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಎನ್‌ಡಿಆರ್‌ಎಫ್ ಮತ್ತು ಜಿಲ್ಲಾಡಳಿತ ಸಂಗ್ರಹಿಸಿದ ವರದಿಗಳ ಪ್ರಕಾರ, ಇಲ್ಲಿವರೆಗೆ 9 ಮಂದಿಯ ಸಾವು ದೃಢಪಟ್ಟಿದೆ. ಆದರೆ, ಇನ್ನಿಬ್ಬರು ನಾಪತ್ತೆಯಾಗಿದ್ದಾರೆ. ಸರ್ಸಾಲಿ, ಜಸ್ಬಿರ್ಗಾಂವ್, ಮಿರಿಕ್ ಬಸ್ತಿ, ಧಾರ್ ಗಾಂವ್ (ಮೆಚಿ) ಮತ್ತು ಮಿರಿಕ್ ಸರೋವರ ಪ್ರದೇಶ ಸೇರಿದಂತೆ ಹಲವು ಸ್ಥಳಗಳಿಂದ ಸಾವುನೋವುಗಳು ವರದಿಯಾಗಿವೆ. ಧಾರ್‌ಗಾಂವ್‌ನಲ್ಲಿ ಮಣ್ಣು ಕುಸಿದು ಹಲವು ಮನೆಗಳು ನೆಲಸಮವಾಗಿವೆ.



ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 110ನೇ ಜಯಂತಿ ಆಚರಣೆ



ಮೈಸೂರಿನ ಡಾ.ಪುಟ್ಟರಾಜ ಗವಾಯಿ ಯೋಗ ಮಂದಿರದಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 110ನೇ ಜಯಂತಿ ಮಹೋತ್ಸವ ಭಾನುವಾರ ನಡೆಯಿತು.

ಮೈಸೂರು,ಅ.5(ಎಂಟಿವೈ)–ಮಹನೀಯರು ಮಾಡಿರುವ ಸಾಧನೆಗಳ ಸಾರವನ್ನು ಜೀವನದಲ್ಲಿ ಅನುಸರಿಸಿದರೇ ಒಳ್ಳೆಯ ಮಾರ್ಗದಲ್ಲಿ ಸಾಗಬಹುದು ಎಂದು ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಎಸ್.ಪಿ.ಉಮಾದೇವಿ ಅಭಿಪ್ರಾಯಪಟ್ಟರು.

ಮೈಸೂರಿನ ಜೆ.ಪಿ.ನಗರದಲ್ಲಿರುವ ಡಾ.ಪುಟ್ಟರಾಜ ಗವಾಯಿ ಯೋಗ ಮಂದಿರದಲ್ಲಿ ನಾದ ಹಂಸಿನಿ ಭಜನಾ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 110ನೇ ಜಯಂತಿ ಮಹೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಾನ್ ಸಾಧಕರು ಬದುಕಿನಲ್ಲಿ ಸಾಧನೆ ಮಾಡುವ ಸಂದರ್ಭದಲ್ಲಿ ಅರ್ಪಣಾ ಮನೋಭಾವನೆ, ತ್ಯಾಗ, ನಿಷ್ಠೆಯಿಂದ ಕಾರ್ಯ ಕೈಗೊಂಡಿರುತ್ತಾರೆ. ಆದ್ದರಿಂದ ಈ ಸಾಧನೆಗಳು ಅನುಭವದ ಪಾಠವಾಗಿವೆ. ಹೀಗಾಗಿ ಇಂದಿನ ಪೀಳಿಗೆ ಇವುಗಳನ್ನು ಅಳವಡಿಸಿಕೊಳ್ಳುವುದು ಅವಶ್ಯ ಎಂದರು.

ರಾಜೇಂದ್ರ ಶ್ರೀಗಳು ಕಾರುಣ್ಯ ಮೂರ್ತಿ, ಶಾಂತಿ ಸಹನೆ, ಮಾತೃ ಹೃದಯವುಳ್ಳವರಾಗಿದ್ದರು. ಶ್ರೀಗಳು ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಮ್ಮ ತನು–ಮನ–ಧನವನ್ನೇ ಮುಡಿಪಾಗಿಟ್ಟಿದ್ದರು. ಓದುವ ಮಕ್ಕಳ ಶ್ರೇಯೋಭಿಲಾಷೆಗಾಗಿ ಹಗಲು–ಇರುಳು ಶ್ರಮಿಸಿದರು. ವಿದ್ಯಾರ್ಥಿಗಳಿಗಾಗಿ ಎತ್ತಿನ ಗಾಡಿಯಲ್ಲಿ ಸಂಚಾರ ಮಾಡಿ, ಹಳ್ಳಿ–ಹಳ್ಳಿಗಳಲ್ಲಿ ದವಸ–ಧಾನ್ಯಗಳನ್ನು ಸಂಗ್ರಹ ಮಾಡಿದ್ದರು. ಇಂತಹ ಮಹನೀಯರು ಮನುಷ್ಯರ ಮೇಲೆ ಅಲ್ಲದೇ ಪ್ರಾಣಿ, ವಸ್ತುಗಳ ಮೇಲೂ ದಯೆ ಹೊಂದಿದ್ದರು ಎಂದು ತಿಳಿಸಿದರು.

ಇದೇ ವೇಳೆ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಮಹಿಳಾ ನಗರ ಘಟಕದ ಅಧ್ಯಕ್ಷೆ ಧನ್ಯಾ ಸತ್ಯೇಂದ್ರ ಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಉಪಾಧ್ಯಕ್ಷ ಎಂ.ಚಿನ್ನಸ್ವಾಮಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಾದ ಹಂಸಿನಿ ಭಜನಾ ಸಂಘದ ಗೌರವಾಧ್ಯಕ್ಷೆ ಉಮಾ ಮಹದೇವಸ್ವಾಮಿ ಶ್ರೀಗಳಿಗೆ ನುಡಿ–ನಮನ ಸಲ್ಲಿಸಿದರು. ಸಂಘದ ಅಧ್ಯಕ್ಷೆ ಮಂಜುಳಾ ಶಿವಕುಮಾರಸ್ವಾಮಿ ಸೇರಿದಂತೆ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ತಳ ಸಮುದಾಯ ಜನರಿಗೆ ಶ್ರಮಿಸಿದ ಹಿರಿಯರಿಗೆ ದೇವರಾಜ ಅರಸು, ಹಾವನೂರು ಪ್ರಶಸ್ತಿ

ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬಿ.ಶಿವಸ್ವಾಮಿ ಘೋಷಣೆ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳ ಸಭೆ ನಡೆಯಿತು.

ಮೈಸೂರು, ಅ.5 (ಎಂಟಿವೈ)–ಮೈಸೂರು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಪ್ರಥಮ ವಾರ್ಷಿಕೋತ್ಸವ ಸಮಾರಂಭದಲ್ಲಿ ತಳಸಮುದಾಯದ ಜನರ ಏಳಿಗೆಗೆ ಶ್ರಮಿಸಿದ ಹಿರಿಯರನ್ನು ಗುರುತಿಸಿ ದೇವರಾಜ ಅರಸು, ಹಾವನೂರು ಪ್ರಶಸ್ತಿ ನೀಡಿ, ಗೌರವಿಸಲಾಗುವುದು ಎಂದು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹಾಗೂ ರಾಜ್ಯ ಕೆಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ತಿಂಗಳ ಕೊನೆ ವಾರ ಅಥವಾ ನವೆಂಬರ್ ತಿಂಗಳಿನಲ್ಲಿ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಪ್ರಥಮ ವಾರ್ಷಿಕೋತ್ಸವ ಸಮಾರಂಭ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ಧರಾಮಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಇದೆ ವೇಳೆ ಕರ್ನಾಟಕದಲ್ಲಿ ಉನ್ನತ ಶಿಕ್ಷಣದ ಬೆಳವಣಿಗೆಗೆ ವಸತಿ ನಿಲಯಗಳ ಮಹತ್ವ ಮತ್ತು ಪ್ರಾಮುಖ್ಯತೆ ಕುರಿತ ವಿಚಾರ ಸಂಕಿರಣ ಆಯೋಜಿಸಲು ಉದ್ದೇಶಿಸಲಾಗಿದೆ ಎಂದರು.

ದೇವರಾಜ ಅರಸು ಮತ್ತು ಎಲ್.ಜಿ.ಹಾವನೂರರ ಜೀವನ ಚರಿತ್ರೆಯ ಬಗ್ಗೆ ವಸ್ತುಪ್ರದರ್ಶನ ಏರ್ಪಡಿಸಲಾಗುತ್ತದೆ. ಸಂಘದ ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಲಾಗುವುದು. ಎಂಬಿಬಿಸ್ ಓದುತ್ತಿರುವ ಬಡಕುಟುಂಬದ ಐವರು ವಿದ್ಯಾರ್ಥಿಗಳಿಗೆ ಶುಲ್ಕ ಕಟ್ಟಲು ಪ್ರೋತ್ಸಾಹ ಧನ ವಿತರಿಸಲಾಗುವುದು. ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಅಡುಗೆಯವರಿಗೆ ಅಭಿನಂದನೆ ಮಾಡಲಾಗುವುದು. ಇದಕ್ಕೆಲ್ಲಾ ಎಲ್ಲಾ ಹಿರಿಯ ವಿದ್ಯಾರ್ಥಿಗಳ ಸಹಕಾರ, ಸಹಾಯ ಸಲಹೆ ನೀಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಹಾಗು ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಆರ್.ಮಹಾದೇವ, ಮಾತನಾಡಿ ಕಳೆದ ಭಾರಿಯಂತೆ ಈಸಾರಿಯೂ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಬೇಕು ಎಂದರು.

ಸಭೆಯಲ್ಲಿ ಕಾರ್ಯದರ್ಶಿ ರಾಜೇಶ್‌ಗೌಡ, ಸಂಘಟನಾ ಕಾರ್ಯದರ್ಶಿ ರಮೇಶ್ ಗೌಡ, ಖಜಾಂಚಿ ರುಕ್ಮಾಂಗದ, ಅಹಿಂದ ಜವರಪ್ಪ ಹಾಗು ಸಂಘದ ಸದಸ್ಯರು ಹಾಜರಿದ್ದರು.

ಜಾತಿಗಣತಿಗೆ ಒಂದು ತಾಲೂಕು ಶಿಕ್ಷಕರನ್ನು ಮತ್ತೊಂದು ತಾಲೂಕಿಗೆ ನಿಯೋಜನೆ

ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಆಕ್ಷೇಪ

ಮೈಸೂರು, ಅ.5(ಎಂಕೆ)–ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗವು ನಡೆಸುತ್ತಿರುವ ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಒಂದು ತಾಲೂಕಿನ ಶಿಕ್ಷಕರನ್ನು ಮತ್ತೊಂದು ತಾಲೂಕಿಗೆ ನಿಯೋಜಿಸಿರುವುದು ಅವೈಜ್ಞಾನಿಕ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಎಂಎಲ್ಸಿ ಸದಸ್ಯ ಕೆ.ವಿವೇಕಾನಂದ ಅವರು ಇದನ್ನು ಕೂಡಲೇ ಸರಿಪಡಿಸಬೇಕು ಎಂದು ಆಗ್ರಹಿಸಿದ್ದಾರೆ.



ಕೆ.ವಿವೇಕಾನಂದ

ಮೈಸೂರು ಜಲದರ್ಶಿನಿ ಅತಿಥಿಗೃಹದಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರತಿನಿತ್ಯ ಇಂತಿಷ್ಟು ಮನೆಗಳ ಸಮೀಕ್ಷೆ ನಡೆಸಲೇ ಬೇಕೆಂದು ಶಿಕ್ಷಕರಿಗೆ ಟಾರ್ಗೆಟ್ ನೀಡಿರುವುದು ಖಂಡನೀಯ. ಇದರಿಂದ ಶಿಕ್ಷಕರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ. ಆಯಾ ತಾಲೂಕಿನ ಶಿಕ್ಷಕರನ್ನು ಆಯಾ ತಾಲೂಕಿನ ಸಮೀಕ್ಷೆಗೆ ನಿಯೋಜಿಸದೆ ಬೇರೆ ತಾಲೂಕುಗಳಿಗೆ ನಿಯೋಜಿಸಿರುವುದು ಅವೈಜ್ಞಾನಿಕ. ಇದರಿಂದ ಶಿಕ್ಷಕರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಅಲ್ಲದೆ ಜಿಲ್ಲಾಡಳಿತ 600 ಶಿಕ್ಷಕರಿಗೆ ನೋಟಿಸ್ ನೀಡಿ, 10–12 ಮಂದಿಯನ್ನು ಅಮಾನತ್ತುಗೊಳಿಸಿ ದಬ್ಬಾಳಿಕೆ ನಡೆಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಸಿಲಿನ ಪ್ರಮಾಣ ಹೆಚ್ಚಾಗಿದ್ದು, ಹೃದ್ರೋಗ, ಮಧುಮೇಹ, ರಕ್ತದೊತ್ತಡ, ಕ್ಯಾನ್ಸರ್ ಕಾಯಿಲೆಗೆ ತುತ್ತಾಗಿರುವ ಶಿಕ್ಷಕರನ್ನೂ ಬಿಡದೇ ಸಮೀಕ್ಷೆಗೆ ನಿಯೋಜಿಸಿ ಅವರ ಜೀವದ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆ. ನಿವೃತ್ತಿ ವಯಸ್ಸಿನ ಶಿಕ್ಷಕರಿಗೆ ಮೊಬೈಲ್ ಬಳಕೆ ಮಾಡಲು ಬರುವುದಿಲ್ಲ. ನೆಟ್‌ವರ್ಕ್ ಸಮಸ್ಯೆಯಿಂದ ಶಿಕ್ಷಕರು ಹೈರಾಣಾಗುತ್ತಿದ್ದಾರೆ ಎಂದು ವಿವೇಕಾನಂದ ಮರುಕ ವ್ಯಕ್ತಪಡಿಸಿದರು.

ಸೂಕ್ತ ಪರಿಹಾರಕ್ಕೆ ಆಗ್ರಹ: ಸಮೀಕ್ಷೆಯಲ್ಲಿ ಕೆಲವರು ಸತ್ಯ ಹೇಳುತ್ತಿಲ್ಲ. 60 ಪ್ರಶ್ನೆಗಳಿಗೆ ಉತ್ತರ ನೀಡಬೇಕಿದೆ. ಇದರಿಂದ ಶಿಕ್ಷಕರು ಗುರಿ ತಲುಪಲು ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳಿಂದ ಒತ್ತಡಕ್ಕೆ ಸಿಲುಕುತ್ತಿರುವ ಶಿಕ್ಷಕರರು ನನ್ನ ಗಮನಕ್ಕೆ ತರಬೇಕು. ಸಮೀಕ್ಷೆ ನಡೆಸಿ ಹಿಂದಿರುವಾಗ ವಾಹನ ಅಪಘಾತದಲ್ಲಿ ಮೃತಪಟ್ಟಿರುವ ಶಿಕ್ಷಕಿ ಕುಟುಂಬಕ್ಕೆ ಸೂಕ್ತ ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

ಪಿಹೆಚ್.ಡಿ ಪದವಿ

ಮೈಸೂರು: ಡಾ.ಎಂ.ಇಂದಿರಾ ಅವರ ಮಾರ್ಗದರ್ಶನದಲ್ಲಿ ಸಿ.ಎನ್.ಚೈತ್ರ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಆಡಳಿತ ನ್ಯಾಯಾಧೀಕರಣ ತರಬೇತಿ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿಗೆ ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲು ಪರಿಶಿಷ್ಟ ಪಂಗಡದ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು www.tw.kar.nic.inನಲ್ಲಿ ಅ.31ರವರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ 0821–2427140 ಹಾಗೂ ಮೊ.9742588829 ಸಂಪರ್ಕಿಸಬಹುದು.